ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು

ನಿಬಂಧಕಾರರು

ನಾಗರಾಜ .ವೈ
ನೋಂದಣಿ ಸಂಖ್ಯೆ – KVTM/K 140901030088
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ
ಕನ್ನಡ ಸಹಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

1201

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

2014–15

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

SIND-1201 1201

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

1201

1201

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು

ನಿಬಂಧಕಾರರು

ನಾಗರಾಜ .ವೈ

ನೋಂದಣಿ ಸಂಖ್ಯೆ – KVTM/K 140901030088
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ

ಕನ್ನಡ ಸಹಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

2014–15

AKSHARA GRANTHALAYA
ACC.NO. 131609

120

8K5.6
JAN
131609

ಅಭ್ಯರ್ಥಿಯ ಘೋಷಣಾ ಪತ್ರ

"ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮ ಸಂಖ್ಯೆ: 140901030088ರ ವಿದ್ಯಾರ್ಥಿಯಾದ ನಾನು ೨೦೧೪-೧೫ನೇ ಸಾಲಿನ ಪರೀಕ್ಷೆಗಾಗಿ **ಡಾ. ಡಿ.ಸುಮಂಗಳ ಕನ್ನಡ ಸಹಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೯-೦೭-೨೦೧೫

(ನಾಗರಾಜ.ವೈ)
೨೦೧೪-೧೫ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರ ಪ್ರಮಾಣಪತ್ರ

೨೦೧೪-೧೫ನೆಯ ಸಾಲಿನಲ್ಲಿ ಕ್ರಮ ಸಂಖ್ಯೆ: KVTM/K 140901030088ರ ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ನಾಗರಾಜ.ವೈ** ಅವರು ನನ್ನ ಮಾರ್ಗದರ್ಶನದಲ್ಲಿ **"ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಳಿಗಾಗಿ ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.


(ಡಾ. ಡಿ.ಸುಮಂಗಳ)
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಸ್ಥಳ : ಮೈಸೂರು
ದಿನಾಂಕ: ೨೯-೦೭-೨೦೧೫

ಪರಿವಿಡಿ

ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು

* * * * *



ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಶ್ರೀಯುತ ದೇಜಗೌ ಅವರ ಅನುಭವ ವ್ಯಾಪ್ತಿ ಗಹನವಾದದ್ದು. ಅವುಗಳಲ್ಲಿ ಶಿಕ್ಷಣವನ್ನು ಕುರಿತಂತೆ ಮಂಡಿಸಿರುವ ವಿಚಾರಧಾರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಳಕಂಡಂತೆ ವಿಂಗಡಿಸಿಕೊಂಡು ಅಧ್ಯಯನ ನಡೆಸಿದ್ದೇನೆ.

- ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು
- ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ ಕುರಿತಾದ ಚಿಂತನೆಗಳು
- ಉನ್ನತ ಶಿಕ್ಷಣ ಮತ್ತು ದೇಜಗೌ ಅವರ ಶೈಕ್ಷಣಿಕ ಚಿಂತನೆಗಳು
- ದೇಜಗೌ ಅವರ ಶೈಕ್ಷಣಿಕ ಹೋರಾಟಗಳು
- ಆಡಳಿತ ತಜ್ಞರಾಗಿ ದೇಜಗೌ
- ಮಾನವೀಯ ಮೌಲ್ಯಗಳ ಚಿಂತಕರಾಗಿ ದೇಜಗೌ
- ಜಾನಪದ ಚಿಂತಕರಾಗಿ ದೇಜಗೌ
- ಕನ್ನಡದ ಶಾಸ್ತ್ರೀಯ ಭಾಷೆಯ ಅಂಕಿತಕ್ಕಾಗಿ

ಇವೆಲ್ಲವುಗಳನ್ನು ಸಮಗ್ರವಾಗಿ ಮತ್ತು ವೈಜ್ಞಾನಿಕವಾಗಿ ಅವರ ಶೈಕ್ಷಣಿಕ ಜೀವನ ದೃಷ್ಟಿಕೋನಗಳನ್ನು ಚಿಂತನೆಗಳನ್ನು ಅನಾವರಣಗೊಳಿಸುವುದು ಪ್ರಸ್ತುತ ನಿಬಂಧದ ವ್ಯಾಪ್ತಿ ಮತ್ತು ಉದ್ದೇಶವಾಗಿದೆ.

ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳನ್ನು ಗಮನಿಸಿದಾಗ ಇನ್ನು ಹಲವಾರು ಕ್ಷೇತ್ರಗಳಲ್ಲಿ ದೇ.ಜವರೇಗೌಡರು ಚಿಂತಿಸಿರುವುದನ್ನು ನೋಡುವುದಾದರೆ ಮಾನವೀಯ ಮೌಲ್ಯಗಳ ಚಿಂತಕರಾಗಿ ದೇಜಗೌರವರು ಯಾವ ರೀತಿ ಚಿಂತನೆ ಮಾಡಿದ್ದಾರೆಂದರೆ ಇಂದಿನ ಆಧುನಿಕ ಜಗತ್ತಿನಲ್ಲಿ ದಿನೇ ದಿನೇ ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದು, ಸಮಾಜ ಅಧೋಗತಿಗೆ ಇಳಿಯುತ್ತಿರುವುದರ ಬಗ್ಗೆ ದೇಜಗೌ ಅವರಿಗೆ ಬೇಸರವಿದೆ. ಜಾಗತೀಕರಣ, ಖಾಸಗೀಕರಣ ಉದಾರೀಕರಣ ನೀತಿಯಿಚಿದಾಗಿ ಮನುಷ್ಯ ಹಣಕ್ಕೆ ಬೆಲೆಕೊಡುತ್ತಿದ್ದಾನೆಯೇ ಹೊರತು, ಮಾನವೀಯ ಮೌಲ್ಯಗಳಿಗಲ್ಲ, ಮಾನವನ

ಬೃಹಜ್ಜೀವನ ಸಕಲ ವ್ಯಾಪಾರ ವ್ಯವಹಾರಗಳು ಆತನ ಧೀಶಕ್ತಿ ಚಿದ್ವಿಲಾಸಗಳನ್ನವಲಂಬಿಸಿದೆಯೆಂದು ದೇಜಗೌ ಹೇಳುತ್ತಾರೆ.

ಮನುಷ್ಯನ ಹೃದಯದಲ್ಲಿರುವ ರಾಗ ದ್ವೇಷಾದಿ ಭಾವನೆಗಳನ್ನು ಪರಿಷ್ಕಾರಗೊಳಿಸುವ ಕಲೆ ಸಾಹಿತ್ಯಕ್ಕಿದೆಯೆಂದು ದೇಜಗೌ ತಿಳಿಸುತ್ತಾರೆ. ಆನಂದವೇ ಜೀವನದ ಪರಮಗುರಿ, ವಿಶೇಷವಾದ ವಿದ್ವತ್ತು ನಿರಂತರ ಆಲೋಚನೆ, ದೀರ್ಘತಪಸ್ಸುಗಳ ಮೂಲಕ ಉತ್ತಮವಾದ ಜೀವನವನ್ನು ಮಾನವ ರೂಪಿಸಿಕೊಳ್ಳಬೇಕು.

ಸಾಹಿತ್ಯವು ಓದುಗನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿ ಅವರ ಮನಸ್ಸಿನಲ್ಲಿ ಮಾನವೀಯ ಮೌಲ್ಯಗಳು ಮೂಡುವಂತೆ ಮಾಡುತ್ತದೆಂದು ದೇಜಗೌ ತಿಳಿಸುತ್ತಾರೆ.

ಸಮಾಜದ ಜನಸಮುದಾಯವು ದೀನರ ಅಶಕ್ತರ ಮೇಲೆ ಸಹಾನುಭೂತಿ, ಕರುಣೆ ಇಟ್ಟುಕೊಳ್ಳಬೇಕೆಂದು ಅವರ ನಿಲುವು.

ಅಧ್ಯಾಯ ಎರಡು

ದೇಜಗೌರವರ ಪರಿಚಯ ಮತ್ತು ವ್ಯಕ್ತಿ ವಿಶೇಷ

ನಿಗೂಢ ಶಕ್ತಿಯ ಅಂತರಂಗದ ಆಭೀಪ್ಸೆಗಳು ಅನಂತ. ಅದು ತನ್ನ ಕಾರ್ಯಸಾಧನೆಗಾಗಿ ರಚಿಸುವ ವ್ಯೂಹ ವಿಸ್ಮಯ ಹುಟ್ಟಿಸುತ್ತದೆ. ತನ್ನ ಅಂತರಂಗದ ಅಭಿವ್ಯಕ್ತಿಗೆ ಆ ನಿಗೂಢಶಕ್ತಿ ಮನುಷ್ಯನನ್ನು ನಿಯೋಜಿಸಿ ಅವನನ್ನು ಸಾಧನವಾಗಿ ಬಳಸಿಕೊಳ್ಳುತ್ತಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ನಾಡುನುಡಿಯ ಮತ್ತು ವಿಶ್ವಮಾನವತೆಯ ಹೊಸ ಆವಿಷ್ಕಾರಕ್ಕಾಗಿ ಅದು ಇಬ್ಬರು ಮಹಾನ್ ವ್ಯಕ್ತಿಗಳನ್ನು ನಿಯೋಜಿಸಿತು. ಒಂದು ಶಕ್ತಿ ಮಲೆನಾಡಿನ ನಿಸರ್ಗ ಸೌಂದರ್ಯದ ರಮಣೀಯತೆಯಲ್ಲಿ ಜನಿಸಿದರೆ, ಮತ್ತೊಂದು ಶಕ್ತಿ ಬಯಲುನಾಡಿನ ಬಡತನದ ಬೇಗುದಿಯ ಗುಡಿಸಿಲಿನಲ್ಲಿ ಜನಿಸಿತು. ಅಂತ ಎರಡು ಮಹಾನ್ ಚೇತನಗಳೇ ಕುವೆಂಪು ಮತ್ತು ದೇಜಗೌ.

ರಾಷ್ಟ್ರಕವಿ ಕುವೆಂಪು ಅವರು ಸಾಹಿತ್ಯದ ಮುಖಾಂತರ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಹೆಸರಾದರೆ ದೇಜಗೌ ಸಾಹಿತಿಯಾಗಿ, ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ, ಆಡಳಿತಗಾರರಾಗಿ, ಸಂಘಟಕರಾಗಿ, ಕವಿಗಳಾಗಿ ಚಳುವಳಿಗಾರರಾಗಿ ಇನ್ನೂ ಮುಂತಾದ ನಾನಾ ಮುಖಗಳಲ್ಲಿ ಕಾರ್ಯನಿರ್ವಹಿಸಿ ತಮ್ಮದೇ ಆದ ಕೊಡುಗೆಯನ್ನು ಈ ನಾಡುನುಡಿಗೆ ಕೊಟ್ಟಿದ್ದಾರೆ. ನಮ್ಮ ನಾಡಿನ ವಿದ್ವಾಂಸರಲ್ಲಿ ಒಬ್ಬರಾಗಿರುವ ದೇಜಗೌ ಅವರು ಕನ್ನಡ ಭಾಷೆ ಸಾಹಿತ್ಯ, ಸಂಸ್ಕೃತಿಗಾಗಿ ಸರ್ವತೋಮುಖ ಬೆಳವಣಿಗೆಗಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ದೇಜಗೌ ಅವರ ಪೂರ್ಣ ಹೆಸರು ದೇ.ಜವರೇಗೌಡ ಇವರ ಜನನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮುದಿಗೆರೆಯಲ್ಲಿ ಜುಲೈ ೬, ೧೯೧೮ರಂದು ಚಕ್ಕೆರೆ ಎಂಬ ಕುಗ್ರಾಮದಲ್ಲಿ ಜನಿಸಿದರು. ಇದು ಚನ್ನಪಟ್ಟಣದಿಂದ ಸುಮಾರು ನಾಲ್ಕೂವರೆ ಮೈಲಿದೂರದಲ್ಲಿದೆ. ಇವರ ಮನೆ ದಾರಿದ್ರ್ಯ, ಅಜ್ಞಾನ, ಅಸೌಕರ್ಯ, ಮುಗ್ದತೆ, ಅಸಹಾಯಕತೆಗಳ ಬೀಡಾಗಿತ್ತು. ತಂದೆ ದೇವೇಗೌಡರಿಗೆ ಮಗ ಕಣ್ಣು ಬಿಡುವ ಹೊತ್ತಿಗೆ

ಯಾವುದೋ ಕಾರಣದಿಂದ ಕಣ್ಣು ಕುರುಡಾಗಿತ್ತು. ಆರ್ಥಿಕ ಬೆಂಬಲವಿಲ್ಲದೆ ಮನೆಯಲ್ಲಿ ದುಡಿಯುವವರಿಲ್ಲದೆ ಆ ಮನೆಯಲ್ಲಿ ಕಷ್ಟಕಾರ್ಪಣ್ಯಗಳೇ ಅಧಿಕವಾಗಿತ್ತು. ಉತ್ತಮ ಆಹಾರವಿಲ್ಲದೆ, ಮೈಮೇಲೆ ಸರಿಯಾದ ಬಟ್ಟೆ ಇಲ್ಲದೆ ಕಷ್ಟಕಾರ್ಪಣ್ಯಗಳಿಂದ ಕೂಡಿದ್ದ ಅವರ ಈ ಜೀವನದ ಕಾರಣದಿಂದ ಬೇರೆಯವರ ಕರುಣೆಯ ಕೂಸಾಗಿ ದೇಜಗೌ ಬೆಳೆಯುತ್ತಾರೆ. ಹೀಗಾಗಿ ಅಕ್ಷರಶಃ ಮಣ್ಣಿನ ಮಗನಾಗಿ ಬೆಳೆದು ಬಂದಿರುವುದನ್ನು ನಾವು ನೋಡಬಹುದಾಗಿದೆ.

ದೇವೇಗೌಡರು ಹಣಕಾಸಿನ ಅಭಾವದಿಂದ ತಮ್ಮ ಹಿರಿಯ ಮಗನನ್ನು ಮಾತ್ರ ಶಾಲೆಗೆ ಕಳುಹಿಸಿ ಜವರೇಗೌಡರನ್ನು ಆಡುಕಾಯುವ ಕೆಲಸಕ್ಕೆ ನೇಮಿಸುತ್ತಾರೆ. ಅದರಿಂದಾದರೂ ಮೂರುನಾಲ್ಕು ಕಾಸು ಬಂದರೆ ಜೀವನ ನಡೆಸಬಹುದು ಎಂಬ ದೃಷ್ಟಿ ಅವರದು. ಇಂಥ ಸ್ಥಿತಿಯಿಂದ ಬಂದ ಜವರೇಗೌಡರು ಮುಂದೆ ಬೆಳೆದ ರೀತಿ ಒಂದು ಪವಾಡವೆಂದೇ ಕರೆಯುವುದರಲ್ಲಿ ಅಚ್ಚರಿಯಿಲ್ಲ.

ಬಾಲಕ ಜವರೇಗೌಡರಿಗೆ ಆರು ಏಳು ವರ್ಷಗಳಿದ್ದಿರಬೇಕು, ಬಾಲ್ಯ ಸಹಜವಾದ ಕುತೂಹಲ, ಅಕ್ಷರಭ್ಯಾಸ ಮಾಡಬೇಕೆಂಬ ಅದಮ್ಯ ಬಯಕೆ ಮನಸ್ಸಿನ ಎಲ್ಲೋ ಒಂದು ಮೂಲೆಯಲ್ಲಿ ಯೋಚಿಸುತ್ತಿತ್ತು. ಅವರ ಬಾಲ್ಯದ ಮತ್ತೊಂದು ಆಕಾಂಕ್ಷೆ ಎಂದರೆ ತಮ್ಮಲ್ಲಿಯೇ ಇದ್ದ ನಾಲ್ಕಾರು ಕುರಿಗಳನ್ನು ಚೆನ್ನಾಗಿ ಮೇಯಿಸಿ ಒಂದು ದೊಡ್ಡ ಮಂದೆಯನ್ನಾಗಿ ಪರಿವರ್ತಿಸಿ ಸ್ವತಂತ್ರವಾಗಿ ಟಗರೊಂದನ್ನು ಸಾಕಬೇಕೆಂಬುದು.

ಶಾಲೆಯ ಮಕ್ಕಳು ಓದುವುದನ್ನು ಕಂಡು ಜವರೇಗೌಡರು ಆಡುಗಳನ್ನು ಬೇಲಿ ಮೇಯಲು ಬಿಟ್ಟು ಪಾಠಶಾಲೆಯೊಳಗೆ ಹಣಿಕಿಕ್ಕತೊಡಗಿದರು. ಅಲ್ಲಿ ಏನೋ ಸಂತೋಷ ಸಂಭ್ರಮ, ಬೇಗಬೇಗನೆ ಅಕ್ಷರಗಳ ಕಲಿಕೆ, ಜಾಣ್ಮೆಯ ಪ್ರದರ್ಶನ ಬರಬರುತ್ತಾ ಮೇಷ್ಟರಿಗೆ ಬಹಳ ಹತ್ತಿರವಾಗುತ್ತ ಬಂದರು. ಒಂದು ದಿನ ಬೇಲಿ ಮೇಯಲಿಕ್ಕೆ ಬಿಟ್ಟ ಆಡುಗಳು ಯಾರದೋ ಹೊಲ ಮೇಯ್ದ ಬಗೆಗೆ ದೂರು ಅವರ ತಂದೆಗೆ ಮುಟ್ಟಿತು. ತೋಟದ ಮಾಲೀಕರಿಂದ ದೇವೇಗೌಡರಿಗೆ ತರಾಟೆ ಬೈಗುಳಗಳ ಸುರಿಮಳೆ. ಇದರಿಂದ ಕುಪಿತಗೊಂಡ ತಂದೆ ಶಾಲೆಯ ಒಳಗಡೆ ಮುಗ್ಧ ಬಾಲಕ ಜವರೇಗೌಡರು ಅಕ್ಷರ ಕಲಿಯುತ್ತಿದ್ದಾಗ ಧರಧರನೆ ಎಳೆದುಕೊಂಡುಬಂದು "ಬಡ್ಡಿಮಗನೆ ನಿನ್ನ ಇಸ್ಕೂಲಿಗೆ ಹೋಗು ಅಂದೋರು ಯಾರು? ಎನ್ನುತ್ತ ಹಿಪ್ಪನೇರಳೆ ಕಡ್ಡಿಯ ರುಚಿಯನ್ನು ತೋರಿಸಿದರು.

ಇಂತಹ ಕರುಣಾಜನಕವಾದ ದೃಶ್ಯವನ್ನು ಕಣ್ಣಾರೆ ನೋಡುತ್ತಿದ್ದ ಶಾಲೆಯ ಮೇಷ್ಟ್ರು ವೆಂಕಟರಾಮಯ್ಯಂಗಾರ್ ಬಹಳ ಸಂಕಟಪಟ್ಟು ನಡೆದಿದ್ದನ್ನು ಮುಖ್ಯೋಪಾಧ್ಯಾಯರಿಗೆ ವಿವರಿಸಿಹೇಳಿ ದೇವೇಗೌಡರಿಗೆ ಬುದ್ದಿಹೇಳುವಂತೆ ಸೂಚಿಸಿದರು.

ಮೊದಲೇ ಕೋಪದಿಂದ ತತ್ತರಿಸಿದ್ದ ದೇವೇಗೌಡರು ಮುಖ್ಯೋಪಾಧ್ಯಾಯರಿಂದ ನನಗೆ ಬೈಗುಳ ತಿನ್ನಿಸದನಲ್ಲಾ ಎಂದು ಆಕ್ರೋಶಗೊಂಡು ಜವರೇಗೌಡರಿಗೆ ಹೊಡೆದಿದ್ದರಿಂದ ಮೈಮೇಲೆ ಬಾಸುಂಡೆಗಳು ಮೂಡಿದವು. ಆ ಹುಡುಗನ ಅಸಹಾಯಕ ಸ್ಥಿತಿಯನ್ನು ಕೇಳಿದ ಮುಖ್ಯೋಪಾಧ್ಯಾಯರ ಕರುಳು ಮರುಗಿತು. ಏಟುತಿಂದು ನೋವಿನಿಂದ ಮುಗ್ಧಬಾಲಕ ಚೀರಾಡುತ್ತಿರುವ ದೃಶ್ಯವನ್ನು ಹರಿದ ಅಂಗಿಯಲ್ಲಿ ಮಗು ಇರುವ ಸ್ಥಿತಿಕಂಡು ಧಾವಿಸಿ ಬಂದು ದೇವೇಗೌಡರ ಕೈಯಿಂದ ಬಾಲಕನನ್ನು ಬಿಡಿಸಿ ಕರೆದೊಯ್ಯುತ್ತಾರೆ. ಅಂದಿನ ಮುಖ್ಯೋಪಾಧ್ಯಾಯರು ಇನ್ನಾರು ಅಲ್ಲ ಹಳೆ ಮೈಸೂರಿನ ರಾಜಕೀಯ ಹುಲಿ ಎಂದೇ ಹೆಸರಾದ ಎಚ್.ಕೆ.ವೀರಣ್ಣಗೌಡರು. ಉಪಧ್ಯಾಯರಿಂದ ವಿವರವನ್ನು ತಿಳಿದುಕೊಂಡ ಮೇಲಂತೂ ದೇವೇಗೌಡರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. 'ಏನಯ್ಯ ಗೌಡ ನಿನಗೇನು ಸ್ವಲ್ಪವೂ ಕರುಣೆ ಇಲ್ಲವೆ? ಆ ಹುಡುಗನನ್ನು ದನ ಹೊಡೆಯುವ ಹಾಗೆ ಹೊಡೆದಿರುವೆಯಲ್ಲಾ. ನಿಮ್ಮ ಹುಡುಗ ತಾನಾಗಿಯೇ ಸ್ಕೂಲಿಗೆ ಬಂದರೆ ನಿನಗೆ ಆಗುವುದಿಲ್ಲ. ಇದು ಸರಿಯೆ?" ಎಂದು ಬಯ್ದು ಬುದ್ದಿಹೇಳುತ್ತಾರೆ.

ಆಗ ದೇವೇಗೌಡರು ಅಸಹಾಯಕತೆಯಿಂದ "ಒಬ್ಬ ಮಗನು ಆಗ್ಲೇ ಬರ್ತಾ ಇದ್ದಾನೆ ಸ್ವಾಮಿ, ಇನ್ನೊಬ್ಬನ ಓದಿಸ್ಲಿಕ್ಕೆ ನನಗೆ ಚೈತನ್ಯ ಇದೆಯೇ? ಇವರ ಬಟ್ಟೆ ಪುಸ್ತಕಕ್ಕೆ ನಾನು ಎಲ್ಲಿಂದ ದುಡ್ಡು ತರಲಿ? ನಾನು ಕಣ್ಣು ಕಾಣದ ಬಡವ. ನನ್ಕೈಲಿ ಕೂಲಿನಾಲಿ ಮಾಡೋಕಾಕ್ತದೆಯೋ? ಈಗ ನನಗೆ ಬರೋ ಆದಾಯ ಒಪ್ಪೊತ್ತಿಗೆ ಊಟಕ್ಕೆ ಸಾಲೊಲ್ಲ. ಇವನು ಒಂದೆರಡು ಆಡು ಮೇಯಿಸಿಕೊಂಡು ಬಂದರೆ ಹೇಗೋ ಖರ್ಚು ಕಳೀತದೆ' ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ. ಆಗ ಎಚ್.ಕೆ.ವೀರಣ್ಣಗೌಡರು ದೇವೇಗೌಡರಿಗೆ ಹುಡುಗನ ಬಟ್ಟೆಬರೆ, ಪಠ್ಯಪುಸ್ತಕ ಎಲ್ಲವನ್ನು ನೋಡಿಕೊಳ್ಳುವುದಾಗಿ ಹೇಳುತ್ತಾರೆ. ಸಮ್ಮತಿಸದೆ ಇದ್ದಾಗ ಹುಡುಗನನ್ನು ಶಾಲೆಗೆ ಕಳುಹಿಸದಿದ್ದರೆ, ಸರ್ಕಾರದಿಂದ ಜುಲ್ಮಾನೆ ಹಾಕಿಸುವುದಾಗಿ ಬೆದರಿಕೆಯನ್ನು ಹಾಕಿದ ಮೇಲೆ ಬೇರೆ ದಾರಿಯೇ ಇಲ್ಲದೆ ಒಪ್ಪಿಕೊಳ್ಳುತ್ತಾರೆ ದೇವೇಗೌಡ. ಅಂದಿನ ದಿನದಲ್ಲಿ ಶ್ರೀ ಎಚ್.ಕೆ.ವೀರಣ್ಣಗೌಡರು ಚಕ್ಕೆರೆಯ

ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಇಲ್ಲದೆ ಹೋಗಿದ್ದರೆ ಏನಾಗುತ್ತಿದ್ದರೋ ಅಂದು ವೀರಣ್ಣಗೌಡರು ಜವರೇಗೌಡರನ್ನು ಮೂರನೆಯ ತರಗತಿಗೆ ಸೇರಿಸಿಕೊಂಡು ವಿದ್ಯಾಭ್ಯಾಸ ಮುಂದುವರೆಸಲು ಅನುವು ಮಾಡಿಕೊಡುತ್ತಾರೆ.

ಅನಂತರ ಬಡತನ, ಹಸಿವು, ಅರೆಹೊಟ್ಟೆಯಲ್ಲಿ ವಿದ್ಯೆ ಕಲಿತು ಹನ್ನೆರಡನೇ ವಯಸ್ಸಿನಲ್ಲಿ ಜವರೇಗೌಡರು ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಕಟ್ಟಿ ತೇರ್ಗಡೆಯಾಗುತ್ತಾರೆ. ಅಂದೇ ಅವರಿಗೆ ಏಕಾಏಕಿ ಶಾಲೆ ಮುಖ್ಯೋಪಾಧ್ಯಾಯರಿಂದ ಕರೆಬರುತ್ತದೆ.

ಆದರೆ ಅದನ್ನು ಬಿಟ್ಟು ಸ್ಕಾಲರ್‌ಶಿಪ್‌ನಿಂದ ಓದನ್ನು ಮುಂದುವರಿಸಿ ಹೈಸ್ಕೂಲ್ ಓದಿಗೆ ಚನ್ನಪಟ್ಟಣಕ್ಕೆ ಬರುತ್ತಾರೆ. ನಂತರ ಇವರ ಹೆಚ್ಚಿನ ವಿದ್ಯಾಭ್ಯಾಸ ಬೆಂಗಳೂರು ಮೈಸೂರಿನಲ್ಲಿ ನಡೆಯುತ್ತದೆ. ಅಧ್ಯಯನ ಸಂದರ್ಭದಲ್ಲಿ ಯಾರೊಡನೆಯೂ ಬೆರೆಯದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸದೆ ಕೇವಲ ಕಾಲೇಜು ಲೈಬ್ರರಿಗಳಲ್ಲಿ ನಿರಂತರವಾಗಿ ಓದುತ್ತಿದ್ದರು. ಆಗ ಅವರಿಗೆ ವಾಚನಾಲಯದಲ್ಲಿ ಓದುತ್ತಿದ್ದಾಗ ಆಕಸ್ಮಿಕವಾಗಿ "ಇಂಗ್ಲಿಷ್ ತ್ರೈಮಾಸಿಕ ತ್ರಿವೇಣಿ' ಅವರ ಕಣ್ಣಿಗೆ ಬಿದ್ದಿತು. ಅದರಲ್ಲಿ ಕುವೆಂಪು ಅವರನ್ನು ಕುರಿತ ಲೇಖನ ಇವರ ಮನಸೆಳೆಯಿತು.

ಅಂದಿನಿಂದಲೇ ಕುವೆಂಪು ಅವರನ್ನು ತಮ್ಮ ಆರಾಧ್ಯದೈವವೆಂದು ಒಪ್ಪಿ ಸ್ವೀಕರಿಸುತ್ತಾರೆ. ಪ್ರಬುದ್ಧ ಕರ್ನಾಟಕದಲ್ಲಿ ಬಂದ ಕುವೆಂಪು ಅವರ ಭಾವಚಿತ್ರವನ್ನು ಯಾರಿಗೂ ಕಾಣದಂತೆ ಹರಿದು ತಂದು ಕಟ್ಟುಹಾಕಿಸಿ ತಮ್ಮ ಕೋಣೆಯಲ್ಲಿ ಇರಿಸಿಕೊಂಡಿದ್ದರು. ಕುವೆಂಪು ವಿಷಯದಲ್ಲಿ ಪ್ರೊ. ದೇಜಗೌರವರಿಗೆ ಆ ವೇಳೆಗಾಗಲೇ ಇದ್ದ ಪೂಜ್ಯ ಭಾವನೆಯನ್ನು ತೋರಿಸುತ್ತದೆ.

ನಂತರ ಬಿ.ಎ. ಆನರ್ಸ್‌ಗೆ ೧೯೩೭ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಓದಲು ನಿರ್ಧರಿಸಿದರು. ಆದರೆ ಕೊನೆಗೆ ತೆಗೆದುಕೊಳ್ಳಲು ನಿರ್ಧರಿಸಿದ್ದು ಚರಿತ್ರೆ, ಆಮೇಲೆ ತೆಗೆದುಕೊಂಡದ್ದು ಕನ್ನಡ. ಕಾರಣ ಕನ್ನಡ ತೆಗೆದುಕೊಂಡರೆ ಕುವೆಂಪುರವರ ಪಾಠ ಕೇಳಬಹುದೆಂದು ಅರ್ಜಿಯನ್ನು ತಿದ್ದಿ ಕನ್ನಡ ಎಂದು ಬರೆದಿರುವುದನ್ನು ತಿಳಿಯಬಹುದಾಗಿದೆ.

ಅಂದು ಮೈಸೂರಿನಲ್ಲಿ ಉಳಿದುಕೊಳ್ಳಲು ಶಿಸ್ತಿನ ಜೀವನಕ್ಕೆ ಹೇಳಿಮಾಡಿಸಿದಂತಹ ಶ್ರೀ ರಾಮಕೃಷ್ಣಾಶ್ರಮವನ್ನು ಸೇರಿದರು. ಅಲ್ಲಿಯೂ ಕೂಡ ಅವರಿಗೆ ವಿದ್ಯಾರ್ಥಿವೇತನ ದೊರೆಯಿತು. ಅಂದಿನ ಕನ್ನಡ ದಿಗ್ಗಜರುಗಳಾಗಿದ್ದ ಟಿ.ಎಸ್.ವೆಂಕಣ್ಣಯ್ಯ, ಬಿ.ಎಂ.ಶ್ರೀ ಮತ್ತು ಡಿ.ಎಲ್.ನರಸಿಂಹಚಾರ್ ಮುಂತಾದ ಶ್ರೇಷ್ಠ ವ್ಯಕ್ತಿಗಳು ದೇಜಗೌ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಮುದ್ರೆಯೊತ್ತಿರುವುದನ್ನು ನಾವು ಕಾಣಬಹುದಾಗಿದೆ.

ನಂತರ ಜವರೇಗೌಡರಿಗೆ ಕನ್ನಡ ತೆಗೆದುಕೊಂಡಿದ್ದಕ್ಕೆ ಕೆಲವೊಂದು ಬಾರಿ ನಿರಾಸೆ ಆ ಸಮಯದಲ್ಲಿ ಕಾಡಿಸುತ್ತದೆ. ನಂತರ ಜೀವನಕ್ಕೆ ದಾರಿಯನ್ನು ಕಂಡುಕೊಳ್ಳಲು ವಿದ್ಯಾ ಇಲಾಖೆಯಲ್ಲಿ ಗುಮಾಸ್ತರಾದರು. ಈ ಅವಧಿಯಲ್ಲೇ ಆದರ್ಶ ಯುವಕ ಜವರೇಗೌಡರು ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದ ಅಪ್ಪಾಜಿಗೌಡರ ಮಗಳು ಸಾವಿತ್ರಮ್ಮನವರೊಂದಿಗೆ ಸರಳ ವಿವಾಹವಾದರು. ಅಂದಿನ ಲಗ್ನಪತ್ರಿಕೆಯ ಈ ಪದ್ಯ,

"ಒಲುಮೆಗಿಂತಲೂ ಬೇರೆ ಪರಮಾರ್ಥವಿಲ್ಲ
ನರರ ಬದುಕಿನಲ್ಲಿ ಮೇಣ್ ಅರ್ಥ
ಹೀನಂ ಬಾಳ್ವೆ ಒಲುಮೆಯಿಲ್ಲದಿದ್ದರೆ,
ಹೂವಿಂದ ಸಾರ್ಥಕವಹುದು, ಗಿಡದ
ಬಾಳಂತರಕೆ ಒಲುಮೆ ಹೂವು"

ಎಂಬ ಕುವೆಂಪುರವರ ಚಿತ್ರಾಂಗದ ಪದ್ಯ, ಅಂದು ಅವರು ತೊಟ್ಟಿದ್ದು ಖಾದಿಬಟ್ಟೆಯೇ, ಮದುವೆಯ ಸೂಟ್ ಆಗಿತ್ತು. ಮಂಗಳಸೂತ್ರವೇ ಎಲ್ಲಾ ತರಹದ ಒಡವೆಯಾಗಿತ್ತು. ಸರಳ ವಿವಾಹದ ರೀತಿಯಲ್ಲೇ ಮುಂದೆಯೂ ಸರಳವಾಗಿ, ಅಷ್ಟೇ ಒಲುಮೆಯ ಸತಿಪತಿಗಳಾಗಿ ಬದುಕಿ ತೋರಿಸಿದ ಆದರ್ಶ ವ್ಯಕ್ತಿತ್ವ ಹೃದಯ ವೈಶಾಲ್ಯತೆ ದೇಜಗೌ ದಂಪತಿಗಳದ್ದು ಎಂಬುದನ್ನು ಈ ಮೇಲಿನ ಕವನದಿಂದ ತಿಳಿಯಬಹುದಾಗಿದೆ. ಸಾಹಿತ್ಯದ ಬೃಹದ್ ಭೂಮಿಕೆಯಲ್ಲಿ ಶ್ರೀ ಜವರೇಗೌಡರದು ಭೀಮಬಲ. ಪಾತ್ರಗಾತ್ರಗಳೆರಡನ್ನೂ ಸೈ ಎನ್ನುವಂತೆ ಸರಿಗಟ್ಟುವ ಸಾಮರ್ಥ್ಯ ಅವರದು. ಏನನ್ನೇ ಮಾಡಿದರೂ ಅಲ್ಲಿ ಮೈಲಿಗಲ್ಲುಗಳನ್ನು ನೆಟ್ಟು ಮುನ್ನಡೆವ ಸ್ವಭಾವ. ಅವರ ಸಂಪಾದನೆ, ಅನುವಾದ ಮತ್ತು ಜೀವನ ಚರಿತ್ರೆಗಳ ರಚನೆಗಳು ಇದಕ್ಕೆ ಸ್ಪಷ್ಟ ನಿದರ್ಶನ.

"ಸಂಶೋಧನಾರಹಿತವಾದ ಸಂಪಾದನೆ ಅವರಿಗೆ ಒಗ್ಗದು. ಮೂಲತಃ ಅವರೊಬ್ಬ ಘನಪಂಡಿತ. ಕನ್ನಡ ಸಾಹಿತ್ಯ ಸಮಸ್ತವನ್ನೂ ಆಳವಾಗಿ ಅಧ್ಯಯನ ಮಾಡಿರುವ ಬಹುಶ್ರುತ ವಿದ್ವಾಂಸ, ಅಪಾರವಾದ ಶಾಸ್ತ್ರಜ್ಞಾನದ ಹಿನ್ನೆಲೆಯುಳ್ಳ ಅವರು ಕೃತಿಗಳನ್ನು ತೌಲನಿಕ ಹಿನ್ನೆಲೆಯಲ್ಲಿ ಅವಲೋಕಿಸಿ ಬೆಲೆಕಟ್ಟುವ ನೈಪುಣ್ಯತೆಯುಳ್ಳ ಶ್ರೇಷ್ಠ ವಿಮರ್ಶಕ".

ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯಗಳೆರಡನ್ನು ಕುರಿತ ದೇಜಗೌ ವಿಮರ್ಶೆಯನ್ನು ಪರಿಗಣಿಸಿದರೆ ಅದು ಮೂರು ಸಹಸ್ರ ಪುಟಗಳಷ್ಟಾಗುತ್ತದೆ. ಅದೆಲ್ಲವೂ ಗಟ್ಟಿ ಬರವಣಿಗೆ, ಲೋಕಾಭಿರಾಮ ಮನಸ್ಸಿನಿಂದ ಕಾಟಚಾರಕ್ಕೆ ಗೀಚುವ ಜಾಯಮಾನ ಅವರಿಗಿಲ್ಲವೇ ಇಲ್ಲ, ಕೃತಿ ವಿಮರ್ಶೆಯ ಮಾತಿರಲಿ ಸಾಹಿತಿಗಳನ್ನು ಕುರಿತ ಬರವಣಿಗೆಯೂ ಸಹ ವಸ್ತುನಿಷ್ಠವಾಗಿರುತ್ತದೆ.

ಸಾಹಿತ್ಯಗಳ ಸಂಗದಲ್ಲಿ 'ನೆನಪಿನಲ್ಲಿ ನಿಂದವರು' ಈ ದೃಷ್ಟಿಯಿಂದ ಉಲ್ಲೇಖಾರ್ಹ ಕೃತಿಗಳು, ವ್ಯಕ್ತಿ ಚಿತ್ರಗಳನ್ನು ಕುರಿತಂತೆ ಸಮೃದ್ಧಿಯಲ್ಲಿ ದೇಜಗೌ ಕನ್ನಡ ಸಾರಸ್ವತ ಲೋಕದಲ್ಲಿ ಮೊದಲಿಗರಾಗುತ್ತಾರೆ. ಅವರಿಗೆ ಅಂಕಣದ ವೃತ್ತಿ ಮತ್ತು ಪ್ರವೃತ್ತಿ ಎರಡೂ ಆಗಿತ್ತು. ಅವರು ಅದನ್ನು ಬರವಣಿಗೆಯಾಗಿ ಪರಿಗಣಿಸಿದ್ದರು. ಸಾಹಿತ್ಯ ದಿಗ್ಗಜರನ್ನು ಪರಿಚಯಿಸುವಮಟ್ಟಿಗೆ ಲೇಖನ ಸಮುಚ್ಚಯದಲ್ಲಿ ದೇಜಗೌ ಮಹತ್ವದ ಸ್ಥಾನಕ್ಕೆ ಬರುತ್ತಾರೆ.

ಮಹಾಕವಿ ಕುವೆಂಪು ಅವರ ಜೀವನ ಸಾಹಿತ್ಯವನ್ನು ಕುರಿತಂತೆ ಈ ಲೇಖಕರು ನಡೆಸಿದ ತಲಸ್ಪರ್ಶಿ ಅಧ್ಯಯನ ನಾಲ್ಕು ಸಾವಿರ ಪುಟಗಳನ್ನು ದಾಟುತ್ತದೆ. ಕನ್ನಡದ ಸಾಹಿತ್ಯದಮಟ್ಟಿಗೆ ಮಾತ್ರವಲ್ಲ, ಇಡೀ ಭಾರತೀಯ ಸಾಹಿತ್ಯದಲ್ಲಿ ಇಂಥ ಪ್ರಯತ್ನ ಇನ್ನಿಲ್ಲ. ಒಬ್ಬ ಸಾಹಿತಿಯ ಸಮಸ್ತ ಸಾಹಿತ್ಯವನ್ನು ಒಬ್ಬನೇ ಸಾಹಿತಿ ಲೌಕಿಕಾ ಲೌಕಿಕಸ್ತರಗಳಲ್ಲಿ ವಿವೇಚನೆಗೊಳಗು ಮಾಡಿರುವುದು ವಿಶ್ವಸಾಹಿತ್ಯದಲ್ಲೂ ಅಪರೂಪ, ಷೇಕ್ಸ್‌ಪಿಯರ್ ಮತ್ತು ಕಾಳಿದಾಸ ಕವಿಗಳನ್ನು ಕುರಿತಂತೆ ಮಾತ್ರ ವಿಮರ್ಶೆಯ ಈ ಸಾಧ್ಯತೆ ಇದೆ. "ಇನ್ನು ಜಗತ್ತಿನ ಮಹಾನ್ ಲೇಖಕ ಟಾಲ್‌ಸ್ಟಾಯ್ ಅವರ "ರೆಸರೆಕ್ಷನ್ ಮತ್ತು ವಾರ್ ಅಂಡ್ ಪೀಸ್" ಕೃತಿಗಳನ್ನು "ಪುನರುತ್ಥಾನ" ಹಾಗೂ "ಯುದ್ಧ ಮತ್ತು ಶಾಂತಿ"ಯಾಗಿ ಕನ್ನಡೀಕರಿಸಿ ತನ್ಮೂಲಕ ರಷ್ಯನ್ ಸಂಸ್ಕೃತಿಯನ್ನು ಕನ್ನಡೀಕರಿಸಿದ್ದು ಮಹತ್ವದ ಸಂಗತಿ. ಕೃಷ್ಣಹತೀ ಸಿಂಗರ "ವಿತ್ ನೋ ರಿಗ್ರೆಟ್ಸ್" ಎಂಬ ಕೃತಿಯನ್ನು "ನೆನಪು ಕಹಿಯಲ್ಲ" ಎಂಬ ಹೆಸರಿನಲ್ಲಿ

ಅನುವಾದಿಸಿ ಪ್ರಕಟವಾದರೂ ಅಲ್ಲಿನ ಸೃಜನಶೀಲ ಗದ್ಯ ಕನ್ನಡ ಗದ್ಯಕ್ಷೇತ್ರದಲ್ಲಿ ಮುದನೀಡಿ ಜವರೇಗೌಡರ ಸಾಹಿತ್ಯ ಪ್ರವೇಶವನ್ನು ಉಜ್ವಲಗೊಳಿಸಿದ್ದು ಗಮನಾರ್ಹ ವಿಚಾರ. ಹೀಗೆ ಅವರು ಅನುವಾದ, ಜೀವನ ಚರಿತ್ರೆ ವ್ಯಕ್ತಿಚಿತ್ರ ಮತ್ತು ಪ್ರವಾಸ ಸಾಹಿತ್ಯವನ್ನು ಕುರಿತ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ನಡೆಸಿ ಪ್ರಥಮಪಂಕ್ತಿಯಲ್ಲಿ ನಿಲ್ಲುತ್ತಾರೆ. ಸಮರ್ಥಕವಿ ಯಾವತ್ತೂ ಸಮಕಾಲೀನ ಸಂಗತಿಗಳ ದರ್ಪಣವಾಗುತ್ತಾನೆ. ಅದೇ ಸಮಕಾಲೀನಪ್ರಜ್ಞೆ, ದೈನಂದಿನ ಘಟನೆಗಳಿಗೆ ರಮಣೀಯ ಅಭಿವ್ಯಕ್ತಿ ನೀಡಿದಾಗ ಅದು ಕಾವ್ಯವಾಗುತ್ತದೆ ಹಾಗೂ ಪ್ರಸ್ತುತ ವಿಚಾರಗಳ ಪ್ರತಿಬಿಂಬವಾಗುತ್ತದೆ.

ಭಾರತದ ಇಂದಿನ ಬಹುದೊಡ್ಡ ಸಮಸ್ಯೆ ಎಂದರೆ ಹದಗೆಟ್ಟ ರಾಜಕೀಯ ಸನ್ನಿವೇಶ, ಸ್ವಾರ್ಥ ರಾಜಕಾರಣಿಗಳ ನಾಚಿಕೆಗೆಟ್ಟ ಬದುಕು ದೇಶದಲ್ಲಿ ನಾನಾ ಅನಾಹುತಗಳನ್ನು ಸೃಷ್ಟಿಸುತ್ತದೆ; ಅವರು ಬಿತ್ತಿ ಬೆಳೆಯುವ ಭ್ರಷ್ಟಾಚಾರ, ಘನಘೋರ ರಾಷ್ಟ್ರೀಯ ಸಮಸ್ಯೆಯಾಗಿದೆ. ದೇಶದ ಆರ್ಥಿಕ ಅಭದ್ರತೆಗೆ ಕಾರಣವಾಗಿದೆ. ವೋಟಿಗಾಗಿ ಅವರು ತೊಡುವ ಜಾತೀಯ ಕಂದಕಗಳು ಮುಂದೆಂದೂ ಸರಿಪಡಿಸಲಾರದ ಹಾಗೆ ದೇಶವನ್ನು ಛಿದ್ರಗೊಳಿಸುತ್ತಿವೆ ಎಂಬುದನ್ನು ನಾವು ಇಂದು ನೋಡಬಹುದಾಗಿದೆ.

ಇಂಥ ಸನ್ನಿವೇಶ ಕಂಡ ಕವಿ ಜವರೇಗೌಡರು ರೋಷಗೊಂಡು ಲೇಖನಿಯನ್ನೇ ಖಡ್ಗವಾಗಿಸಿಕೊಂಡು ರಾಜಕಾರಣಿಗಳ ಈ ಹೀನ ಧೋರಣೆಗಳನ್ನು ಉಗ್ರವಾಗಿ ಕವನಗಳಲ್ಲಿ ಖಂಡಿಸಿದ್ದಾರೆ. ಆತ್ಮಗೌರವ ಇರುವ ಯಾವ ರಾಜಕಾರಣಿಯೂ ಬೆಚ್ಚಿಬೀಳುವಂತೆ, ಆತ್ಮಾವಲೋಕನ ಮಾಡಿಕೊಳ್ಳುವಂತೆ ಕಾವ್ಯದ ಈಟಿಯಿಂದ ತಿವಿದಿದ್ದಾರೆ. ಅವರ ಚುಟುಕುಗಳಾಗಲಿ, ಮುಕ್ತಕಗಳಾಗಲಿ, ವಚನಗಳಾಗಲಿ ಅಥವಾ ಈ ಸಂಕಲನದ ಶುದ್ಧಾಂಗ ಭಾವಗೀತೆಗಳಾಗಲಿ ರಾಜಕೀಯ ವಿಡಂಬನೆಯ ಸಿಂಹಶಕ್ತಿಯಾಗಿ ರೂಪುತಳೆದಿವೆ.

"ಪಾಪಪುಣ್ಯ ನ್ಯಾಯನೀತಿ
ಭೀತಿತೊಡರು ಇಲ್ಲವದಕೆ
ಕಾಲಗಾಳಿ ತೂರಿದಂತೆ
ಬಗ್ಗಿ ನಡೆವುದವರ ಚಾಳಿ
ಬಂಡ ಭಂಡರೆಲ್ಲರು"
"ಕರುಣೆ ಮರುಕವೆಂಬುದಿಲ್ಲ

ರಾಜಕೀಯ ನಾಯಕರಿಗೆ
ಲೂಟಿಯವರ ಬದುಕಿನಗುರಿ
ಸ್ವಾರ್ಥವೊಮದೆಯವರ ಸ್ವರ್ಗ
ಸುಳ್ಳೆಯವರ ಮನೆದೇವರು"

ರಾಜಕೀಯದಲ್ಲಿನ ಹೀನಪರಿಸ್ಥಿತಿಯನ್ನು ಈ ಕಾವ್ಯದಲ್ಲಿ ನೋಡಬಹುದಾಗಿದೆ. ರಾಜಕೀಯ ವಿಡಂಬನೆ ಈ ಕವಿಗೆ ಇಂದಿನದಲ್ಲ. ಹಿಂದಿನಿಂದಲೂ ಬಂದ ಪ್ರತಿಸ್ಪಂದನವಾಗಿದೆ.

ಬೈಗುಳದಮಟ್ಟಿಗೆ ದೇಜಗೌ ಕುಮಾರವ್ಯಾಸನ ಹಾಗೆ ಕಂಡದನ್ನು ಕಂಡಂತೆ ಹೇಳುವ ಎದೆಗಾರಿಕೆಯಲ್ಲಿ ಸರ್ವಜ್ಞನ ರೀತಿ, ಯಾವ ಮುಲಾಜಿಲ್ಲದೆ ಯಾರಿಗೂ ಹೆದರದೆ, ಅದರಲ್ಲೂ ಇಂದಿನ ದುಷ್ಟ ರಾಜಕೀಯದ ಕರಾಳ ವ್ಯವಸ್ಥೆಯಲ್ಲಿ ನಿಷ್ಠುರವಾಗಿ ಮಾತನಾಡುವ ಶಕ್ತಿ ತಾಕತ್ತು ನಿಜಕ್ಕೂ ಅಸಾಮಾನ್ಯವಾದುದು. ದೇಜಗೌರವರು ತಮ್ಮ ಜೀವಮಾನದುದ್ದಕ್ಕೂ ಕನ್ನಡ ಪರವಾದ ನಿಲುವನ್ನು ತಳೆಯುತ್ತಾ ಬಂದಿರುವುದನ್ನು ಅವರ ಸಾಹಿತ್ಯ, ಭಾಷಣ, ಚಳುವಳಿಗಳಲ್ಲಿ ಕಾಣಬಹುದಾಗಿದೆ.

ಹಳ್ಳಿಯಲ್ಲಿ ಹುಟ್ಟಿದ ದೇಜಗೌರವರು ಶಿಕ್ಷಣದ ಅವಶ್ಯಕತೆ ಎಷ್ಟೆಂಬುದನ್ನು ತಿಳಿದು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮೈಸೂರಿನ ಸುತ್ತಮುತ್ತ ಇರುವ ಗ್ರಾಮೀಣ ಬಡಮಕ್ಕಳಿಗೆ ಶಿಕ್ಷಣವನ್ನು ಕಲ್ಪಿಸುವುದಕ್ಕೋಸ್ಕರ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ಡಾ. ಟಿ.ಕೆ.ಕೆಂಪೇಗೌಡ, ಅನಿಕೇತನದಲ್ಲೊಂದು ವಿಶ್ವಚೇತನ, ಯಡೆಯೂರು ಸಿದ್ದಲಿಂಗೇಶ್ವರ ಪ್ರಕಾಶನ, ಟಿ.ಕೆ.ಲೇಔಟ್, ಮೈಸೂರು, ೨೦೦೯, ಪು.೫.

೨. ಅದೇ., ಪು. ೬

೩. ಅದೇ

೪. ಅದೇ., ಪು. ೭

೫. ಅದೇ., ಪು. ೩.

೬. ಡಾ. ಮಳಲಿ ವಸಂತಕುಮಾರ್, ಮುನ್ನುಡಿ, ದೇಜಗೌ, ಸೆಳಕು ಮೆಲುಕು, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೧, ಪು. ೬

೭. ಅದೇ., ಪು. ೪.

೮. ಅದೇ., ಪು. ೬

೯. ಅದೇ., ಪು. ೭

೧೦. ಅದೇ., ಪು. ೮.

೧೧. ಅದೇ., ಪು. ೧೧.

ಅಧ್ಯಾಯ ಮೂರು

ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ದೇಜಗೌರವರ ಕೊಡುಗೆಗಳು

ದೇಜಗೌ ಅವರು ಗುಮಾಸ್ತರಾಗಿದ್ದ ಕಾಲದಿಂದ ಮೊದಲ್ಗೊಂಡು ಕುಲಪತಿಯಾಗಿ ನಿವೃತ್ತರಾದಮೇಲೂ ಕನ್ನಡದ ಪರವಾಗಿ ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಳಿತಲ್ಲಿ ಹಗಲಿರುಳೂ ಕನ್ನಡದ ತಪಸ್ಸಿನಲ್ಲಿ ನಿರತರಾಗಿರುವರು. ಅವಿದ್ಯಾವಂತನೊಬ್ಬ ತನ್ನ ಭೂಮಿಯಲ್ಲಿ ತೆಗೆದ ಬೆಳೆಗಿಂತ ವಿದ್ಯಾವಂತ ಅದಕ್ಕಿಂತ ಕಡಿಮೆ ಭೂಮಿಯಲ್ಲಿ ತೆಗೆದ ಬೆಳೆಯೇ ಅಧಿಕ ಪ್ರಮಾಣದಲ್ಲಿರುತ್ತದೆ. ಅನಕ್ಷರತೆಯ ಹಳ್ಳಿಯ ವಾತಾವರಣದಲ್ಲಿ ಹುಟ್ಟಿ ಬೆಳೆದ ದೇಜಗೌ ಅವರಲ್ಲಿ ಬಾಲ್ಯದಿಂದಲೂ ಶಿಕ್ಷಣದ ವಿಚಾರಗಳು ಸದಾ ಕಾಡುತ್ತಲೇ ಇದ್ದವು. "ನನ್ನ ಹಳ್ಳಿಯ ಜನ ಅಕ್ಷರಸ್ಥರಾಗಬೇಕು, ಜ್ಞಾನವಂತರಾಗಬೇಕು" ಎಂಬ ಹಂಬಲ ಅವರಲ್ಲಿ ತುಂಬಿಕೊಂಡು ಕಾಡತೊಡಗಿತು. ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಮೇಲೆ ಅವರ ಆ ಎಲ್ಲ ಚಿಂತನೆಗಳನ್ನು ಕುರಿತು ಆಗಾಗ್ಗೆ ಮಾತನಾಡಿದ್ದಾರೆ. ಸಾಧ್ಯವಾದಷ್ಟು ವಿಚಾರಗಳನ್ನು ಅನುಷ್ಠಾನಕ್ಕೂ ತಂದಿದ್ದಾರೆ.

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಮುಖ ಸ್ಥಾನಮಾನಗಳನ್ನು ಕೊಡಬೇಕೆಂದು ದೇಜಗೌ ಅವರ ಅಭಿಮತ. ಮಗುವಿನ ಮನಸ್ಸು ಅತೀಸೂಕ್ಷ್ಮ. ಅದು ತನ್ನ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪಡೆಯಬೇಕು ಪರಭಾಷೆಯನ್ನು ಕಲಿಸಲು ಪ್ರಯತ್ನಿಸಿದರೆ ಮಗುವಿನ ಮನಸ್ಸು ಗೊಂದಲಕ್ಕೀಡಾಗಿ ಮನಃಶಕ್ತಿ ನಿತ್ರಾಣವಾಗಿ, ಯಾವ ಭಾಷೆಯನ್ನು ಸಮರ್ಪಕವಾಗಿ ಅದು ಕಲಿಯಲಾರದು ಎನ್ನುತ್ತಾರೆ. ಭಾಷೆಯನ್ನಾಗಲಿ ಇತರ ಯಾವುದೇ ವಿಷಯವನ್ನಾಗಲೀ ಕಲಿಯಬೇಕಾದರೆ ಸೂಕ್ತ ಪರಿಸರ ಹಾಗೂ ಸೂಕ್ಷ್ಮ ಸೌಲಭ್ಯಗಳು ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು. ಹಾಗೆಯೇ ಪಠ್ಯವಿಷಯಗಳು ಎಲ್ಲಿಯೂ ಅಡಚಣೆಯಾಗದಂತೆ ದೊರಕಬೇಕು ಎನ್ನುತ್ತಾರೆ. ವಿದ್ಯಾಭ್ಯಾಸದ ಸಂಪೂರ್ಣಸೌಧ ನಿಂತಿರುವುದು ಪ್ರಾಥಮಿಕ ಶಿಕ್ಷಣದ ತಳಹದಿಯ ಮೇಲೆ, ಪ್ರಾಥಮಿಕ ಶಿಕ್ಷಣ ದುರ್ಬಲವಾದರೆ ತರುವಾಯದ ವಿದ್ಯಾಭ್ಯಾಸ ಕುಸಿಯುತ್ತದೆ. ಬಾಲ್ಯಾವಸ್ಥೆ ಶೀಘ್ರವಾಗಿ ಕಲಿಯುವ ಕಾಲ. ಅದು ಮಾನವ ಜೀವನ ರೂಪುಗೊಳ್ಳುವ ಕಾಲ, ಮಗುವಿನ ಪ್ರತಿಭೆ ವಿಕಾಸಗೊಳ್ಳುವಂತಾಗಬೇಕಾದರೆ ಯೋಗ್ಯಪರಿಸರವನ್ನು ಸೃಷ್ಟಿಸಬೇಕು. ಎಲ್ಲ ಮಕ್ಕಳನ್ನು

ಸಮಾನವಾಗಿ ಕಾಣಬೇಕು ಎಂಬ ತತ್ತ್ವಕ್ಕೆ ಕಟ್ಟುಬೀಳಬೇಕಾದ ಸರ್ಕಾರ ಹಾಗೂ ಸರ್ಕಾರದ ಅನುದಾನ ಪಡೆಯುವ ಸಂಸ್ಥೆಗಳು ತೋರಿಸುತ್ತಿರುವ ಮಲತಾಯಿ ಧೋರಣೆಯ ಬಗ್ಗೆ ದೇಜಗೌರವರು ಕಟುವಾದ ನುಡಿಗಳನ್ನಾಡುತ್ತಾರೆ. ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತ್ಯೇಕವಾದ ಶಾಲೆಗಳ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸುತ್ತಾರೆ. ಜೊತೆಗೆ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ಪಕ್ಷಪಾತ ನೀತಿಯನ್ನು ಖಂಡಿಸುತ್ತಾರೆ. ವಿದ್ಯೆ ಎಲ್ಲರಿಗೂ ಬೇಕು ಅದನ್ನು ದೊರಕಿಸಿಕೊಡುವುದು ಸರ್ಕಾರದ, ವಿಶ್ವವಿದ್ಯಾನಿಲಯಗಳ ಕರ್ತವ್ಯ ಎನ್ನುತ್ತಾರೆ. "ಅವರವರ ಅಭಿರುಚಿಗೆ ಅವರವರ ಬುದ್ಧಿಸಾಮರ್ಥ್ಯಕ್ಕೆ ಅವರವರ ಅವಶ್ಯಕತೆಗೆ ತಕ್ಕಂಥ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು ವಿದ್ಯಾರ್ಥಿಗಳಿಗೂ ಕ್ಷೇಮ, ಸಮಾಜಕ್ಕೂ ಕ್ಷೇಮ" ಎನ್ನುತ್ತಾರೆ. ಗುರುಶಿಷ್ಯರ ಸಂಬಂಧ ನಿಕಟವೂ ಗಾಢವೂ ಆಗಿಲ್ಲದಿರುವುದೇ ಈಗಿನ ಶಿಕ್ಷಣವ್ಯವಸ್ಥೆಯ ಮಹಾದೋಷ ಎನ್ನುತ್ತಾರೆ. ಗುರುಶಿಷ್ಯರಲ್ಲಿ ಪರಸ್ಪರ ಅರಿವು ಮೂಡಬೇಕು. ವಿದ್ಯಾರ್ಥಿಯಲ್ಲಿ ಆತ್ಮಸಾಕ್ಷಿಯನ್ನು ಬೆಳೆಸುವ, ಸಮಸ್ಯೆಗಳನ್ನೆದುರಿಸುವ, ಜ್ಞಾನ ಕುತೂಹಲವನ್ನು ಮೂಡಿಸುವ ಶಿಕ್ಷಣ ಇಂದು ಇಲ್ಲವಾಗಿದೆ. ಕೇವಲ ವಿಷಯಗಳನ್ನು ತಲೆಗೆ ತುರುಕುವುದರಲ್ಲಿ ಈಗಿನ ಪದ್ಧತಿ ಸಂತೃಪ್ತವಾಗಿದೆ. "ಒಂದು ವಿಶ್ವವಿದ್ಯಾನಿಲಯದ ಸೋಲು ಎಂದರೆ ಒಂದು ರಾಷ್ಟ್ರದ ಸೋಲು" ಎಂದು ದೇಜಗೌ ಹೇಳುತ್ತಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷವಾದ ಒತ್ತನ್ನು ಸರ್ಕಾರ ನೀಡಿ, ಅವರಿಗೆ ಹೆಚ್ಚು ಆಸಕ್ತಿ ಇರಬಹುದಾದ ಸಂಗೀತ, ಕಲೆ, ಗೃಹವಿಜ್ಞಾನ ಮುಂತಾದ ವಿಷಯಗಳಲ್ಲಿ ಅವರಿಗೆ ಜ್ಞಾನದಾಹವನ್ನು ಮೂಡಿಸಬಹುದು.

ವಯಸ್ಕರ ಶಿಕ್ಷಣ ಮತ್ತು ರಾಷ್ಟ್ರಾಭಿವೃದ್ಧಿಯ ಬಗೆಗೆ ದೇಜಗೌ ಅವರು ತಮ್ಮದೇ ಆದ ಪ್ರೌಢ ವಿಚಾರಧಾರೆಗಳನ್ನು ಹರಿಸುತ್ತಾರೆ. ಅಂಚೆ ಮತ್ತು ತೆರಪಿನ ಶಿಕ್ಷಣವನ್ನು ಜಾರಿಗೆ ತಂದದ್ದು ಇವರ ಬೃಹತ್ ಸಾಧನೆ. "ಕನ್ನಡ ವಿಶ್ವಕೋಶ"ವನ್ನು ಜಾರಿಗೆ ತಂದದ್ದು ದೇಜಗೌ ಅವರ ಮಹತ್ತರವಾದ ಸಾಧನೆಯಾಗಿದೆ.

"ನಮ್ಮ ಬಡತನ ನಮ್ಮ ಶಿಕ್ಷಣದಲ್ಲಿ ಪ್ರತಿಬಿಂಬಿತವಾಗುತ್ತದೆ" ಎಂಬುದು ದೇಜಗೌ ಅವರ ಅಭಿಮತ, ಜಾನಪದವನ್ನು ಎಂ.ಎ. ತರಗತಿಯ ಬೋಧನಾ ವಿಷಯವನ್ನಾಗಿ ಗೊತ್ತುಪಡಿಸಿ ಅದನ್ನು ಜಾರಿಗೂ ಕೂಡ ತರುತ್ತಾರೆ. ದೇಜಗೌ ಅವರು ಕುಲಪತಿಗಳಾದ ಮೇಲೆ, ಅದುವರೆವಿಗೂ ಇಂಗ್ಲಿಷಿನಲ್ಲಿ ನಡೆಯುತ್ತಿದ್ದ ಘಟಿಕೋತ್ಸವವನ್ನು ಕನ್ನಡದಲ್ಲಿಯೇ

ನಡೆಯುವಂತೆ ನೋಡಿಕೊಂಡರು. ನಮ್ಮ ದೇಶದಲ್ಲಿನಾವು ಗ್ರಾಮಾಂತರ ಪ್ರದೇಶಗಳಲ್ಲಿನ ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಬೇಕು ಎಂಬುದು ದೇಜಗೌ ಅವರ ಕಳಕಳಿ. ಶಿಕ್ಷಣವನ್ನು ಶಿಕ್ಷಣ ಕ್ಷೇತ್ರವನ್ನು ಕೇವಲ ವ್ಯಾವಹಾರಿಕವಾಗಿ ಪರಿಗಣಿಸುತ್ತಿರುವುದು ಸರಿಯಲ್ಲ. "ನಮ್ಮ ವಿದ್ಯಾರ್ಥಿಗಳ ಹೃದಯವನ್ನು ಪರಿಪಕ್ವಗೊಳಿಸದ, ಅವರ ಬಾಳಿಗೆ ನೆರವಾಗದ ವಿದ್ಯೆಯನ್ನು ನೀಡುವುದಕ್ಕಿಂತ ವಿಶ್ವವಿದ್ಯಾನಿಲಯವನ್ನೇ ಕೆಲವು ವರ್ಷಗಳ ತನಕವಾದರೂ ನಿಲ್ಲಿಸಬಹುದೆಂದು ಕಾಣುತ್ತದೆ" ಎಂದು ದೇಜಗೌ ಉಗ್ರವಾಗಿ ಹೇಳುತ್ತಾರೆ. ವಿಶ್ವವಿದ್ಯಾನಿಲಯದ ಎಲ್ಲ ಇಲಾಖೆಗಳಂತೆ ಕನ್ನಡವೂ ಒಂದು ಇಲಾಖೆಯಾಗಿತ್ತು. ಕನ್ನಡ ಇಲಾಖೆಗೆ ಒಂದು ಪ್ರಮುಖವಾದ ಸ್ಥಾನಮಾನವನ್ನು ದೊರಕಿಸಿಕೊಟ್ಟವರು ದೇಜಗೌ ಅವರು. ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಪ್ರಾಚ್ಯ ಸಂಶೋಧನಾ ವಿಭಾಗ, ಜಾನಪದ ವಿಭಾಗ ಹಾಗೂ ವಸ್ತುಸಂಗ್ರಹಾಲಯ, ಕನ್ನಡ ವಿಶ್ವಕೋಶ ಹೀಗೆ ಅನೇಕ ಹೆಮ್ಮೆಯ ರೆಕ್ಕೆಪುಕ್ಕಗಳೊಂದಿಗೆ ಕನ್ನಡ ಅಧ್ಯಯನ ಸಂಸ್ಥೆ ಗರಿಗೆದರಿ ಇಂದು ಆಕಾಶದೆತ್ತರಕ್ಕೆ ನಿಂತಿದೆ. ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಅವರು ಅನೇಕ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಿದರು.

ಪ್ರಾಥಮಿಕ ಸಿಕ್ಷಣ ಮತ್ತು ಅದನ್ನು ಹೋಲುವ ವಯಸ್ಕರ ಶಿಕ್ಷಣಗಳಿಂದ ಪ್ರಾರಂಭಿಸಿ ಪಿ.ಯು.ಸಿ. ಪದವಿಪೂರ್ವ ಶಿಕ್ಷಣ, ಸ್ನಾತಕೋತ್ತರ ಹಾಗೂ ಅತ್ಯುನ್ನತ ಸಂಶೋಧನೆಗಳವರೆಗೆ ವಿವರವಾಗಿ ಹಂತಹಂತವಾಗಿ ದೇಜಗೌ ಅವರು ವಿಶ್ಲೇಷಣಾತ್ಮಕವಾದ ತಮ್ಮ ಚಿಂತನೆಗಳನ್ನು ಮಂಡಿಸಿದ್ದಾರೆ. ಅವರ ಶೈಕ್ಷಣಿಕ ವಿಷಯಗಳಾಗಲಿ, ಅದಕ್ಕೆ ಪೂರಕವಾದ ವಿಷಯಗಳಾಗಲಿ ಅವರ ಎಲ್ಲ ಹೆಜ್ಜೆಗಳಲ್ಲೂ ಸಾಮಾಜಿಕ ಕಳಕಳಿಯು ಎದ್ದುಕಾಣುತ್ತದೆ. "ಆರ್ಥಿಕ ಪ್ರಗತಿ, ಸಾಮಾಜಿಕನ್ಯಾಯ, ಸ್ವಾವಲಂಬನೆ, ಆತ್ಮಪ್ರತ್ಯಯ, ದುಡಿಮೆಯ ಹಿರಿಮೆ, ರಾಷ್ಟ್ರಪ್ರೇಮ, ಸಾಮಾಜಿಕ ಹೊಣೆಗಾರಿಕೆ, ನೈತಿಕ ಮೌಲ್ಯಗಳ ಸಂವರ್ಧನೆ, ಜ್ಞಾನತೃಷೆ, ಸಂಸ್ಕೃತಿಯ ಬೆಳವಣಿಗೆ ಇವನ್ನು ಸಾಧಿಸದ ಶಿಕ್ಷಣ ನಿಜಕ್ಕೂ ಯೋಗ್ಯವಲ್ಲ. ಇವು ಕೈಗೂಡಬೇಕಾದರೆ ತಂದೆತಾಯಿಯರ, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಸಮರಸವಾದ ಜೊತೆಗೂಡುವಿಕೆ ಅವಶ್ಯಕ. ಈ ಜೊತೆಗೂಡುವಿಕೆ ಸಾಧ್ಯವಾಗಲಿಲ್ಲವೆಂದರೆ ಶಿಕ್ಷಣ ಮಣ್ಣುಪಾಲಾಗುತ್ತದೆ" ಎಂದು ದೇಜಗೌ ಕಳಕಳಿಯಿಂದ ಹೇಳುತ್ತಾರೆ.

ಹಳ್ಳಿಯಿಂದ ದಿಲ್ಲಿಯವರೆಗೆ, ಕಾರಕೂನನಿಂದ ಹಿಡಿದು ಉನ್ನತಾಧಿಕಾರಿಯವರೆಗೆ, ರಾಜಕಾರಣಿಯಿಂದ ಹಿಡಿದು ಪ್ರಾಧ್ಯಾಪಕನವರೆಗೆ ಎಲ್ಲರೂ ಪರೀಕ್ಷಾಪದ್ಧತಿಯಲ್ಲಿ ಹುಳುಕು ಹುಡುಕುವವರಿದ್ದಾರೆ. ಎಲ್ಲರೂ ಶೈಕ್ಷಣಿಕ ಮಟ್ಟದ ಬಗ್ಗೆ ಸಂದೇಹ ವ್ಯಕ್ತಪಡಿಸುವವರೇ, ಈ ಹುಳುಕನ್ನು ಮೊದಲು ಸರಿಮಾಡುವ ಕಡೆಗೆ ಗಮನಹರಿಸಬೇಕು. ಶಿಕ್ಷಣವೂ ಸಾರ್ವಜನಿಕವಾಗುತ್ತಿರುವಾಗ ಯಾವುದೇ ಸೌಲಭ್ಯದ ಅನುಕೂಲಗಳು ಇಲ್ಲದೆಯೂ ಶಾಲಾ ಕಾಲೇಜುಗಳನ್ನು ಬೇಕಾಬಿಟ್ಟಿ ಬೆಳೆಸುತ್ತಿರುವಾಗ ಶಿಕ್ಷಣ ಮಟ್ಟದ ರಕ್ಷಣೆ ಕಷ್ಟವಾಗುತ್ತದೆ. ರಾಜಕೀಯ ಒತ್ತಡಕ್ಕೆ ಸಿಕ್ಕಿ ಕನಿಷ್ಠ ಸೌಲಭ್ಯಗಳೂ ಇಲ್ಲದ ಕಡೆಗಳಲ್ಲೆಲ್ಲ ಕಾಲೇಜುಗಳನ್ನು ತೆರೆಯಲಾಗುತ್ತಿದೆ. ಅಧ್ಯಾಪಕರಿಗೆ ಬೇಸಿಗೆ ಶಿಬಿರವನ್ನೇರ್ಪಡಿಸಿದರೆ, ಪರಿಷ್ಕೃತ ಪಠ್ಯಕ್ರಮದ ಬಗ್ಗೆ ಮಾಹಿತಿಯನ್ನೊದಗಿಸಿದರೂ ಆಧುನಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬಾರದೆಂದು ಅಧ್ಯಾಪಕರಿಂದಲೇ ಪ್ರತಿಭಟನೆವುಂಟಾಗುತ್ತದೆ. ಹಳ್ಳಿಗಾಡಿನ ಅಧ್ಯಾಪಕರಿಗೆ ತಮ್ಮ ತಮ್ಮ ವಿಷಯಗಳಲ್ಲಿ ಅತ್ಯಾಧುನಿಕ ಸಾಹಿತ್ಯ ಸಿಗಲಾರದು. ಅವರಿಗೆ ಪ್ರಾಧ್ಯಾಪಕರ ಸಂಪರ್ಕವಿಲ್ಲ. ಸಂಶೋಧನ ಸಂಸ್ಥೆಗಳ ಸಂಬಂಧವಿಲ್ಲ. ಆದ್ದರಿಂದ ಅವರ ಬುದ್ಧಿಗೆ ತುಕ್ಕು ಹಿಡಿದಿದೆ. ಅವರಲ್ಲಿ ಜ್ಞಾನ ಪಿಪಾಸೆ ಇಲ್ಲ. ಇದರಿಂದ ಆಗಾಗ್ಗೆ ಅವರಿಗೆ ಸುಧಾರಣಾ ತರಗತಿಗಳನ್ನೇರ್ಪಡಿಸಬೇಕು. ಇದರಿಂದ ಅವರ ಜ್ಞಾನ ಪ್ರಖರವಾಗುತ್ತದೆ. ಬುದ್ಧಿ ನಿಶಿತವಾಗುತ್ತದೆ. ಅವರ ತರಬೇತಿಯ ಫಲ ಶಿಷ್ಯಕೋಟಿಗೊದಗುತ್ತದೆ. ಹಲವಾರು ವರದಿಗಳ ಪ್ರಕಾರ ಗ್ರಂಥಾಲಯಗಳ ಧೂಳಿಡಿದ ಮೂಲೆಗಳನ್ನು ಉತ್ತಮ ಗ್ರಂಥಗಳು ಸೇರಿಕೊಂಡಿವೆ. ಶೈಕ್ಷಣಿಕ ವರದಿಗಳು ಶಿಕ್ಷಣದ ಭೂತ, ವರ್ತಮಾನ ಸ್ಥಿತಿಯನ್ನು ವಿವರಿಸಿ ಜನತೆಯ ಆಶೋತ್ತರಗಳ ಹಿನ್ನೆಲೆಯಲ್ಲಿ ಭವಿಷ್ಯತ್ಕಾಲದ ಆದರ್ಶ ಶಿಕ್ಷಣ ವ್ಯವಸ್ಥೆಯ ರೂಪುರೇಷೆಗಳನ್ನು ನಿರ್ಣಯಿಸುತ್ತವೆ. ವಿದ್ಯಾರ್ಥಿಗಳನ್ನು ಪ್ರಯೋಗ ಪಶುಗಳನ್ನಾಗಿ ಮಾಡಿ ಮೇಲಿಂದ ಮೇಲೆ ಸುಧಾರಣೆಗಳನ್ನು ಜಾರಿಗೆ ತರುವುದು ಸರಿಯಲ್ಲವೆಂದು ಕೆಲವರ ವಾದ. ಆದರೆ ಈ ವಾದವನ್ನು ಶಿಕ್ಷಣತಜ್ಞರು ಒಪ್ಪಲಾರರು. ಶೈಕ್ಷಣಿಕ ಸಮಸ್ಯೆಗಳು ಶಿಕ್ಷಣತಜ್ಞನಿಂದ ಪರಿಹಾರವಾಗಬೇಕೇ ಹೊರತು ರಾಜಕಾರಣಿಗಳಿಂದ ಸಾಧ್ಯವಿಲ್ಲ.

"ಸ್ವದರ್ಮೇನಿಧನಂ ಶ್ರೇಯಃ" ಕಮ್ಮಾರನ ಕೆಲಸವನ್ನು ಕುಂಬಾರ ಮಾಡಲಾರ, ಕುಂಬಾರನ ಕೆಲಸವನ್ನು ಕಮ್ಮಾರ ಮಾಡಲಾರ. ಆ ವಿಷಯಗಳಲ್ಲಿ ಪರಿಣಿತರಾದವರೇ ಅದಕ್ಕೆ ಸಂಬಂಧಿಸಿದ ವ್ಯವಹಾರವನ್ನು ನಿರ್ವಹಿಸಬೇಕು. ಜ್ಞಾನ ಸದಾ ಹರಿಯುವ

ಪ್ರವಾಹವೇ ಹೊರತು ನಿಂತ ನೀರಲ್ಲ. ಜ್ಞಾನವಿಕಾಸ ನಿಂತು ಹೋದಾಗ ಜಗತ್ತೇ ಜಡವಾಗುತ್ತದೆ. ವಿದ್ಯುತ್ ವೇಗದಿಂದ ಸಾಗುತ್ತಿರುವ ಜ್ಞಾನದೊಡನೆ ವಿದ್ಯಾರ್ಥಿಗಳೂ ಸ್ಪರ್ಧಿಸಬೇಕಾಗುತ್ತದೆ. ಅವರು ಲೋಕದ ಇತರ ವಿದ್ಯಾರ್ಥಿವೃಂದದೊಡನೆ ಸ್ಪರ್ಧಿಸಬೇಕಾದರೆ ನಮ್ಮ ಪಠ್ಯಕ್ರಮ ಕಾಲಕಾಲಕ್ಕೆ ಬದಲಾವಣೆ ಹೊಂದಬೇಕು. ಯಾರಿಗೂ ಹೆಚ್ಚು ತೊಂದರೆಯಾಗದ ರೀತಿಯಲ್ಲಿ ಈ ಬದಲಾವಣೆ ಸಾಧ್ಯ. ಈ ಹಿಂದೆಯೇ ತಿಳಿಸಿದಂತೆ ಶ್ರೇಷ್ಠ ಅಧ್ಯಾಪಕ ಮಾತ್ರ ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಬಲ್ಲ, ದುರ್ದೈವದಿಂದ ನಮ್ಮ ನಡುವಿರುವ ಹಲವಾರು ಅಧ್ಯಾಪಕರು ಜಡಸ್ವಭಾವದವರು. ಪ್ರಗತಿ ವಿರೋಧಿಗಳು, ಸಂಪ್ರದಾಯಸ್ಥರು, ಈ ನನ್ನ ಹೇಳಿಕೆಯನ್ನು ಕೆಲವು ನಿದರ್ಶನಗಳ ಮೂಲಕ ಸಾಬೀತುಪಡಿಸುತ್ತೇನೆ. ಈಗಿನ ವಿದ್ಯಾರ್ಥಿ ತನ್ನ ಮನೋಧರ್ಮ ಅಭಿರುಚಿಗಳಿಗೆ ತಕ್ಕಂತೆ ಪಠ್ಯವಿಷಯಗಳನ್ನು ಆರಿಸಿಕೊಳ್ಳಬಲ್ಲ. ಅದರಿಂದಾಗಿ ಅವನು ಭಾರಿಸೋಲನ್ನನುಭವಿಸುತ್ತಾನೆ. ನಡುವೆ ಪಠ್ಯವಿಷಯಗಳನ್ನು ಬದಲಿಸಿಕೊಂಡು ಮುಂದುವರಿಯುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ವಿಜ್ಞಾನ ವಿಭಾಗದಿಂದ ಮಾನವಿಕ ವಿಭಾಗಕ್ಕಾಗಲಿ, ಮಾನವಿಕ ವಿಭಾಗದಲ್ಲಿಯೇ ಒಂದರಿಂದ ಮತ್ತೊಂದು ಶಾಖೆಗಾಗಲಿ ಹೊರಳಲವಕಾಶವಿದ್ದರೆ ಅವರಿಗೆ ತುಂಬ ಅನುಕೂಲವಾಗುತ್ತದೆ. ಈ ಅವಕಾಶ ಕಲ್ಪನೆಯಿಂದ ಶಿಕ್ಷಣಮಟ್ಟಕ್ಕೆ ಚ್ಯುತಿಯಾಗದಮತೆ ನೋಡಿಕೊಳ್ಳಬಹುದು. ಇಂಥ ವಿಷಯ ಪರಿಣತ ಮಂಡಲಿಗಳ ಮುಂದೆ ಬಂದಾಗ ಸಾಕಷ್ಟು ಪ್ರತಿಭಟನೆ ಪಾಪ್ತವಾಗುತ್ತದೆ".

ಅನೇಕ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಅವಕಾಶವಿದೆಯಷ್ಟೆ. ಅವಕಾಶವಿಲ್ಲದಿದ್ದರೆ ಕಲ್ಪಿಸಬೇಕು. ಆದರೆ ಕೆಲವು ವಿಷಯಗಳನ್ನಾರಿಸಿಕೊಂಡವರಿಗೆ ಉದ್ಯೋಗಾವಕಾಶ ಕಡಿಮೆ. ಆದ್ದರಿಂದ ಇಂಥ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆದರೆ ಇಂಥ ವಿಷಯಗಳು ನಶಿಸಿಹೋಗಬಾರದು. ಇವು ಸಂಶೋಧನೆಯ ದೃಷ್ಟಿಯಿಂದ ಅತ್ಯಗತ್ಯ. ಉದಾಹರಣೆಗಾಗಿ, ಸಂಸ್ಕೃತ ಮತ್ತು ದಕ್ಷಿಣ ಭಾರತೀಯ ಅಧ್ಯಯನಗಳನ್ನು ಹೆಸರಿಸಬಹುದು. ಈ ಶಾಖೆಗಳು ಉಳಿಯಬೇಕು, ಬೆಳೆಯಬೇಕು. ಅಲ್ಲಿರುವ ಕನಿಷ್ಠಮಿತಿಯ ಅಧ್ಯಾಪಕರು ವಿದ್ಯಾರ್ಥಿಗಳಿಲ್ಲದಾಗ ಸಂಶೋಧನೆಯಲ್ಲಿ ನಿರತರಾಗಬಹುದು ಅಥವಾ ಎಂ.ಎ. ಪಠ್ಯವಿಷಯಗಳನ್ನು ಮೂರು ಸಮ ಭಾಗಗಳಾಗಿ ವಿಭಜಿಸಿ, ಒಂದೊಂದು ಭಾಗಕ್ಕೆ ಡಿಪ್ಲೊಮಾ ಎಂದು ಹೆಸರಿಡಬಹುದು. ಮೂರು ಡಿಪ್ಲೊಮಾ ಒಂದು ಎಂ.ಎ.,

ಪದವಿಗೆ ಸಮ ಎಂದು ಹೆಸರಿಡಬಹುದು. ಮೂರು ಡಿಪ್ಲೊಮಾ ಒಂದು ಎಂ.ಎ. ಪದವಿಗೆ ಸಮ ಎಂದು ಪರಿಗಣಿಸಬಹುದು. ಇಷ್ಟೇ ಅಲ್ಲ ಮೂರು ಜ್ಞಾತಿ ವಿಷಯಗಳಲ್ಲಿ ಉದಾಹರಣೆಗೆ, ಸಂಗೀತ, ಭಾರತೀಯ ಸಂಸ್ಕೃತಿ, ಭಾರತೀಯ ಸಾಹಿತ್ಯ, ಅಥವಾ ಭಾಷಾಂತರಕಲೆ, ಭಾರತೀಯ ಸಾಹಿತ್ಯ, ಭಾಷಾವಿಜ್ಞಾನ ಡಿಪ್ಲೊಮಾ ತೆಗೆದುಕೊಂಡಾಗಲೂ ಆ ವಿದ್ಯಾರ್ಥಿ ಪದವೀಧರನೆಂತಲೇ ಪುರಸ್ಕರಿಸಬಹುದು. ಪಿ.ಯು.ಸಿ. ತನಕ ನಾಡಿನ ಬಹುಪಾಲು ಮಕ್ಕಳು ಓದುಕಲಿಯಲೇಬೇಕು. ಈ ತರಗತಿ ಮುಂಬರುವ ಘಟಕವೂ ಆಗಬೇಕು. ಅಲ್ಲಿಂದ ಮುಂದೆ ಪದವಿ ತರಗತಿಯ ಮೂರು ವರ್ಷಗಳಲ್ಲಿ ಒಂದೊಂದೂ ಘಟಕವಾಗಿ ಮುಕ್ತಾಯ ಹಾಗೂ ಮುಂಬರುವ ಘಟಕಗಳಾಗಬೇಕು. ಇದರಿಂದ ಶಿಕ್ಷಣಕ್ಕಾಗಿ ಖರ್ಚುಮಾಡುವ ಹಣ ಸಾರ್ಥಕವಾಗುತ್ತದೆ. ಶಿಕ್ಷಣವೂ ಸಾರ್ಥಕವಾಗುತ್ತದೆ. ಅಷ್ಟೇ ಅಲ್ಲ ಮಿತವ್ಯಯವನ್ನು ಸಹ ಸಾಧಿಸಬಹುದು. ರಾಜ್ಯದಲ್ಲಿ ಹುಟ್ಟಿ ಬೆಳೆದ ಎಲ್ಲ ಮಕ್ಕಳಿಗೂ ಒಂದೇ ತೆರನಾದ ವಿದ್ಯಾಭ್ಯಾಸ ಅನಗತ್ಯ ಇವರಲ್ಲಿ ಕೆಲವರು ವರ್ತಕರಾಗಬಹುದು. ವಾಣಿಜ್ಯೋದ್ಯಮಿಗಳಾಗಬಹುದು, ಶಾಸಕರಾಗಬಹುದು, ವ್ಯವಸಾಯಗಾರರಾಗಬಹುದು, ಅವರಿಗೆ ಮುರುವರ್ಷದ ದೀರ್ಘಾವಧಿ ಶಿಕ್ಷಣ ಅನಾವಶ್ಯಕವೆಂದೇ ಹೇಳಬಹುದು. ಶಾಲಾಕಾಲೇಜುಗಳ ಅಧ್ಯಾಪಕರಿಗೆ, ಸ್ನಾತಕೋತ್ತರ ಪದವಿಗೆ ಹೋಗತಕ್ಕವರಿಗೆ ಸಂಶೋಧನಾಸಕ್ತರಿಗೆ ಮೂರುವರ್ಷದ ಶಿಕ್ಷಣ ಅವಶ್ಯಕ.

'ಬೋಧನೆಯಲ್ಲಿ ಪಠ್ಯಪುಸ್ತಕಗಳು ಬರಿಯ ನೆಪವೇ ಹೊರತು ಎಲುಬುಗೂಡೇ ಹೊರತು, ಸರ್ವಸ್ವವಲ್ಲ..... ಎಂದು ದೇಜಗೌ ಹೇಳುತ್ತಾರೆ. ಎಲುಬುಗೂಡಿಗೆ ರಕ್ತಮಾಂಸ ಪ್ರಾಣಗಳನ್ನು ತುಂಬಬೇಕಾದ್ದು ಅಧ್ಯಾಪಕನ ಕರ್ತವ್ಯ, ಪುಸ್ತಕವೊಂದು ನಿರ್ಜೀವ ವಸ್ತು. ವ್ಯಾಖ್ಯಾನ, ವಿವರಣೆ, ಚರ್ಚೆ, ಹೋಲಿಕೆ, ನಿದರ್ಶನ ಮೊದಲಾದ ಸಾಧನೋಪಾಯಗಳ ಮೂಲಕ ಅದಕ್ಕೆ ಪ್ರಾಣ ಪ್ರತಿಷ್ಠೆ ಮಾಡಬೇಕಾಗುತ್ತದೆ. ಪುಸ್ತಕದ ನೆಪದಲ್ಲಿ ಆ ಮೂಲಕ ಹೊಸ ಪ್ರಪಂಚವನ್ನು ಪ್ರದರ್ಶಿಸಬೇಕಾಗುತ್ತದೆ. ಆಡುಮಾತಿಗಿರುವ ಶಕ್ತಿ ಗ್ರಾಂಥಿಕ ಭಾಷೆಗಿರುವುದಿಲ್ಲ. ಭಾವಾಲೋಚನೆಗಳ ಅಭಿವ್ಯಕ್ತಿಗೆ ಮಾತೊಂದೇ ಮಾಧ್ಯಮವಲ್ಲ. ಅವು ತುಂಬಿ ತುಳುಕುವಾಗ ಇಡೀ ಶರೀರವೇ ಮಾತಾಡುತ್ತದೆ. ಆಗ ಮಾತ್ರ ಸಂವಹನಕಾರ್ಯ ಪರಿಣಾಮಕಾರಿಯಾಗಿ ನಡೆಯುತ್ತದೆ. ವಿದ್ಯಾರ್ಥಿಯ ಮೈಮನಗಳೆಲ್ಲ ಬೋಧನೆಯಲ್ಲಿ ಲೀನವಾಗುತ್ತದೆ. ಆದ್ದರಿಂದ ಶಿಕ್ಷಣದಲ್ಲಿ ಬೋಧನೆ ಪ್ರಧಾನ, ಪಠ್ಯಪುಸ್ತಕ ಗೌಣ

ಪಠ್ಯಪುಸ್ತಕಗಳ ರಚನೆ ಸುಲಭವಲ್ಲ. ಅದು ಕಲೆಯೂ ಅಹುದು. ಶಾಸ್ತ್ರವೂ ಅಹುದು. ಅವು ವಿದ್ಯಾರ್ಥಿಗಳಿಗೆ ದಾರಿದೀಪವಾಗಬೇಕು ಎಂದು ದೇಜಗೌರವರು ಶಿಕ್ಷಣದಲ್ಲಿ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿರಬೇಕು' ಎನ್ನುತ್ತಾರೆ.

ನೂರಕ್ಕೆ ನೂರು ಜನ ಪಾಸಾಗುವ ಶಾಲೆಗಳಿಗೆ ದೂರದಿಂದಲೇ ಕೈಮುಗಿಯಬೇಕು. ಅವು ಬಂಡವಾಳಶಾಹಿ ಪುರೋಹಿತಶಾಹಿಗಳಿದ್ದ ಹಾಗೆ ಅಲ್ಲಿ ಶ್ರೀಸಾಮಾನ್ಯರಿಗೆ ಪ್ರವೇಶವಿಲ್ಲ. ಅವುಗಳ ದೃಷ್ಟಿಯಲ್ಲಿ ಬಡವರು, ಗ್ರಾಮೀಣರು ಅಸ್ಪೃಶ್ಯರು. ಅಲ್ಲಿಗೆ ಬರುವವರೆಲ್ಲ ಉಳ್ಳವರ ಮತ್ತು ವಿದ್ಯಾವಂತರ ಮಕ್ಕಳು ಎಂಬುದನ್ನು ದೇಜಗೌ ಹತ್ತಿರದಿಂದ ನೋಡಿ ಅರಿತು ಅವರೇ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಂಚಿತ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಮುಂದಾದರು.

"ಶಿಕ್ಷಣದ ಯಶಸ್ಸಿಗೆ ಮೂರು ಸಂಗತಿಗಳು, ಪ್ರಮುಖ ಕಾರಣ. ಉದಾಹರಣೆಗೆ: ಪಠ್ಯ ವಿಷಯಾದಿ ಪ್ರಾಥಮಿಕ ಸೌಲಭ್ಯಗಳು, ತಂದೆತಾಯಿಯರು ಮತ್ತು ಉಪಾಧ್ಯಾಯರು, ಮುಖ್ಯಕಾರಣ, ಇವುಗಳಲ್ಲಿಯೂ ಉಪಾಧ್ಯಾಯರೇ ಮುಖ್ಯ, ಉಳಿದ ಸಂಗತಿಗಳಿಗೆಲ್ಲ ಅವರೇ ಕೊಂಡಿ, ಕೇಂದ್ರ ತನ್ನ ತರಗತಿಯ ವಿದ್ಯಾರ್ಥಿಗಳ ಸ್ವರೂಪ ಅಗತ್ಯಗಳಿಗೆ ತಕ್ಕಂತೆ ಪಠ್ಯಪುಸ್ತಕವನ್ನಾಗಲಿ ಸಾಧನ ಸೌಲಭ್ಯಗಳನ್ನಾಗಲಿ ಅಳವಡಿಸಿಕೊಳ್ಳಬೇಕಾದ್ದು ಅವನ ಕರ್ತವ್ಯ. ಬೇಜವಾಬ್ದಾರಿಯ ಅಥವಾ ನಿರಕ್ಷರರಾದ ತಂದೆತಾಯಿಯರ ಹೊಣೆಯನ್ನು ಅವನೇ ಹೊರಬೇಕಾಗುತ್ತದೆ. ಅಂದ ಮೇಲೆ ಕರ್ತವ್ಯ ಶ್ರದ್ಧೆ ಮತ್ತು ಜಾಣತನಗಳ ಜತೆಗೆ ಸಹನೆ ಸಹಾನೂಭೂತಿ ಅವನಲ್ಲಿರಬೇಕಾಗುತ್ತದೆ. ಮುಂದಿನ ಪ್ರಜೆಗಳನ್ನು ನಾಯಕರನ್ನು ಸೃಷ್ಟಿಮಾಡುತ್ತಿದ್ದೇನೆನ್ನುವ ಹೆಮ್ಮೆ ಅವನಿಗಿರಬೇಕು. ಜಾತಿ ರಾಜಕೀಯ ಮೀಸಲಾತಿಗಳ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ, ಲಗ್ಗೆ ಹಾಕಿರುವ ನಿರಾಸಕ್ತರಿಂದ ಶಿಕ್ಷಣಮಟ್ಟ ದಿನೇ ದಿನೇ ಇಳಿಮುಖವಾಗುತ್ತದೆ. ಲಕ್ಷ ಲಕ್ಷ ವಿದ್ಯಾರ್ಥಿಗಳ ಬಾಳು ಹಾಳಾಗುತ್ತಿದೆ. ದೇಶದ ಸರ್ವ ಪ್ರಗತಿಗೆ ಶಿಕ್ಷಣವೇ ಮೂಲ ದ್ರವ್ಯವೆಂಬುದನ್ನು ನಾಯಕತ್ವ ಮನದಟ್ಟು ಮಾಡಿಕೊಂಡಿಲ್ಲ. ನಾಯಕರಿಗೆ ಬೇಕಾದ್ದು ಸ್ವಾರ್ಥ ರಾಜಕಾರಣ ಮತ್ತು ವೋಟುಗಳೇ ಹೊರತು ದೇಶದ ಕ್ಷೇಮವಲ್ಲ" ಎನ್ನುತ್ತಾ ಶಿಕ್ಷಣ ಇಲಾಖೆಯ ನೀತಿಯನ್ನು ಹೀಗೆ ವಿಶ್ಲೇಷಿಸುತ್ತಾರೆ.

"ಶಿಕ್ಷಣ ಇಲಾಖೆ ಅಳತೆ ಮೀರಿ ಬೆಳೆದಿದೆ. ಬೆಳೆಯುತ್ತಿದೆ. ಶಾಲೆಗಳ ಮಂಜೂರಾತಿಯಲ್ಲಿ ಯಾವುದೇ ನಿರ್ದಿಷ್ಟ ಕ್ರಮವಿಲ್ಲ. ನೀತಿನಿಯಮಗಳಿದ್ದರೂ ಅವುಗಳ ಉಲ್ಲಂಘನೆಯ ಪರಿಪಾಠವಾಗಿದೆ. ಎಸ್ಸೆಸ್ಸೆಲ್ಸಿ ಮುಗಿಸುವ ಹೊತ್ತಿಗೆ ನಾಲ್ಕು ವಾಕ್ಯಗಳನ್ನು

ತಪ್ಪಿಲ್ಲದಂತೆ ಹೇಳುವ ಮತ್ತು ಬರೆಯುವ ಸಾಮರ್ಥ್ಯ ವಿದ್ಯಾವಂತನ ಪ್ರಥಮ ಲಕ್ಷಣವಾಗಬೇಕು. ಶಿಕ್ಷಣ ಇಲಾಖೆ ಪರೀಕ್ಷಾ ಫಲಿತಾಂಶಗಳನ್ನು ವಿಶ್ಲೇಷಣೆ ಮಾಡಿ ಆ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಪಠ್ಯಕ್ರಮ ಬೋಧನಾ ವಿಧಾನ, ಉಪಾಧ್ಯಾಯರ ತರಬೇತಿ ರೀತಿ ಮತ್ತು ಪರೀಕ್ಷಾ ನೀತಿಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಲಭ್ಯವಾಗಬೇಕೆಂಬ ದೃಷ್ಟಿಯಿಂದ ಬಡವರು, ಜವಾನರು, ಕಾಮಿಕರು ಸಹ ಶ್ರೇಷ್ಠಮಟ್ಟದ ಶಾಲೆಗಳನ್ನರಿಸಿಕೊಂಡು ಹೋಗುತ್ತಿರುವುದು ಸರ್ವವೇದ್ಯ. ಶೈಕ್ಷಣಿಕ ದೃಷ್ಟಿಯಿಂದ ಇದು ಸಲ್ಲಕ್ಷಣ. ಸರ್ಕಾರಿ ಶಾಲಾ ಕಾಲೇಜುಗಳಿಗಿಂತ ಖಾಸಗಿ ಶಾಲಾಕಾಲೇಜುಗಳಲ್ಲಿ ಉತ್ತಮಮಟ್ಟದ ವಿದ್ಯೆ ದೊರೆಯುತ್ತದೆಂಬುದು ಅವರಿಗೂ ಗೊತ್ತು. ಶಾಲಾ ಕಾಲೇಜುಗಳು ಹೊಟ್ಟೆ ಹೊರಕರ. ಧನ ಪಿಶಾಚಿಗಳ ವ್ಯಾಪಾರ ಸಂಸ್ಥೆಗಳಾಗಬಾರದು. ಖಾಸಗಿ ಸಂಸ್ಥೆಗಳ ಖರ್ಚಿನಲ್ಲಿ ಸರ್ಕಾರ ಲೆಕ್ಕ ತನಿಖಾವಿಭಾಗವನ್ನು ತೆರೆದು ಅವುಗಳ ಅಯವ್ಯಯಗಳ ಮೇಲೆ ಕಣ್ಣಿರಿಸಬೇಕು. ಮಠಗಳು ನಡೆಸುವ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಹಣ ದುರ್ವ್ಯಯವಾಗುವುದಿಲ್ಲ. ಕಾಲೇಜುಗಳ ಅಭಿವೃದ್ಧಿಗಾಗಿ ಅದು ಸಂಪೂರ್ಣವಾಗಿ ಬಳಕೆಯಾಗುತ್ತದೆ. ರಾಜಕೀಯ ಕಾರಣಗಳಿಗಾಗಿ ಹುಚ್ಚು ಹಣಬೆಗಳಂತೆ ಮಿತಿಮೀರಿ ಹೆಚ್ಚುತ್ತಿರುವ ವಿದ್ಯಾ ಸಂಸ್ಥೆಗಳನ್ನು ತಡೆಗಟ್ಟದಿದ್ದರೆ, ಗಾತ್ರಕ್ಕಿಂತ ಗುಣವನ್ನು ರಕ್ಷಿಸದಿದ್ದರೆ ವಿದ್ಯಾಕ್ಷೇತ್ರದಲ್ಲಿ ಅಲ್ಲೋಲಕಲ್ಲೋಲವಾಗುವುದುಂತು ನಿಶ್ಚಿತವೆಂದು ದೇಜಗೌ ಹೇಳುತ್ತಾರೆ. ಸ್ವತಃ ಶಿಕ್ಷಣ ತಜ್ಞರಾದ ಅವರು ಶಿಕ್ಷಕರಾಗಿಯೂ ಪಾಠಮಾಡಿದವರು ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ತಮ್ಮ ಕಣ್ಣಾರೆ ಕಂಡವರು. ಪರೀಕ್ಷೆಗಳು ನಿರ್ಭೀತಿಯಿಂದ, ಅಕ್ರಮಗಳಿಂದ ಮುಕ್ತವಾಗಿ ನಡೆಯಬೇಕು ಎನ್ನುತ್ತಾರೆ. ಶಿಕ್ಷಣ ಇಲಾಖೆಯು ಶಾಲಾ, ಕಾಲೇಜುಗಳನ್ನು ತೆರೆಯಲು ಹಿಂದುಮುಂದೆ ಯೋಚಿಸದೆ ಅನುಮತಿ ನೀಡುತ್ತಿವೆ, ಇದು ಸರಿಯಲ್ಲ. ನಾಯಿಕೊಡೆಗಳಂತೆ ಬೆಳೆದಿರುವ ಕೆಲವೊಂದು ಶಿಕ್ಷಣ ಸಂಸ್ಥೆಗಳು ಪೋಷಕರಿಂದ ವಂತಿಗೆ ವಸೂಲಿ ಮಾಡಲು ನಿಂತಿವೆಯೇ ಹೊರತು ವಿದ್ಯಾರ್ಥಿಗಳ ಭವಿಷ್ಯದ ಕಡೆಗೆ ಚಿಂತಿಸುತ್ತಿಲ್ಲವೆಂದು ನೊಂದು ನುಡಿಯುತ್ತಾರೆ.

ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ, ವಿಸ್ತರಿಸುವ ಮತ್ತು ಊರ್ಜಿತಗೊಳಿಸುವ ದೃಷ್ಟಿಯಿಂದ ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇಕಡ ೧೫ ಭಾಗವನ್ನು ರಾಜ್ಯಸರ್ಕಾರ ಘೋಷಣೆಯನ್ನು ಮಾಡಿದೆ. ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ

ತಳಮಳವುಂಟಾಗಿ, ಶಿಕ್ಷಕರಲ್ಲಿ ತಳಮಳವುಂಟಾಗಿದೆ. ಶಿಕ್ಷಣಾರ್ಥಿಗಳಲ್ಲಿ ಅಂಜಿಕೆ ಉಂಟಾಗಿದೆ. ಪ್ರಾಥಮಿಕ ಶಿಕ್ಷಣದ ಬಗೆಗಿನ ಸರ್ಕಾರದ ನಿಲುವು ಸಾಧುವಾದದ್ದು. ಮುಂದುವರಿದ ದೇಶಗಳಲ್ಲಿ ಪದವಿಗಳ ಬಗ್ಗೆ ವಿದ್ಯಾರ್ಥಿಗಳಾಗಲಿ, ತಂದೆ-ತಾಯಿಯರಿಗಾಗಲಿ ವ್ಯಾಮೋಹವಿಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸಾವಿರಾರು ವರ್ಷಗಳಿಂದ ವಿದ್ಯೆಯಿಂದ ವಂಚಿತರಾದ ಜನರಲ್ಲಿ ಡಿಗ್ರಿಗಳ ವ್ಯಾಮೋಹ ಸಹಜವಾದದ್ದು. ಆದರೂ ಉನ್ನತ ಶಿಕ್ಷಣ ಸಮಾಜದ ಜವಾಬ್ದಾರಿಯೆಂಬ ಗಾಂಧೀಜಿಯ ಸಲಹೆ ಸ್ವೀಕಾರ ಯೋಗ್ಯವಾದದ್ದು. ಪದವಿಪೂರ್ವ ಕಾಲೇಜುಗಳನ್ನು ಸರ್ಕಾರವೇ ಸ್ಥಾಪಿಸುವಾಗ ಅಥವಾ ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ನೀಡುವಾಗ ಯಾವ ಸರ್ಕಾರವೂ ಯಾವೊಂದು ಅಳತೆಗೋಲನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಯನ್ನು ಕಸಿದುಕೊಂಡ ನಂತರ ಸರ್ಕಾರವೇ ಕಾಲೇಜುಗಳಿಗೆ ಮಾನ್ಯತೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದೆ. ಮಾನ್ಯತೆ ನೀಡುವಾಗ ಪ್ರಾದೇಶಿಕ ಅವಶ್ಯಕತೆಯನ್ನಾಗಲಿ ತಜ್ಞರ ಸಲಹೆಯನ್ನಾಗಲಿ ಲಕ್ಷಿಸದೇ ರಾಜಕೀಯ ಒತ್ತಡಕ್ಕೆ ಹಾಗೂ ತಜ್ಞೇತರ ಕಾರಣಗಳಿಗೆ ಮಣಿಯುವುದರಿಂದ ಇಂದು ಅನೇಕ ಸಮಸ್ಯೆಗಳು ಹೆಡೆಯೆತ್ತಿವೆ. ಈ ಸಮಸ್ಯೆಗಳಿಗೆ ಸರ್ಕಾರವೇ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ. ಹತ್ತಾರು ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬಂದಿರುವ ಕಾಲೇಜುಗಳಿಗೆ ಅನುದಾನ ಹೆಚ್ಚಿಸದಿದ್ದರೂ ಹಿಂದಿನಿಂದ ಬರುತ್ತಿದ್ದ ಅನುದಾನವನ್ನು ಕಡಿತಗೊಳಿಸುವುದು ನ್ಯಾಯವಲ್ಲ. ಬೋಧನೆ ಶಿಸ್ತುಗಳಲ್ಲಿ ಲೋಪದೋಷಗಳಿದ್ದು ಫಲಿತಾಂಶಗಳಲ್ಲಿ ಭಾರಿ ಕೊರತೆಯಿದ್ದರೆ ಅನುದಾನವನ್ನು ತಾತ್ಕಾಲಿಕವಾಗಿ ಕಡಿತಗೊಳಿಸಬಹುದು ಎಂದು ದೇಜಗೌ ಹೇಳುತ್ತಾರೆ.

ಕೆಲವು ಖಾಸಗಿ ಕಾಲೇಜುಗಳಲ್ಲಿ ಹಣ ದುರುಪಯೋಗವಾಗುತ್ತಿದೆ ನಿಜ. ಅವುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆ. ಅಂತ ಕಾಲೇಜುಗಳ ಅನುದಾನವನ್ನು ಕತ್ತರಿಸಬಹುದು. ಇಲ್ಲವೇ ಅವುಗಳ ಮಾನ್ಯತೆಯನ್ನು ರದ್ದುಗೊಳಿಸಬಹುದು. ಮಾನ್ಯತೆ ಕೊಟ್ಟನಂತರ ಪ್ರಾರಂಭದಲ್ಲಿ ಏನೇ ಷರತ್ತುಗಳಿದ್ದರೂ ಮೂಲಭೂತ ಸೌಕರ್ಯಗಳಿದ್ದರೆ, ಅನುದಾನ ಕೊಡಬೇಕಾದ್ದು ಸರ್ಕಾರದ ಕರ್ತವ್ಯ, ಒಳ್ಳೆಯ ಫಲಿತಾಂಶಗಳನ್ನು ಗಳಿಸಿ, ಏಳೆಂಟು ವರ್ಷ ದುಡಿದ ಅಧ್ಯಾಪಕರ ಗತಿ ಏನು? ಮಾನವೀಯತೆಯ ದೃಷ್ಟಿಯಿಂದ ಮಾತ್ರವಲ್ಲ, ನ್ಯಾಯದ

ದೃಷ್ಟಿಯಿಂದಲೂ ಅಂಥ ಕಾಲೇಜುಗಳಿಗೇನು ದಾನ ನೀಡಲೇಬೇಕು. ಅಧ್ಯಾಪಕರನ್ನು ವಿದ್ಯೆ ಕಲಿಸುವ ಗುರುಗಳನ್ನು ನಿರಾಶೆಗೊಳಿಸಿದ್ದಾದರೆ, ಬೋಧನೆ ಯಶಸ್ವಿಯಾಗುವುದಿಲ್ಲ. ಶಿಕ್ಷಣದ ಮಟ್ಟ ಮೇಲೇರುವುದಿಲ್ಲವೆಂಬುದನ್ನು ಕೀಳ್ಮಟ್ಟದ ಶಿಕ್ಷಣದ ಪರಿಣಾಮ ಏನಾಗಬಹುದೆಂಬುದನ್ನು ವಿವೇಕಿಗಳು ಅರಿಯಬೇಕಾಗಿದೆ" ಎನ್ನುತ್ತಾರೆ.

ಶಿಕ್ಷಣ ಕ್ಷೇತ್ರಕ್ಕೆ ವೆಚ್ಚಮಾಡುತಿರುವ ಹಣದ ಬಗ್ಗೆ ದೇಜಗೌ ಹೀಗೆ ಹೇಳುತ್ತಾರೆ. "ಶಿಕ್ಷಣ ಕ್ಷೇತ್ರಕ್ಕೆ ಖರ್ಚಾಗುತ್ತಿರುವ ಹಣ ಸಾರ್ಥಕವಾಗುತ್ತಿಲ್ಲವೆಂಬುದು ಸತ್ಯದ ಸಂಗತಿ. ಇಂದಿನ ವಿದ್ಯಾಭ್ಯಾಸದ ಮಟ್ಟದ ಕುಸಿತಕ್ಕೆ ರಾಜಕಾರಣಿ, ಅಧ್ಯಾಪಕ ಮತ್ತು ವಿದ್ಯಾರ್ಥಿ ಈ ಮೂವರೂ ಪ್ರಮುಖ ಕಾರಣರು. ವಿದ್ಯಾಭ್ಯಾಸದ ಮಟ್ಟ ಕುಸಿಯಲು ಪಠ್ಯಪುಸ್ತಕಗಳಾಗಲಿ, ಪಠ್ಯಕ್ರಮಗಳಾಗಲಿ ಕಾರಣವೆಂದು ಹೇಳುವುದು ಮೂರ್ಖತನವಾಗುತ್ತದೆ. ರಾಜಕೀಯ ಕ್ಷೇತ್ರದ ಅಶಿಸ್ತು ವಿದ್ಯಾಕ್ಷೇತ್ರದಲ್ಲಿಯೂ ಪ್ರವೇಶಮಾಡಿ ಶಿಕ್ಷಣದಲ್ಲಿ ಅನುದಾನದ ಕಡಿತ ಉಂಟಾಗುತ್ತಿದೆ. ಜಾತಿ ಭೂತದ ಕುಣಿತದಿಂದಾಗಿ ಶಿಕ್ಷಣ ರಂಗದಲ್ಲಿಯ ಅನುದಾನಕ್ಕೆ ಕತ್ತರಿ ಬೀಳುತ್ತಿದೆ.

ಪ್ರಾಧ್ಯಾಪಕರಲ್ಲಿ ಬದ್ಧತೆ ಮಾಯವಾಗುತ್ತಿರುವ ಬಗ್ಗೆ ದೇಜಗೌ ವಿಷಾದ ವ್ಯಕ್ತಪಡಿಸುತ್ತಾ "ಅಧ್ಯಾಪಕರಲ್ಲಿ ವೃತ್ತಿನಿಷ್ಠೆ, ಮನೋಧರ್ಮ ಹಾಗೂ ಸತತ ಅಭ್ಯಾಸ ಪ್ರವೃತ್ತಿ ದಿನೇ ದಿನೇ ಇಳಿಮುಖವಾಗುತ್ತಿದೆ. ಹೇಗೋ ಪದವಿಯನ್ನು ಪಡೆದು ನೌಕರಿ ಸಂಪಾದಿಸುವುದು ರಾಜಕಾರಣಕ್ಕೆ ಇಳಿಯುವುದು ಶಿಕ್ಷಣಾರ್ಥಿಗಳ ಉದ್ದೇಶವಾಗಿದೆ. ವಿದ್ಯಾರ್ಥಿಗಳಲ್ಲಿ ಮತ್ತು ಅಧ್ಯಾಪಕರಲ್ಲಿ ಜ್ಞಾನಾರ್ಜನೆಯ ಕಾತರತೆ ಎಳ್ಳಷ್ಟೂ ಇಲ್ಲ. ಗುರು-ಶಿಷ್ಯರಲ್ಲಿ ಸಾಮರಸ್ಯ ಭಾವನೆಯಂತೂ ಎಳ್ಳಷ್ಟೂ ಇಲ್ಲ. ಪಾಠಮಾಡದಿರುವ ಚಾರಿತ್ರ್ಯಹೀನ ಅಧ್ಯಾಪಕರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಕಲುಮಾಡಲು ಸಹಾಯಕರಾಗಿ ನಿಲ್ಲುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಪ್ರಶ್ನೆಪತ್ರಿಕೆಗಳು ಮತ್ತು ಉತ್ತರಪತ್ರಿಕೆಗಳು ಬಹಿರಂಗಗೊಂಡಿರುತ್ತವೆ. ಜ್ಞಾನ ಕುತೂಹಲವಿಲ್ಲದ, ವ್ಯಾಸಂಗ ಅಭಿರುಚಿಯಿಲ್ಲದ ಸುಶಿಕ್ಷಿತ ವಾತಾವರಣದ ಪರಿಚಯವಿಲ್ಲದ ವಿದ್ಯಾರ್ಥಿಗಳು ಸದಾಕಾಲ ಮುಷ್ಕರ, ಮೆರವಣಿಗೆ ಕಲ್ಲೆಸತಗಳಲ್ಲಿ ತೊಡಗಿರುತ್ತಾರೆ" ಎಂದು ವಿಷಾದದಿಂದ ದೇಜಗೌ ಹೇಳುತ್ತಾರೆ.

ಸರ್ಕಾರ ಉನ್ನತ ಶಿಕ್ಷಣಕ್ಕೆ ಅನುದಾನವನ್ನು ಕಡಿತ ಮಾಡುತ್ತಿರುವುದು ಸರಿಯಲ್ಲ. ದೇಶದ ಎಲ್ಲ ಅಭಿವೃದ್ಧಿಗೆ ಮೂಲವಿದ್ಯೆ, ಆ ವಿದ್ಯೆಗೆ ಕೊಡುತ್ತಿರುವ ಅನುದಾನ ತುಂಬಾ

ಕಡಿಮೆ. ಸರ್ಕಾರ ಏನೂ ಕೆಲಸ ಮಾಡದ ಇಲಾಖೆಗಳಿಗೆ ಹೆಚ್ಚಿನ ಹಣವನ್ನು ನೀಡುವ ಬದಲು ಅದೇ ಹಣವನ್ನು ಶಿಕ್ಷಣ ಕ್ಷೇತ್ರದ ಕಡೆಗೆ ವಿನಿಯೋಗಿಸಬೇಕೆಂದು ದೇಜಗೌ ಸರ್ಕಾರಕ್ಕೆ ಸಲಹೆಕೊಡುತ್ತಾರೆ. ಕೆಲವೊಂದು ಊರುಗಳಲ್ಲಿ ಶಾಲೆಗಳಿಲ್ಲ. ಇದ್ದರೂ ಯಾವುದೋ ಪಡಶಾಲೆಯಲ್ಲಿ ಅಥವಾ ಊರ ಮುಂದಿನ ಅರಳೀ ಮರದ ಕೆಳಗೆ ನಡೆಯುತ್ತಿವೆ. ಸರ್ಕಾರ ಈ ಕಡೆಗೆ ಗಮನಹರಿಸಿ ಶಿಕ್ಷಣಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಪ್ರಯತ್ನ ಮಾಡಬೇಕು. ದೇಶಕ್ಕೆ ಹಾಗೂ ಸಮಾಜಕ್ಕೆ ಆದರ್ಶಪ್ರಾಯರಾಗುವಂತಹ ವಿದ್ಯಾರ್ಥಿಗಳನ್ನು ರೂಪಿಸಬೇಕೆಂದು ದೇಜಗೌ ಸಲಹೆ ನೀಡುತ್ತಾರೆ.

ಮಾತೃಭಾಷಾ ಶಿಕ್ಷಣ ಕುರಿತಂತೆ ದೇಜಗೌರವರು ಹೀಗೆ ಹೇಳುತ್ತಾರೆ, "ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯ ಅಥವಾ ಕನ್ನಡ ಭಾಷೆಯ ಮಾಧ್ಯಮದಲ್ಲಿ ನಡೆಯಬೇಕೆನ್ನುವುದು ಸರಿ. ಆ ಮುಂದೆಯೂ ರಾಜ್ಯಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕಾದ್ದು ಭಾಷಾ ವಿಜ್ಞಾನ ಮತ್ತು ಮನೋವಿಜ್ಞಾನದ ದೃಷ್ಟಿಯಿಂದ ಅನಿವಾರ್ಯ. ಎಲ್ಲ ಡಿಪ್ಲೊಮಾ ತರಗತಿಗಳಲ್ಲಿಯೂ ಕನ್ನಡವನ್ನು ಕಲಿಸಬೇಕು. ವೈದ್ಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾರಂಭದಲ್ಲಿ ದ್ವಿಭಾಷಾ ಮಾಧ್ಯಮವೂ ಎಂಟು ಹತ್ತು ವರ್ಷಗಳ ನಂತರ ಕನ್ನಡ ಮಾಧ್ಯಮವೂ ಇರಬೇಕೆಂದು ಪ್ರಾಧಿಕಾರ ಶಿಫಾರಸ್ಸು ಮಾಡಬೇಕಿತ್ತು. ಇಂಗ್ಲಿಷ್ ಮಾಧ್ಯಮದ ಚಾಲನೆಗೆ ಅಡ್ಡಿ ಅನಾವಶ್ಯಕ, ಅಂದರೆ ವೃತ್ತಿ ಶಿಕ್ಷಣ ತರಗತಿಗಳಿಗೆ ಹಾಗೂ ಸರ್ಕಾರದ ಎಲ್ಲ ಉದ್ಯೋಗಗಳಿಗೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನೇ ಆರಿಸಿಕೊಳ್ಳಬೇಕು. ಆಗ ಇಂಗ್ಲಿಷ್ ತಾನಾಗಿಯೇ ಸಾಯುತ್ತದೆ. ಆ ಬಗೆಗಿನ ಪ್ರಾಧಿಕಾರದ ಶಿಪಾರಸ್ಸು ಯೋಗ್ಯವಾಗಿದೆ.

ಸಂಪೂರ್ಣ ಕನ್ನಡ ಮಾಧ್ಯಮದ ಶಾಲಾ ಕಾಲೇಜುಗಳಿಗೆ ವಿಶೇಷ ಅನುದಾನ ನೀತಿಯನ್ನು ರೂಪಿಸಬೇಕು. ವೈದ್ಯರಾಗಲಿ, ಇಂಜಿನಿಯರಾಗಲಿ, ಕೃಷಿತಜ್ಞರಾಗಲಿ ಸಾಮಾನ್ಯ ಜನತೆಯ ಜತೆಯಲ್ಲಿ ವ್ಯವಹರಿಸಬೇಕಾಗಿರುವುದರಿಂದ ಅವರು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯುವಂತಾಗಬೇಕು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಪೂರ್ಣವಾಗಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು. ವಿಶ್ವವಿದ್ಯಾನಿಲಯಗಳಲ್ಲಿ "ಕ್ರಿಯಾತ್ಮಕ ಕನ್ನಡ"ವನ್ನು ಕಲಿಸಲು ಏರ್ಪಾಡು ಮಾಡಬೇಕೆಂದು ದೇಜಗೌ ತಿಳಿಸುತ್ತಾರೆ. ಕನ್ನಡ ಸಂಸ್ಕೃತಿ ಪಠ್ಯ ಮತ್ತು ಪಠ್ಯವಿಷಯ ಪುನರ್ ವಿಂಗಡಣೆಗೊಂಡು ಸಂಸ್ಕೃತಿ ಪಠ್ಯಗಳಾಗಿ ರೂಪಾಂತರಗೊಳ್ಳಬೇಕು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವರದಿಯಂತೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡವೇ ಮಾಧ್ಯಮವಾಗಬೇಕೆಂಬುದು ದೇಜಗೌ ಅವರ ಆಶಯವಾಗಿದೆ. ಗಡಿರಾಜ್ಯದ ಮಂತ್ರಿಗಳು ವರ್ಷಕ್ಕೆರಡು ಭಾರಿ ಸಭೆ ಸೇರಿ ಎರಡೂ ಕಡೆಯ ಭಾಷಾ ಅಲ್ಪಸಂಖ್ಯಾತರ ಅವಶ್ಯಕತೆಗಳನ್ನು ಗುರುತಿಸಿ, ಅವರ ಸಂಖ್ಯೆಯ ಆಧಾರದ ಮೇಲೆ ಶೈಕ್ಷಣಿಕ ಸೌಲಭ್ಯಗಳನ್ನು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಬೇಕಾದ್ದು ಸಂಬಂಧಪಟ್ಟ ಎಲ್ಲಾ ರಾಜ್ಯಸರ್ಕಾರಗಳ ಕರ್ತವ್ಯವಾಗಿದೆ ಎಂದು ದೇಜಗೌ ಹೇಳುತ್ತಾರೆ.

ಅಡಿಟಿಪ್ಪಣಿಗಳು

೧. ಡಾ. ಎಂ.ವೆಂಕಟೇಶ, ಸಮಗ್ರ ಚಿಂತನಕಾರ ದೇಜಗೌ, ವಿನುತ ಪ್ರಕಾಶನ, ಕೃಷಿನಗರ, ಶಿವಮೊಗ್ಗ, ೨೦೧೦, ಪು. ೧೧೦.

೨. ಅದೇ., ಪು. ೧೧೧

೩. ಅದೇ., ಪು. ೧೧೨

೪. ಅದೇ., ಪು. ೧೧೩

೫. ಅದೇ.,

೬. ಅದೇ., ಪು. ೧೧೫

೭. ಅದೇ., ಪು. ೧೧೬.

೮. ಅದೇ., ಪು. ೧೧೭

೯. ಅದೇ., ಪು. ೧೧೯

೧೦. ಅದೇ., ಪು. ೧೨೦

೧೧. ಅದೇ., ಪು. ೧೨೨.

೧೨. ಅದೇ., ಪು. ೧೨೩.

೧೩. ಅದೇ., ಪು. ೧೨೪.

೧೪. ಅದೇ.,

೧೫. ಅದೇ., ಪು. ೧೨೫.

೧೬. ಅದೇ., ಪು. ೧೨೬.

೧೭. ಅದೇ.,

೧೮. ಅದೇ., ಪು. ೧೨೭.


ಅಧ್ಯಯನ ಸಂಸ್ಥೆ



ಅಧ್ಯಾಯ ನಾಲ್ಕು
ದೇಜಗೌರವರ ಶೈಕ್ಷಣಿಕ ಹೋರಾಟಗಳು

ದೇಜಗೌರವರು ಬಾಲ್ಯದಲ್ಲಿ ಅತ್ಯಂತ ಬಡತನ, ಮೌಢ್ಯ ಪರಿಸರ, ಸೌಲಭ್ಯವಂಚಿತ ಕುಟುಂಬದಲ್ಲಿ ಜನಿಸಿ ಕಷ್ಟಕರವಾದ ಸಂದರ್ಭಗಳನ್ನು ಎದುರಿಸುತ್ತಿದ್ದರು. ಅಂಥ ಸಂದರ್ಭದಲ್ಲೂ ಅವರ ಓದುವ ಹಂಬಲ ಮಣ್ಣಾಗದೆ ದನ, ಕುರಿ ಮೇಯಿಸುತ್ತಲೇ ಶಾಲೆಯತ್ತ ಮುಖ ಮಾಡಿದ್ದರು. ದೇಜಗೌ ರವರು ಶಾಲೆಗೆ ಹೊದರೆ ಇವರ ತಂದೆಗೆ ಸಹನೆ ಇರುತ್ತಿರಲಿಲ್ಲ. ಸಹನೆ ಮೀರಿದಾಗ ಏಟು ತಪ್ಪುತ್ತಿರಲಿಲ್ಲ. ಒಂದೆರಡು ಮೇಕೆ ಮೇಯಿಸಿದರೆ ದನಗಳನ್ನು ಮೇಯಿಸಿದರೆ ತಮಗೆ ಸಹಾಯವಾಗಬಹುದು ಎಂದು ದೇಜಗೌ ಅವರ ತಂದೆಯ ಆಸೆಯಾಗಿತ್ತು. ಇಂತಹ ಸಂದರ್ಭದಲ್ಲಿ ಗುರುಕೃಪೆಯ ಸೆಳೆತವೋ ಏನೋ ಗೊತ್ತುಗುರಿಯಿಲ್ಲದೆ ಶಾಲೆಗೆ ಸೇರಿ ಎಲ್.ಎಸ್.ಎಲ್.ಸಿ. ಪರೀಕ್ಷೆ ಕಟ್ಟಿದಾಗ ಮಗ ಪ್ರೈಮರಿ ಶಾಲೆಯ ಮೇಸ್ತ್ರು ಕೆಲಸಕ್ಕೆ ಸೇರಿ ತಿಂಗಳಿಗೆ ೧೦-೧೫ ರೂಪಾಯಿ ಸಂಪಾದಿಸುತ್ತಾನೆಂಬ ಹೆಮ್ಮೆ ಅವರಿಗಿತ್ತು. ತನ್ನ ಮಗನ ಓದು ಮುಂದುವರಿದಂತೆಲ್ಲ ನಾನು ಅಮಲ್ದಾರನಾಗಬೇಕೆಂಬುದೇ ಅವರ ಬಯಕೆಯಾಗಿತ್ತು. ಅಂತಹ ಸಂದರ್ಭದಲ್ಲಿ ನನಗಂತು ಗುರುವಿಲ್ಲ, ಗುರಿಯಿಲ್ಲ, ಮಹತ್ತರವಾದಂತಹ ಆಕಾಂಕ್ಷೆಯಿಲ್ಲ ಇಂಟರ್ ಮೀಡಿಯಟ್ ತರಗತಿಗೆ ಏರುವ ತವಕ ವ್ಯಕ್ತಪಡಿಸುತ್ತಿದ್ದರು. ಆ ಸಂದರ್ಭದಲ್ಲಿ ಗುರುಕೃಪೆ ಗ್ರಂಥಗಳ ಒಡನಾಟ ದೇಜಗೌರವರಿಗೆ ದೊರೆತದ್ದು ಪುಣ್ಯ. ಇಂತಹ ಸಂದರ್ಭದಲ್ಲಿ ಎಂತಹ ಕಷ್ಟಬಂದರೂ ದೇಜಗೌ ಎದೆಗುಂದದೆ ಮುನ್ನುಗ್ಗಿದರು. 'ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ, ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ, ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಅದು ಗೋವರ್ಧನಗಿರಿಯಾಗುತ್ತದೆ' ಎಂದು ಗುರು ಕುವೆಂಪುರವರ ವಾಣಿ ಮೊಳಗಿತು. ಅದು ನಿಜವಾಯಿತು. ಇದರಿಂದ ಅಲ್ಪತನ ಕರಗಿತು ದೌರ್ಬಲ್ಯಗಳು ಮುಚ್ಚಿಹೋದವು. ದೊಡ್ಡತನ ಸೇರಿತು. ನಾಲ್ಕು ಜನರ ಕಣ್ಣು ಬಾಯಿಗೆ ಬೀಳುವಂತಾಯಿತು. ನಾನೇನಾಗಬೇಕೋ ಆದೆ. ಇದು ಈಶ್ವರೇಚ್ಛೆ ಎಂದು ಕೊಂಡಿದ್ದಾರೆ ದೇಜಗೌರವರು. ಹೋರಾಟವೇ ಜೀವನ; ಶಕ್ತಿ ಸಾಮರ್ಥ್ಯಗಳ ನಿದರ್ಶನವೇ ಹೋರಾಟ. ಮಳೆಗಾಳಿ ಚಳಿ ಬಿಸಿಲುಗಳ ಆಘಾತಗಳಿಂದ ಗಿಡಮರಗಳು ಬಲಯುತವಾಗಿ ಬೆಳೆಯುತ್ತವೆ. ಸುಖದ ತಣ್ಣೆಳಲಲ್ಲಿ, ಬೆಳೆದ ಮೈ ಸಡಿಲವಾಗುತ್ತದೆ. ಮನಸ್ಸು ಜಡವಾಗುತ್ತದೆ.

ಗಂಧದಕೊರಡು ತೇದಷ್ಟು ಕಂಪು ಸೂಸುತ್ತದೆ. ಉಳಿಯಪೆಟ್ಟು ಬಿದ್ದಷ್ಟು ವಿಗ್ರಹ ಕಳೆಗೂಡುತ್ತದೆ. ವಿರೋಧ ಶಕ್ತಿಗಳಿಲ್ಲದಿದ್ದರೆ ಬಾಳಿನಲ್ಲಿ ಹೋರಾಟವೂ ಇಲ್ಲ. ಇದೆಲ್ಲದರ ಹಿಂದೆ ದೇಜಗೌರವರಿಗೆ ಗುರುಕೃಪೆ, ದೈವೀಶಕ್ತಿ, ಉತ್ಕಟ ಮನಸ್ಸು ಇದ್ದುದರಿಂದ ಎಂತಹ ಸಮಸ್ಯೆಗಳು ಬಂದರೂ ಎದೆ ಗುಂದದೆ ಹೋರಾಡುತ್ತಾ ತಮ್ಮ ಜೀವಮಾನವನ್ನೇ ಶೈಕ್ಷಣಿಕ ಉದ್ಧಾರಕ್ಕೆ ಕನ್ನಡಕ್ಕೆ ಮೀಸಲಾಗಿಟ್ಟಿರುವುದನ್ನು ನಾವು ನೋಡಬಹುದು. ಚಿಕ್ಕಂದಿನಲ್ಲಿ ಗೌಡ ಶ್ಯಾನುಭೋಗರ ಪಾಳೆಯಗಾರಿಕೆಯ ವಿರುದ್ಧ ಧಾಳಿ ನಡೆಸಬೇಕಾಯಿತು; ವಿದ್ಯಾರ್ಥಿದೆಶೆಯಲ್ಲಿ ಹಾಗೂ ನೌಕರಿಯ ಪ್ರಾರಂಭಾವಸ್ಥೆಯಲ್ಲಿ ಜಾತಿ ಭೂತವನ್ನೆದುರಿಸಬೇಕಾಯಿತು. ಮಧ್ಯಮ ವಯಸ್ಸಿನಲ್ಲಿ ಕನ್ನಡ ವಿರೋಧಿಗಳೊಡನೆ ದೇಜಗೌ ಕಾದಾಡಿದರು. ತಾಯಿನೆಲವನ್ನು ಮರೆತು ಪರಕೀಯರಿಗೆ ನಮ್ಮನ್ನು ಮಾರಿಕೊಂಡಿರುವ ಸಂದರ್ಭದಲ್ಲಿ ನನ್ನ ಹೋರಾಟ ನಿಲ್ಲುವಂತಿಲ್ಲ. ಬಾಳು ಮಣ್ಣುಗೂಡುವ ತನಕ ಈ ಹೋರಾಟವಂತು ನನಗೆ ತಪ್ಪಿದ್ದಲ್ಲ ಎನ್ನುವ ಮೂಲಕ ಜೀವನದುದ್ದಕ್ಕು ಹೋರಾಡುತ್ತಲೇ ಬಂದರು.

ಈ ಹೋರಾಟದ ಪರಿಣಾಮವಾಗಿ ಬಾಳಿನಲ್ಲಿ ಕಹಿಖಾರಗಳ ಅನುಭವ ದೇಜಗೌರವರಿಗೆ ಸಾಕಷ್ಟಾಗಿದೆ ಇವರ ಐವತ್ತು ವರ್ಷಗಳ ಹಿಂದಕ್ಕೆ ನೋಡಿದಾಗ ಹುಟ್ಟಿದ ಕೊಟ್ಟಿಗೆಯ ಹಿನ್ನೆಲೆಯಲ್ಲಿ ಇಂದಿನ ನನ್ನ ಬಾಳನ್ನು ಚಿತ್ರಿಸಿಕೊಂಡಾಗ ಅದೊಂದು ಅದ್ಭುತ ಪವಾಡವೆಂದು ತೋರುತ್ತದೆ. ಅ ಪವಾಡಕ್ಕೆ ಗುರುಕೃಪೆಯೇ ಕಾರಣ ಎಂದು ವಿನಯವನ್ನು ವ್ಯಕ್ತಪಡಿಸುತ್ತಾರೆ ದೇಜಗೌ.

ಇದನ್ನೆಲ್ಲ ಗಮನಿಸಿದಾಗ ದೇಜಗೌರವರು ಹುಟ್ಟು ಹೋರಾಟಗಾರರು ಎಂದೆನಿಸುತ್ತದೆ. ಶಿಕ್ಷಣವನ್ನು ಪಡೆಯಲು ಹಲವಾರು ಸಂಕಷ್ಟಗಳನ್ನು ಅನುಭವಿಸಿದ ದೇಜಗೌರವರು ಶೈಕ್ಷಣಿಕವಾಗಿಯೂ ಹೋರಾಟಮಾಡಿದ ಬಗೆ ಶ್ಲಾಘನೀಯ.

ಜ್ಞಾನ ಸಂಗ್ರಹಕ್ಕೆ, ಬುದ್ಧಿ ವಿಕಾಸಕ್ಕೆ ಪ್ರತಿಭಾ ಪ್ರಚೋದನೆಗೆ ಶಿಕ್ಷಣ ಅತಿಮುಖ್ಯವಾಗಿದೆ. ಅದು ಸದಾ ಜೀವಂತವಾಗಿದ್ದರೆ ಮಾತ್ರ ಅದರ ಪ್ರಯೋಜನ ಸಮಾಜಕ್ಕೆ ದೊರೆಯುತ್ತದೆ. ಸಮಾಜದ ಜೀವಸತ್ತ್ವವನ್ನು ಹೀರಿಕೊಂಡು, ದಿನದಿನವೂ ನವೀನವಾಗುವುದಾದರೆ ಮಾತ್ರ ಅದು ಜೀವಂತವಾಗಿದೆಯೆಂದು ಹೇಳಬಹುದು. ವಿಜ್ಞಾನ ತಂತ್ರಜ್ಞಾನಗಳ ಪ್ರಯೋಜನವನ್ನು ಪಡೆದುಕೊಂಡು ಹೊಸ ಅವಿಷ್ಕಾರಗಳ ಚೈತನ್ಯವನ್ನು ತನ್ನೊಳಗೆ ಮೈಗೂಡಿಸಿಕೊಂಡಾಗಲೇ ಅದು ಸಮಾಜಕ್ಕೆ ವರವಾಗಿ ಪರಿಣಮಿಸುತ್ತದೆ. ಇದರಿಂದ ಶಿಕ್ಷಣಕ್ಷೇತ್ರ ವಿಶಾಲವಾಗುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ಶಾಲಾ ಕಾಲೇಜುಗಳು ಸ್ಥಾಪನೆಗೊಂಡಂತಹ ಸಂದರ್ಭ. ಇದರಿಂದ ಕೆಲಸಮಾಡಲಿಕ್ಕೆ ಅವಕಾಶ ಸಿಗುತ್ತದೆ.

ಗ್ರಾಮೀಣ ಹಾಗೂ ನಾಗರಿಕ ಜೀವನದ ತಾರತಮ್ಯವನ್ನು ತೊಡೆದು ಸಮಾನತೆಯನ್ನು ಸಾಮಾಜಿಕ ನ್ಯಾಯವನ್ನೂ ಸಾಮಾನಾವಕಾಶವನ್ನು ಒದಗಿಸುವುದೇ ಶಿಕ್ಷಣದ ಮೂಲ ಉದ್ದೇಶವಾಗಿದೆ. ಮುಕ್ಕಾಲು ಭಾಗ ಹಳ್ಳಿಗರು ಬಡವರು ತಿನ್ನಲು ಕೂಳಿಲ್ಲ ಉಡಲು ಬಟ್ಟೆಯಿಲ್ಲ. ಉಳಿಯಲು ಸೂರಿಲ್ಲ, ಕೈಕಾಲು ಬಲಿತು ಓಡಾಡುವಂತಾದ ಕೂಡಲೇ ಅವರು ಮಕ್ಕಳನ್ನು ಜಮೀನುಕೆಲಸಕ್ಕೆ ಹಾಕಿಕೊಳ್ಳುತ್ತಾರೆ. ಅವರನ್ನು ಶಾಲೆಗೆ ಸೇರಿಸುವುದಾದರೂ ಹಾಜರಾತಿ ಇರುತ್ತಿರಲಿಲ್ಲ, ಕ್ರಮವಾಗಿ ಶಾಲೆಗೆ ಹೋಗಬಹುದಾದರೂ, ಶಾಲೆಯ ವೇಳೆಮುಗಿದ ನಂತರ ಅವರಿಗೆ ಮನೆಗೆಲಸ ಕಾದಿರುತ್ತದೆ. ಅದರಿಂದಾಗಿ ಅವರಿಗೆ ಮನೆಯಲ್ಲಿ ಓದಲು ಬಿಡುವಿರುವುದಿಲ್ಲ. ಅವರ ಮನಸ್ಸು ಯಾವಾಗಲೂ ಓದು ಬರಹಗಳಿಗೆ ಸಂಬಂಧಿಸಿರದ ವ್ಯರ್ಥ ವಿಚಾರಗಳಲ್ಲಿ ತೊಡಗಿರುತ್ತದೆ. ದನಕುರಿಗಳೊಡನೆ ಬೆಳೆದ ಅವರು ದನಕುರಿಗಳೇ ಆಗುತ್ತಾರೆ. ಸಹಸ್ರ ಸಹಸ್ರ ವರ್ಷಗಳಿಂದ ಅಜ್ಞಾನ ಮೌಢ್ಯಗಳಲ್ಲಿ ಮುಳುಗಿರುವ, ನಾಗರಿಕ ಪ್ರಪಂಚಕ್ಕೆ ಸಂಪೂರ್ಣವಾಗಿ ಎರವಾದ, ಅನುದಿನವೂ ಶ್ರೀಮಂತರ ಪುರೋಹಿತರ ಬುದ್ಧಿ ಜೀವಿಗಳ ಅಧಿಕಾರಿಗಳ ಶೋಷಣೆಗೆ ಸಿಕ್ಕಿ, ಉಸಿರಾಡುವ ಪ್ರಾಣಿಗಳಂತಿರುವ ಹಳ್ಳಿಗರ ಮಕ್ಕಳನ್ನು ನಗರದ ಉತ್ತಮ ವರ್ಗದ ಮಕ್ಕಳ ನಡುವಣ ಕಂದಕವನ್ನು ಮುಚ್ಚಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ನಗರದ ಮಕ್ಕಳ ಯೋಗಕ್ಷೇಮದ ಜವಾಬ್ದಾರಿಯನ್ನು ನಗರದವರಿಗೆ ವಹಿಸಿ, ಹಳ್ಳಿಯ ಮಕ್ಕಳ ಕ್ಷೇಮವನ್ನು ನೋಡಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ದೇಜಗೌರವರು ಮೂರು ಪ್ರೌಢಶಾಲೆಗಳನ್ನು ಒಂದು ಪದವಿಪೂರ್ವ ಕಾಲೇಜನ್ನು ಮತ್ತು ಒಂದು ಪದವಿ ಕಾಲೇಜನ್ನು ಸ್ಥಾಪನೆ ಮಾಡಿ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ವಿದ್ಯಾಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ದೇಜಗೌರವರು ತುಂಬಾ ಹೋರಾಟವನ್ನೇ ಮಾಡಿದ್ದಾರೆ. ಈ ಎರಡು ವರ್ಗದ ಮಕ್ಕಳ ನಡುವಣ ಕಂದಕವನ್ನು ಮುಚ್ಚಬೇಕಾದ್ದು ಸರ್ಕಾರದ ಜವಾಬ್ದಾರಿ ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಬೇಕಾಗಿರುವುದು ಮೌಢ್ಯದಿಂದ ಪಾರು ಮಾಡಬಲ್ಲ ವೈಚಾರಿಕತೆಯನ್ನು ವೈಜ್ಞಾನಿಕವಾಗಿ ಸುಲಭವಾಗಿ ಗ್ರಹಿಸಬಲ್ಲ ಶಿಕ್ಷಣ ಅವಶ್ಯಕವಾಗಿತ್ತು ಎಂಬುದಾಗಿ ದೇಜಗೌ ಸಲಹೆ ನೀಡುತ್ತಾರೆ.

ಶಿಕ್ಷಣಸೌಧಕ್ಕೆ ತಳಹದಿ ಸ್ವರೂಪದಲ್ಲಿರುವ ಪ್ರಾಥಮಿಕ ಶಿಕ್ಷಣದ ಕಡೆಗೆ ಸರ್ಕಾರದ ಗಮನ ವಿಶೇಷವಾಗಿ ಹರಿಯಬೇಕಾಗಿದೆ. ಉಚ್ಚ ಶಿಕ್ಷಣದ ಲೋಪದೋಷಗಳಿಗೆ ಪ್ರಾಥಮಿಕ ಶಿಕ್ಷಣ ಸರಿಯಾಗಿಲ್ಲದಿರುವುದೇ ಕಾರಣ. ಜೀವನದ ಸಕಲ ಕ್ಷೇತ್ರಗಳನ್ನು ವ್ಯಾಪಿಸಿಕೊಂಡಿರುವ ರಾಜಕೀಯವೇ ಪ್ರಾಥಮಿಕ ಶಿಕ್ಷಣದ ಸೋಲಿಗೂ ಕಾರಣವಾಗಿದೆ. ರಾಜಕೀಯದ ದಂಥೆಯಲ್ಲಿ ತೊಡಗಿರದ ಉಪಾಧ್ಯಾಯರು ಸಿಗುವುದೇ ವಿರಳ. ಇದನ್ನು ಗಮನಿಸಿದ ದೇಜಗೌರವರು ಹೇಳುವುದೆಂದರೆ "ಶಿಕ್ಷಣ ಕ್ಷೇತ್ರದ ಪೂರ್ಣ ನಿರ್ವಹಣೆಯನ್ನು ರಾಜಕೀಯ ಮುಕ್ತರಾದ ಶಿಕ್ಷಕರಿಗೆ ವಹಿಸಿದಾಗಲೇ ಶಿಕ್ಷಣ ಯಶಸ್ವಿಯಾಗುತ್ತದೆ. ಈ ಎಲ್ಲ ದೃಷ್ಟಿಗಳಿಂದ ಶಿಕ್ಷಣವನ್ನು ಸಹಭಾಗಿತ್ವದ ಪಟ್ಟಿಯಿಂದ ತೆಗೆದು ಹಾಕಿ ಅದರ ನಿರ್ವಹಣೆಯ ಪೂರ್ಣ ಹೊಣೆಗಾರಿಕೆಯನ್ನು ರಾಜ್ಯಸರ್ಕಾರಗಳಿಗೆ ಬಿಡುವುದೇ ಶ್ರೇಷ್ಠವಾದ ಮಾರ್ಗ, ಶಿಕ್ಷಣದ ಗುಣಮಟ್ಟವನ್ನು ಕೇಂದ್ರೀಕರಣದ ಮೂಲಕವೇ ಹೆಚ್ಚಿಸಬಹುದೆಂಬ ಅಭಿಪ್ರಾಯವೂ ಅಹಂಕಾರ ಮೂಲವಾದದ್ದೇ ಸಾವಿರಾರು ವರ್ಷಗಳ ಸಾಮಾನ್ಯ ಜನರನ್ನು ತುಳಿದಿಟ್ಟಿದ್ದ ಪಟ್ಟ ಭದ್ರ ಹಿತಾಸಕ್ತ ಜನರೇ ತಮ್ಮ ಸ್ವಾರ್ಥ ದೃಷ್ಟಿಯಿಂದ ಕೇಂದ್ರೀಕರಣ ನೀತಿಯನ್ನು ಬಿಗಿಯಾಗಿ ಜಾರಿಗೊಳಿಸುತ್ತಿದ್ದಾರೆ.

ದೇಜಗೌರವರು ಶಿಕ್ಷಣ ಕ್ಷೇತ್ರದಲ್ಲಿ ಆದಂತಹ ಬದಲಾವಣೆಯನ್ನು ಮನಗಂಡು ಹಲವಾರು ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ರಾಜ್ಯಗಳನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವ ಸಲುವಾಗಿ ಕೇಂದ್ರಸರ್ಕಾರ ಅಖಿಲ ಭಾರತೀಯ ಸೇವಾ ವ್ಯವಸ್ಥೆಯನ್ನು ವಿಸ್ತರಿಸುತ್ತಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಇದರಲ್ಲಿ ನಾನಾ ಬಗೆಯ ರಾಜಕೀಯ ಹುನ್ನಾರಗಳೂ ಇವೆ. ಕೇಂದ್ರ ಮಂತ್ರಿಗಳು ರಾಜ್ಯ ಮಂತ್ರಿಗಳನ್ನು ಕಡೆಗಣಿಸುವಂತೆ. ಕೇಂದ್ರ ಸೇವೆಯ ಅಧಿಕಾರಿಗಳೂ ರಾಜ್ಯ ಸೇವೆಯ ಅಧಿಕಾರಿಗಳನ್ನು ಕೀಳಾಗಿ ಕಾಣುವ ಪರಿಪಾಠ ಈ ವ್ಯವಸ್ಥೆಯಲ್ಲಿ ಭದ್ರವಾಗಿ ಬೇರೂರಿಕೊಂಡಿವೆ. ಕೇಂದ್ರ ಸರ್ಕಾರ ರಾಜ್ಯಸರ್ಕಾರದ ಶಿಕ್ಷಣ ವ್ಯವಸ್ಥೆಯನ್ನು ಕುಂಟಿತಗೊಳಿಸುವುದನ್ನು ಮನಗಂಡ ದೇಜಗೌರವರು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಕೇಂದ್ರ ಸರ್ಕಾರದ ನೌಕರರ ಮಕ್ಕಳಿಗೆಂದು ಕೇಂದ್ರ ಶಾಲೆಗಳನ್ನು ತೆರೆಯುವುದುಂಟಷ್ಟೆ, ರಾಜ್ಯ ಇತರ ಮಕ್ಕಳಿಂದ ಅವರನ್ನು ಪ್ರತ್ಯೇಕಗೊಳಿಸುವ ಭಾವೈಕ್ಯ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಶಾಲೆಗಳಲ್ಲಿ ಅವಕಾಶ ಕಲ್ಪಿಸಲು ಸಾಧ್ಯವಿಲ್ಲವೇ ಅಥವಾ ಆ ಮಕ್ಕಳಿಗಾಗಿಯೇ ರಾಜ್ಯ ಸರ್ಕಾರ ಪ್ರತ್ಯೇಕ

ಶಾಲೆಗಳನ್ನು ತೆರೆದು ಅವುಗಳಲ್ಲಿ ರಾಜ್ಯದ ಮಕ್ಕಳಿಗೂ ಅವಕಾಶ ಕಲ್ಪಿಸಬಹುದಿತ್ತಲ್ಲವೇ? ಕೇಂದ್ರ ಶಾಲೆಗಳಲ್ಲೀಗ ಕೇಂದ್ರ ನೌಕರರೇತರರ ಮಕ್ಕಳನ್ನು ಸೇರಿಸುತ್ತಿಲ್ಲವೇ? ಹಾಗೇ ಸೇರಿಸುವುದಾದರೆ ತಾರತಮ್ಯವನ್ನು ಹೆಚ್ಚಿಸಿದಂತಾಗಲಿಲ್ಲವೇ? ಎಂಬುದಾಗಿ ದೇಜಗೌರವರಿಗೆ ಪ್ರಶ್ನೆಯಾಗಿ ಮನಸ್ಸಿನಲ್ಲಿ ಕಾಡಿದೆ.

ಭಾರತದಂಥ ಅಭಿವೃದ್ಧಿ ಮುಖವಾಗಿರುವ ರಾಷ್ಟ್ರದಲ್ಲಿ ನವೋದಯ ಶಾಲೆಗಳ ಕಲ್ಪನೆಯು ಅವಿವೇಕದಿಂದ ಕೂಡಿದೆ. ಒಂದೊಂದು ಶಾಲೆಗೂ ಕೋಟಿ ರೂಪಾಯಿ ಖರ್ಚಾಗುತ್ತದಂತೆ. ಅಂಥ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಪುಷ್ಠಿಕರವಾದ ಆಹಾರ ಮೊದಲುಗೊಂಡು ಸರ್ವಾನುಕೂಲಗಳು ಲಭಿಸುತ್ತವೆ. ನೆರೆಹೊರೆಯ ಶಾಲೆಗಳಲ್ಲಿ ಸಹಸ್ರ, ಸಹಸ್ರ ಮಕ್ಕಳು ಅಬ್ಬೇಪಾರಿಗಳಂತೆ ಅವರ ಕಡೆಗೆ ಮಿಳಮಿಳನೆ ನೋಡುತ್ತಾರೆ. ಚಿಕ್ಕಂದಿನಿಂದಲೇ ಆ ಮಕ್ಕಳ ಮನಸ್ಸಿನಲ್ಲಿ ಸ್ವಪ್ರತಿಷ್ಠೆ ಅಟ್ಟಹಾಸ ಭಾವಗಳು ಬಲಿಯುತ್ತಿದ್ದರೆ ಈ ಮಕ್ಕಳಲ್ಲಿ ಕೀಳರಿಮೆ ಮೊಳೆತು ಅಸ್ಪೃಶ್ಯರಾಗುತ್ತಾರೆ. ಈ ರೀತಿಯಲ್ಲಿ ಹೊಸ ಜಾತಿಗಳನ್ನು ಸೃಷ್ಟಿಸುವ ಕೇಂದ್ರ ಸರ್ಕಾರದ ನೀತಿ ಖಂಡನೀಯವಾದುದು ಎಂದು ದೇಜಗೌರವರು ಚಿಂತಿಸಿ ತಮ್ಮ ಹೋರಾಟವನ್ನು ಇನ್ನಷ್ಟು ಚುರುಕುಗೊಳಿಸಿ ಶಿಕ್ಷಣ ಕ್ಷೇತ್ರದಲ್ಲಿ ಆಗುವ ಬದಲಾವಣೆಗಳ ಚಿತ್ರಣವನ್ನು ಸಾಮಾನ್ಯ ಜನರ ಮುಂದಿಟ್ಟು ಅವರನ್ನು ಎಚ್ಚರಗೊಳಿಸಿ ಹೋರಾಟದ ಮನೋಭಾವದ ಮೂಲಕ ಸರ್ಕಾರವನ್ನು ಎಚ್ಚರಗೊಳಿಸುತ್ತಿದ್ದಾರೆ.

ದೇಶದಲ್ಲಿ ವರ್ಷ ವರ್ಷ ವಿಶ್ವ ವಿದ್ಯಾನಿಲಯಗಳ ಸಂಖ್ಯೆ ಹೆಚ್ಚುತ್ತಿದ್ದರೂ ಬೋಧನೆಯ, ಕಲಿಕೆಯ ಹಾಗೂ ಸಂಶೋಧನೆಯ ಮಟ್ಟ ಹೆಚ್ಚುತ್ತಿಲ್ಲ, ರಾಜಕೀಯ ಕಾರಣಗಳಿಗಾಗಿ ಅವುಗಳ ಸ್ವಾಯತ್ತತೆಯನ್ನು ಕಸಿದುಕೊಂಡು ನಾನಾ ರೀತಿಗಳಲ್ಲಿ ರಾಜಕೀಯವನ್ನು ಪ್ರವೇಶಗೊಳಿಸಿರುವುದರಿಂದ ಅವು ಸದ್ಯದ ಸ್ಥಿತಿಯಲ್ಲಿ ರಾಜಕೀಯದ ಕಣಗಳಾಗಿ ಪರಿಣಮಿಸಿವೆ. ವಿಶ್ವವಿದ್ಯಾಲಯಗಳೂ ಕಾಲೇಜುಗಳೂ ಜಾತೀಯತೆಯ ಪ್ರಾದೇಶಿಕತೆಯ ಹಾಗೂ ಅನೇಕ ಅಹಿತಕಾರಕ ಶಕ್ತಿಗಳ ರಾಡಿಯಾಗುತ್ತಿವೆಯೆಂದು ಕೇಂದ್ರ ಸರ್ಕಾರ ಪ್ರಕಟಿಸಿರುವ ನೀತಿಯೇ ಇದಕ್ಕೆ ಕಾರಣ. ಇದಕ್ಕೆ ಯಾರು ಕಾರಣ ಎಂಬುದನ್ನು ಸರ್ಕಾರವೇ ಪ್ರಾಮಾಣಿಕವಾಗಿ ಆಲೋಚಿಸಬೇಕಾಗಿದೆ. ಈ ಮಹಾವಿದ್ಯಾ ಸಂಸ್ಥೆಗಳು ಜಾತೀಯತೆಯ ರಣರಂಗಗಳಾಗುವ, ರಕ್ತದ ಮಡುಗಳಾಗುವ ಕಾಲ ಬಹುದೂರವಿಲ್ಲವೆಂದೇ ಹೇಳಬೇಕಾಗಿದೆ. ವಿದ್ಯಾಸಂಸ್ಥೆಗಳನ್ನು ರಾಜಕೀಯದಿಂದ ಮುಕ್ತಗೊಳಿಸಬೇಕು. ಅರ್ಹತೆ

ಅಭಿರುಚಿ ಸಾಮರ್ಥ್ಯಗಳ ಆಧಾರದ ಮೇಲೆ ನೇಮಕಗಳು ಮತ್ತು ಬಡ್ತಿಗಳು ನಡೆಯಬೇಕು, ವಿದ್ವತ್ತಿಗೆ ಮನ್ನಣೆ ನೀಡಬೇಕು. ಅಂತರ್ವಿಭಾಗೀಯ ಸಂಶೋಧನೆಗೆ ಉತ್ತೇಜನ ನೀಡಬೇಕು. ಸಂಶೋಧನಾ ಸಾಧನೋಪಕರಣಗಳು, ಅವೆಲ್ಲಿಯೇ ಇರಲಿ ಎಲ್ಲ ಕಡೆಯ ಸಂಶೋಧಕರಿಗೂ ದೊರೆಯುವಂತಾಗಬೇಕು. ಅಧ್ಯಾಪಕ ವಿದ್ಯಾರ್ಥಿಗಳ ನಡುವೆ ಮಧುರ ಬಾಂಧವ್ಯ ಏರ್ಪಾಡಗಬೇಕು. ಅಧ್ಯಾಪಕ ರಾಜಕಾರಣಿಗಳನ್ನು ಬಹಿಷ್ಕರಿಸಬೇಕು. ಇವೇ ಮೊದಲಾದ ನೀತಿದರ್ಶಿನಿಯಲ್ಲಿ ಅಡಕಗೊಂಡಿರುವ ಸಲಹೆಗಳು ಸ್ವಾಗತಾರ್ಹವಾಗಿವೆ. ಅವುಗಳನ್ನು ಕಾರ್ಯಗತಗೊಳಿಸಿದಾಗಲೇ ಅವುಗಳಿಗೆ ಸಾರ್ಥಕತೆ ಲಭಿಸುತ್ತದೆ ಎಂಬುದಾಗಿ ಮನಗಂಡ ದೇಜಗೌರವರು ಶಿಕ್ಷಣದ ಉನ್ನತಿಯ ದೃಷ್ಟಿಯಿಂದ ಅದು ಸುಸಂಗತವಾದದ್ದು, ಅದನ್ನು ಜಾರಿಗೆ ತರುವ ಧೈರ್ಯ ಸರ್ಕಾರಕ್ಕಿದೆಯೇ ಎಂಬ ಪ್ರಶ್ನೆ ದೇಜಗೌರವರು ವ್ಯಕ್ತಪಡಿಸುತ್ತಾರೆ.

ದೇಜಗೌರವರು ಉಪಕುಲಪತಿಗಳಾದಂತಹ ಸಂದರ್ಭದಲ್ಲಿ ಉನ್ನತ ಶಿಕ್ಷಣದ ಅವಶ್ಯಕತೆ ಎಷ್ಟಿತ್ತೆಂಬುದರ ಅರಿವಿದ್ದ ಇವರು, ಮಂಗಳೂರು ಮತ್ತು ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ದೇಜಗೌರವರು ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಸುಧಾರಣೆಯ ಕೂಗು ತುಂಬಾ ಹಳೆಯದು, ಆ ಬಗ್ಗೆ ವಿಶ್ವಿವಿದ್ಯಾನಿಲಯ ಧನ ಸಹಾಯ ಆಯೋಗ ನಾನಾ ರೀತಿಯ ಪ್ರಯೋಗಗಳನ್ನು ನಡೆಸಿ ವಿಫಲಗೊಂಡಿದೆ. ಆ ಸುಧಾರಣೆಯನ್ನು ಕಾರ್ಯಗತಗೊಳಿಸ-ಬೇಕಾದ ಅಧ್ಯಾಪಕರಲ್ಲಿ ವಿಶ್ವಾಸ, ಶ್ರದ್ಧೆ, ಉತ್ಸಾಹ, ಪ್ರಾಮಾಣಿಕತೆಗಳಿಲ್ಲದಿರುವಾಗ ಜೀವನದ ಇತರ ಕ್ಷೇತ್ರಗಳಂತೆ ಶಿಕ್ಷಣ ಕ್ಷೇತ್ರವೂ ಜಾತೀಯತೆಯಿಂದ ಹೊಲಸಾಗಿರುವಾಗ ದೇಶಾಭಿಮಾನ ಕಾಣೆಯಾಗಿರುವಾಗ ಸುಧಾರಣೆ ಸಾಧ್ಯವಾಗುತ್ತದೆಯೇ? ಮಂತ್ರಿಯಾಗಲಿ, ಅಧಿಕಾರಿಯಾಗಲಿ ಪ್ರಾಧ್ಯಾಪಕರಾಗಲಿ ತಾನಿರುವುದು ತನ್ನವರಿಗಾಗಿ ಅಲ್ಲ ಎಲ್ಲರಿಗಾಗಿ ಎಂದು ತಿಳಿಯುವ ತನಕ ಈ ದೇಶದಲ್ಲಿ ಎಲ್ಲ ಯೋಜನೆಗಳು ಕುಂಠಿತಗೊಳ್ಳುತ್ತವೆ. ಪ್ರಗತಿ ದೂರದ ಕನಸಾಗುತ್ತದೆ. ಸೆಮಿಸ್ಟರ್ ವ್ಯವಸ್ಥೆಗೆ ಪ್ರಾಧಾನ್ಯ ದೊರೆತು ಸಾರ್ವಜನಿಕ ಪರೀಕ್ಷೆಗಳು ಗೌಣವಾದಾಗ ಮಾತ್ರ ಪರೀಕ್ಷಾ ಸುಧಾರಣೆ ಯಶಸ್ವಿಯಾಗುತ್ತದೆ. ಅದರ ಯಶಸ್ಸು ಅಧ್ಯಾಪಕರ ನಿಷ್ಪಕ್ಷಪಾತ ಮನೋಭಾವ ಮತ್ತು ಪ್ರಾಮಾಣಿಕತೆಯನ್ನು ಅವಲಂಬಿಸಿರುತ್ತದೆ.

ಜೊತೆಗೆ ಅಧ್ಯಾಪಕ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣದ ಕಡೆಗೂ ಗಮನ ಹರಿಸಬೇಕಾಗುತ್ತದೆ. ಡಿಗ್ರಿಯೊಂದೇ ಮೋಕ್ಷಕ್ಕೆ ರಹದಾರಿಯೆಂದು ನಂಬಿರುವ

ಮನೋಧರ್ಮವಿರಲಿ ಇಲ್ಲದಿರಲಿ ಕಾಲೇಜು ಮೆಟ್ಟಲು ಹತ್ತಬೇಕೆಂದು ಕಾತರಿಸುವ ಹತ್ತು ಸಾರಿ ಗೋತ ಹೊಡೆದರೂ ಮರಳಿ ಮರಳಿ ಪ್ರಯತ್ನಿಸುವ ವಿದ್ಯಾರ್ಥಿಗಳ ಸಂಖ್ಯೆ ಅಗಾಧ ಪ್ರಮಾಣದಲ್ಲಿರುವಾಗ ಸುಧಾರಣೆ ಸಾಧ್ಯವೇ ಎನ್ನುವ ಕಠೋರ ಸತ್ಯವನ್ನು ಸಹ ಸುಧಾರಕರು ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಕಾಲೇಜುಗಳಿಗೆ ಸ್ವಾಯತ್ತತೆ ನೀಡಬೇಕೆನ್ನುವ ಯೋಜನೆ ಸ್ವಾಗತಾರ್ಹವಾದದ್ದೇ ಆದರೆ ವಿಶ್ವವಿದ್ಯಾಲಯಗಳಿಗೆ ಪೂರ್ಣ ಸ್ವಾಯತ್ತತೆಯಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಸಾಮಾಜಿಕ ವೈಶಮ್ಯ ವೈಪರೀತ್ಯಗಳು ಅಪಾಯದ ಮಟ್ಟವನ್ನು ಮುಟ್ಟಿ, ಪ್ರಾಮಾಣಿಕತೆ ಇಳಿಮುಖವಾಗುತ್ತಿರುವ, ರಾಜಕೀಯದ ಭೂತ ವಿದ್ಯಾಸಂಸ್ಥೆಗಳಲ್ಲಿಯೂ ಮನೆಮಾಡಿಕೊಂಡಿರುವ ಅಲ್ಪಸಂಖ್ಯಾತರ ಹೆಸರಿನಲ್ಲಿ ಪೈಪೋಟಿ ನಡೆಯುತ್ತಿರುವ ಈ ಕಾಲದಲ್ಲಿ ಸ್ವಾಯತ್ತತೆ ನೀಡುವುದು ಸರಿಯೇ ಎಂಬುದನ್ನು ಸಂಬಂಧಪಟ್ಟವರು ಗಂಭೀರವಾಗಿ ಆಲೋಚಿಸಬೇಕಾಗಿದೆ. ಸ್ವಾಯತ್ತತೆ ಪಡೆದ ಕಾಲೇಜುಗಳ ನಡುವೆ ಹಾನಿಕಾರಕವಾದ ಪೈಪೋಟಿಗೆ ಪ್ರೋತ್ಸಾಹ ನೀಡಿದಂತಾಗುವುದಲ್ಲದೆ, ಸ್ವಾಯತ್ತತೆಯುಳ್ಳ ಮತ್ತು ಇಲ್ಲದ ಕಾಲೇಜುಗಳ ನಡುವೆ ತಾರತಮ್ಯಕ್ಕೆಡೆ ಕೊಟ್ಟಂತಾಗುತ್ತದೆ. ಒಂದು ಕಡೆ ಅಹಂಕಾರ ಪ್ರತಿಷ್ಠೆಗಳು ಪ್ರಬಲವಾಗಿ ಮತ್ತೊಂದು ಕಡೆ ನಿರಾಶೆ ನಿರುತ್ಸಾಹ ಭಾವಗಳು ಉಲ್ಬಣಗೊಂಡು, ಅಧ್ಯಾಪಕ ವಿದ್ಯಾರ್ಥಿ ಸಮುದಾಯದಲ್ಲಿ ಕಲಹ ಪ್ರಾರಂಭವಾಗುವ ಸಂಭವವೂ ಉಂಟು. ಒಂದು ಕಾಲೇಜಿಗೆ ಸ್ವಾಯತ್ತತೆ ನೀಡುವಾಗ ಧನ ಸಹಾಯ ಮಾಡುವ ಸರ್ಕಾರ ಮತ್ತು ಶೈಕ್ಷಣಿಕ ನೀತಿಯನ್ನು ರೂಪಿಸುವ ವಿಶ್ವವಿದ್ಯಾಲಯಗಳು ಒಮ್ಮತಕ್ಕೆ ಬರಬೇಕಾಗುತ್ತದೆ. ಏಕ್‌ದಂ ಪೂರ್ಣಸ್ವಾಯತ್ತತೆ ನೀಡುವ ಬದಲಾಗಿ, ಕ್ರಮಕ್ರಮವಾಗಿ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಪ್ರತಿಯೊಂದು ಕಾಲೇಜಿಗೂ ಅಧಿಕಾರಗಳನ್ನು ಬಿಟ್ಟುಕೊಡಲು ಪ್ರಯತ್ನಿಸಬಹುದು. ಕೇವಲ ಉದಾಹರಣೆಗಾಗಿ ಪರೀಕ್ಷೆಯ ವಿಷಯವನ್ನಿಲ್ಲಿ ಪ್ರಸ್ತಾಪಿಸಬಹುದು. ಒಳಪರೀಕ್ಷೆಗಳನ್ನು ಮಾಡುವ ಅಧಿಕಾರವನ್ನು ಕಾಲೇಜುಗಳಿಗೆ ಬಿಟ್ಟುಕೊಟ್ಟು, ಹೊರ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯವೇ ನಡೆಸಬಹುದು. ಒಳ ಮತ್ತು ಹೊರ ಪರೀಕ್ಷೆಗಳ ಅಂಕಗಳ ಆಧಾರದ ಮೇಲೆ ಫಲಿತಾಂಶಗಳನ್ನು ಪ್ರಕಟಿಸಬಹುದು. ಇದನ್ನೆಲ್ಲ ತಿಳಿದ ದೇಜಗೌರವರು ಈ ರೀತಿ ಯೋಚನೆ ಮಾಡುತ್ತಾರೆ; ಈಗ ಅಸ್ತಿತ್ವದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಭಾರವನ್ನು ಸರ್ಕಾರವೇ ವಹಿಸಿಕೊಂಡಿದ್ದಲ್ಲಿ ಈಗಿನ ಎರಡು –

ಮೂರರಷ್ಟು ಹಣವನ್ನು ಅದು ಖರ್ಚು ಮಾಡಬೇಕಿತ್ತು, ಸೈನ್ಯಕ್ಕೆ, ನೀರಾವರಿ ಯೋಜನೆಗಳಿಗೆ, ವಸತಿ ಸೌಲಭ್ಯಗಳಿಗೆ ಹಣ ಸಾಲದಿರುವಾಗ, ಶಿಕ್ಷಣಕ್ಕೆ ಹೆಚ್ಚು ಹಣ ಎಲ್ಲಿಂದ ಬರಬೇಕು? ಅದಕ್ಕಾಗಿ ಗಾಂಧೀಜಿ ಹೇಳಿದ್ದು, ಎಸ್ಸೆಸ್ಸೆಲ್ಸಿವರೆಗಿನ ಶಿಕ್ಷಣದ ಹೊಣೆ ಸರ್ಕಾರಕ್ಕೆ ಸೇರಿದ್ದು. ಉಳಿದದ್ದು ಸಮಾಜ ಹೊರಬೇಕಾದ್ದು ಎಂದು. ಅಂದರೆ ಉಚ್ಚಶಿಕ್ಷಣ ಬೇಕಾದವರು ಅದಕ್ಕೆ ತಗಲುವ ವೆಚ್ಚವನ್ನು ಸಂಪೂರ್ಣವಾಗಿ ಭರಿಸಬೇಕು. ತಮ್ಮ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಮುಂದುವರಿದ ಜನ ತಾವೇ ತುಂಬಬೇಕು. ಹಿಂದುಳಿದವರ ಶಿಕ್ಷಣದ ಭಾರವನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದ್ದಾರೆ ಎಂಬ ವಿಷಯವನ್ನು ದೇಜಗೌರವರು ತಮ್ಮ ಭಾಷಣಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ದಿನೇ ದಿನೇ ಮೌಲ್ಯಗಳು ಅಪಘಾತಕ್ಕೀಡಾಗುತ್ತಿವೆಯೆಂದು, ಅದರಿಂದಾಗಿ ಸಾರ್ವಜನಿಕ ಜೀವನ ಮಲೀನಗೊಳ್ಳುತ್ತಿದೆಯೆಂದು ಭಾವಿಸಿ, ಜಾತೀಯತೆ, ಮತಾಂಧತೆ, ಹಿಂಸೆ, ಮೌಢ್ಯ, ಮೊದಲಾದ ಅಸುರೀ ಪ್ರವೃತ್ತಿಗಳನ್ನು ತಡೆಗಟ್ಟುವ ಸಲುವಾಗಿ ಮೌಲ್ಯಾಧಾರಿತ ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ಭರವಸೆಯನ್ನು ನೂತನ ಶಿಕ್ಷಣ ನೀತಿ ಸಂಹಿತೆ ನೀಡುತ್ತಿದೆ. ಆ ಭರವಸೆ ಮೂರ್ತ ಸ್ವರೂಪವನ್ನು ತಳೆಯಬೇಕಾದರೆ ಮೊದಲು ಶಿಕ್ಷಣ ಸಂಸ್ಥೆಗಳು ರಾಜಕೀಯದಿಂದ ಮುಕ್ತಗೊಳ್ಳಬೇಕು. ಮತೀಯತೆ ಜಾತೀಯತೆಗಳಿಂದ ಪಾರಾಗಬೇಕು. ಶಿಕ್ಷಣದ ಮೂಲಕ ಸಮಾಜವಾದ, ವೈಚಾರಿಕತೆ, ಪ್ರಜಾಪ್ರಭುತ್ವ, ವಿಶ್ವಮಾನವತ್ವ, ಭಾರತದರ್ಶನಗಳನ್ನು ಯುವಕರಲ್ಲಿ ಮೂಡುವಂಥ ಏರ್ಪಾಡು ಅತ್ಯವಶ್ಯಕವೆಂಬುದರಲ್ಲಿ ಸಂದೇಹವಿಲ್ಲ. ಶಿಕ್ಷಣ ಸಂಸ್ಥೆಗಳ ಆಧಾರಸ್ಥಂಭವೆಂದರೆ ಅಧ್ಯಾಪಕ, ಶಿಕ್ಷಕನೂ ಒಬ್ಬ ತಪಸ್ವಿ. ನಿರಂತರ ತಪಸ್ಸು ಅಧ್ಯಯನ ಸಂಶೋಧನೆಗಳಿಂದಲ್ಲದೆ, ತಾನು ಕಲಿಸುವ ಸಂಸ್ಥೆಗೆ ತನ್ನನ್ನು ಸಮರ್ಪಿಸಿಕೊಳ್ಳಲಾಗದಿದ್ದರೆ, ಅವನು ವಿಶ್ವಮಾನವನಾಗಿ ತನ್ನ ವಿದ್ಯಾರ್ಥಿಗಳನ್ನು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸದಿದ್ದರೆ ಶಿಕ್ಷಣ ಸಾರ್ಥಕವಾಗಲಾರದು; ಯಾವ ನೀತಿ ಸಂಹಿತೆಯೂ ಪ್ರಯೋಜನವಾಗಲಾರದು. ಕೇವಲ ನೀತಿ ಸಂಹಿತೆಯಿಂದಲೇ ಶಿಕ್ಷಣ ಕ್ಷೇತ್ರ ಸುಧಾರಿಸುತ್ತದೆಂದು ತಿಳಿಯಬಾರದು. ನೀತಿ ಸಂಪನ್ನರೂ ಜ್ಞಾನ ಶ್ರೀಮಂತರೂ ಶ್ರದ್ಧಾಯುಕ್ತರೂ ರಾಜಕೀಯ ಧುರೀಣರೂ ಆದ ಶುದ್ಧ ಹೃದಯದ ಶಿಕ್ಷಕರನ್ನು ಶಿಕ್ಷಣ

ಸಂಸ್ಥೆಗಳಿಗೆ ನೇಮಿಸಿದಾಗಲೇ ಶಿಕ್ಷಣ ಕ್ಷೇತ್ರ ಹಸನಾಗಿ ನಾಡಿಗೆ ಕಾಮಧೇನುವಾಗುತ್ತದೆಂಬುದು ದೇಜಗೌರವರ ಅಭಿಪ್ರಾಯವಾಗಿತ್ತು.

ದೇಜಗೌ ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಅವಧಿಯಲ್ಲಿ ತೆರೆದ ವಿಭಿನ್ನ ಬಗೆಯ ಕೋರ್ಸುಗಳು ಒಂದೆಡೆ ಜ್ಞಾನದ ದಿಗಂತದ ವಿಸ್ತರಣೆಗಳಾಗಿದ್ದರೆ ಇನ್ನೊಂದೆಡೆ ಭಾರತೀಯ ಮತ್ತು ವಿಶ್ವಸಾಹಿತ್ಯವನ್ನು ತಿಳಿದುಕೊಳ್ಳಲು ತೆರೆದ ದ್ವಾರಗಳಾದುವು. ದೇಜಗೌ ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಿದ ಹೊಸ ಆಯಾಮಗಳು ಹೊಸ ಹೊಸ ಯೋಜನೆಗಳು ಕನ್ನಡಿಗರ ಜ್ಞಾನ ದೀವಿಗೆಗಳಾಗಿದ್ದುವು. ಅವು ನೋಡಿದವರ ಕಣ್ಣುಗಳನ್ನು ಕುಕ್ಕುವಂತಿದ್ದುವು. ಇವುಗಳಲ್ಲಿ ಇವತ್ತು ಬಹಳಷ್ಟು ಸೊರಗಿರುವುದನ್ನು ನೋಡಿ ದೇಜಗೌ ಬೇಸರಿಸಿಕೊಳ್ಳುತ್ತಾರೆ ನಿಜ. ಆದರೆ ಅವನ್ನು ರಊಪಿಸಿದ, ಕಲ್ಪಿಸಿದ ಈ ಕನಸುಗಾರನ ಬಗ್ಗೆ ಇಂದಿಗೂ ಜನ ಅಭಿಮಾನಪಡುತ್ತಾರೆ. ಇವೆಲ್ಲದರಿಂದಾಗಿಯೇ ದೇಜಗೌ ಎಂಬ ಮೂರಕ್ಷರಗಳು ಕನ್ನಡಿಗರಿಗೆ ಮಂತ್ರ ಮಂಡಿತ ಶಕ್ತಿಗಳಾಗಿವೆ. ನಿವೃತ್ತಿಯ ನಂತರವೂ ದೇಜಗೌರವರ ಉತ್ಸಾಹ ಬತ್ತದ ಚಿಲುಮೆಯಾಗಿಯೇ ಇದೆ ಎಂಬುದಕ್ಕೆ ಕುವೆಂಪು ಟ್ರಸ್ಟ್‌ನ ಆಶ್ರಯದಲ್ಲಿ ಮೂಡಿಬಂದಿರುವ ಸಂಸ್ಥೆಗಳೇ ಸಾಕ್ಷಿಯಾಗಿವೆ. ದೇಜಗೌರವರಿಗೆ ಕನ್ನಡದ ಬಗ್ಗೆ ಎಷ್ಟೊಂದು ಕಾಳಜಿ ಇತ್ತೆಂಬುದು ಗೊತ್ತಾಗುತತದೆ. ಕರ್ನಾಟಕದ ಅಪ್ರತಿಮ ರಾಜರು, ಚಕ್ರವರ್ತಿಗಳು ರಾಜ್ಯಗಳನ್ನು ಕಟ್ಟಿದರೆ ದೇಜಗೌ ಸಂಸ್ಥೆಗಳನ್ನು ಕಟ್ಟಿದ್ದಾರೆ.

ದೇಜಗೌ ಈಗ ವಯೋವೃದ್ಧರು, ಜ್ಞಾನವೃದ್ಧರು. ಇವರ ಮನಸ್ಸು ಮಾಗಿದ ಫಲವಾಗಿದೆ. ಇವರ ದೃಷ್ಟಿಯಲ್ಲಿ ದ್ರಷ್ಟಾರನ ನೋಟವಿದೆ. ದೇಜಗೌ ಎಷ್ಟು ಸರಳರಾಗಿದ್ದರೆಂದರೆ ಇವರು ಅವರಾ? ಎಂಬ ವಿಸ್ಮಯವುಂಟಾಗುತತದೆ. ಒಂದು ದಟ್ಟಿ ಪಂಚೆ ಮೇಲೊಂದು ಜುಬ್ಬಾ ತೊಟ್ಟು ಕುವೆಂಪು ಟ್ರಸ್ಟ್‌ನ ಪ್ರತಿ ಕಾರ್ಯದಲ್ಲೂ ಸಾಕ್ಷೀಭೂತರಾಗಿ ಮಳೆಯೆನ್ನದೆ ಬಿಸಿಲೆನ್ನದೆ ನಿಂತು ಕೆಲಸಮಾಡುವ ಸಮರ್ಪಣಾಭಾವವನ್ನು ನೋಡಿದಾಗಲೆಲ್ಲ ಹಾಗೂ ನೋಡಿದವರಿಗೆಲ್ಲ ಅದ್ಭುತ ವಿಸ್ಮಯರಾಗಿ ಕಂಡಿದ್ದಾರೆ.

ಈಚಿನ ವರ್ಷಗಳಲ್ಲಿ ದೇಜಗೌರವರು ಲೌಕಿಕ ಬದುಕಿನಲ್ಲಿದ್ದುಕೊಂಡು ಇಲ್ಲಿನ ಯಾವ ಆಸೆ–ಆಮಿಷಗಳನ್ನೂ ಅಂಟಿಸಿಕೊಳ್ಳದೇ ಅಧಿಕಾರ ಪದವಿಗಳ ಅಲಂಕಾರಗಳಿಂದ ವಿಮುಖರಾಗಿ ಸಮಾಜೋನ್ಮುಖವಾದ ಚಿಂತನೆಯಲ್ಲಿ ತಮ್ಮನ್ನು ತಾವು

ತೊಡಗಿಸಿಕೊಂಡಿದ್ದಾರೆ. ದೇಜಗೌರವರ ಈ ಸಮಾಜೋನ್ಮುಖ ಚಿಂತನೆ ಸತ್ಯಕ್ಕೆ ಬದ್ಧರಾಗಿರುವುದರಿಂದಲೇ ಸಮಾಜ ಅದನ್ನು ಸ್ವೀಕರಿಸುವಷ್ಟು ಕೆಚ್ಚು ತೋರುತ್ತಿಲ್ಲ. ಒಮ್ಮೆ ಶಿಕ್ಷಕರ ಸಮಾರಂಭವೊಂದರಲ್ಲಿ ದೇಜಗೌ ಶಿಕ್ಷಕರ ಜವಾಬ್ದಾರಿಗಳನ್ನು ಕುರಿತಂತೆ ಖಾರವಾಗಿಯೇ ಮಾತನಾಡಿದರು. ಅವರ ವಿಚಾರಗಳು ಟೀಕೆಗಳು ಖಾರವಾಗಿದ್ದುದರಿಂದ ಅವು ಶಿಕ್ಷಕರಿಗೆ ಪಥ್ಯವಾಗಲಿಲ್ಲ, ಸರಿ, ಮೈಪರಚಿಕೊಂಡರು. ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದ್ದ ಶಿಕ್ಷಕರು ಗಲಾಟೆ ಮಾಡಿದರು. ಆದರೆ ದೇಜಗೌ ಇದರಿಂದ ವಿಚಲಿತರಾಗಲಿಲ್ಲ. ಹೇಳಬೇಕಾದುದನ್ನು ಹೇಳಿದ್ದರು. ಈಚಿನ ಒಂದು ಪ್ರಸಂಗವನ್ನು ನೋಡಿ: ತಾವು ನಡೆಉಸುತ್ತಿದ್ದ ಶಾಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಅನುತ್ತೀರ್ಣರಾಗಿದ್ದರು. ಇದರ ದೋಷವನ್ನು ಯಾರ ತಲೆಯ ಮೇಲೆ ಹಾಕುವುದು? ಅದರ ನೈತಿಕ ಜವಾಬ್ದಾರಿಯನ್ನು ತಾವು ಹೊತ್ತು ಉಪವಾಸ ಕುಳಿತರು. ಈ ಮೂಲಕ ಶಿಕ್ಷಕರಲ್ಲಿ ಕರ್ತವ್ಯಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದರು. ಹೀಗೆ, ದೇಜಗೌ ಈಚೇನ ದಿನಗಳಲ್ಲಿ ಅಂತರ್ಮುಖಿಯಾಗಿ ಚಿಂತಿಸುತ್ತಿದ್ದಾರೆ.

ಈ ಶತಮಾನದ ಅರವತ್ತು-ಎಪ್ಪತ್ತು ವರ್ಷಗಳು ದೇಜಗೌರ ನಿತ್ಯ ಕಾಯಕದ ವರ್ಷಗಳಾಗಿವೆ. 'ಪರಮಜ್ಞಾನ ದಾಸೋಹಿ'ಗಳೆಂದು ಅವರನ್ನು ಕರೆಯುವುದು ಸರ್ವಥಾ ಉಚಿತವೆಂದೇ ನಾವುಗಳು ಭಾವಿಸಬಹುದು. ಒಂದೆಡೆ ಭಾಷಣ ಮಾಡುವುದರ ಮೂಲಕ ಜ್ಞಾನ ಪ್ರಸಾರ, ಇನ್ನೊಂದೆಡೆ ಕೃತಿಗಳ ಮೂಲಕ ಜ್ಞಾನಪ್ರಸಾರ. ಈ ಎರಡನ್ನೂ ತಮ್ಮ ಬದುಕಿನ ಅವಿನಾಭಾವಗಳಂತೆ ಸ್ವೀಕರಿಸಿ ಅರ್ಧ ಶತಮಾನಕ್ಕೂ ಮಿಕ್ಕ ವರ್ಷಗಳುದ್ದಕ್ಕೂ ದೇಜಗೌ ಮಾಡಿಕೊಂಡು ಬಂದಿರುವ ಸೇವೆಯನ್ನು ಕನ್ನಡನಾಡು ಸದಾ ಸ್ಮರಿಸಬೇಕಿದೆ.

ದೇಜಗೌರವರ ಸಾಹಿತ್ಯಕ ಬದುಕಿನ ಚತುರ್ಮುಖಗಳೆಂದರೆ – ಜೀವನಚರಿತ್ರೆ, ಅನುವಾದ, ತೌಲನಿಕ ಅಧ್ಯಯನ ಮತ್ತು ಆತ್ಮಕಥಾ ಲೇಖನ. ಈ ನಾಲ್ಕು ಕ್ಷೇತ್ರಗಳಲ್ಲಿ ದೇಜಗೌ ಮಾಡಿರುವಷ್ಟು ಸಾಧನೆ ಕನ್ನಡದ ಇನ್ನೊಬ್ಬ ಲೇಖಕ ಮಾಡಿರುವ ಉದಾಹರಣೆ ನಮ್ಮೆದುರಿಗಿಲ್ಲ. ಈ ನಾಲ್ಕು ಕ್ಷೇತ್ರಗಳು ದೇಜಗೌರವರಿಗೆ ಬಲುಪ್ರಿಯವಾದವುಗಳು ಅಪ್ಯಾಯಮಾನವಾದವುಗಳು. ಹೀಗಾಗಿಯೇ ಈ ಕ್ಷೇತ್ರಗಳಲ್ಲಿ ಮಾದರಿಯಾಗುವಂಥ ಕೆಲಸಗಳನ್ನು ಮಾಡಿ ಕನ್ನಡ ಸಾರಸ್ವತಲೋಕದ ಅಚ್ಚರಿಯಾಗಿದ್ದಾರೆ. ದೇಜಗೌ ಆರಿಸಿಕೊಂಡು ಈ ನಾಲ್ಕೂ ಕ್ಷೇತ್ರಗಳು ಸವಾಲೆಸೆಯುವಂಥ, ಪಾಂಡಿತ್ಯವನ್ನು

ಅಪೇಕ್ಷಿಸುವಂಥ, ಪ್ರಾಮಾಣಿಕತೆಯನ್ನು ಬಯಸುವಂಥ, ಭಾಷೆಯ ಮೇಲಿನ ಪ್ರಭುತ್ವ ಮತ್ತು ಬಳಲುವ ಪರಿಶ್ರಮವನ್ನು ಬೇಡುವಂಥವು. ಈ ಎಲ್ಲವನ್ನು ಒಟ್ಟಿಗೆ ಮೈಗೂಡಿಸಿಕೊಂಡು ದೇಜಗೌ ತಮ್ಮ ಬದುಕಿನ ಅವಧಿಯಲ್ಲಿ ಮಾಡಿರುವ ಸಾಧನೆ ಮತ್ತು ಏರಿರುವಷ್ಟು ಎತ್ತರವನ್ನು ಇನ್ನೊಬ್ಬರು ಏರಲು ಸಾಧ್ಯವಿಲ್ಲವೆಂದೇ ಹೇಳಬಹುದು. ಈ ದೃಷ್ಟಿಯಿಂದ ದೇಜಗೌ ಅವರಿಗೆ ಅವರೇ ಹೋಲಿಕೆ.

ದೇಜಗೌರವರು ಕವಿತೆ, ಕತೆ, ಕಾದಂಬರಿ, ವಚನ, ಚುಟುಕು, ನಾಟಕಗಳನ್ನೂ ಬರೆದಿದ್ದಾರೆ. ಅವುಗಳನ್ನು ರಚಿಸುವವರು ಯಾವುದೇ ಭಾಷೆಯಲ್ಲಿ ಬಹುಮಂದಿ ಇರುತ್ತಾರೆ. ಆದರೆ ಯಾವುದೇ ಸಾಹಿತ್ಯ ಸಂಪದ್ಭರಿತವಾಗಬೇಕಾದರೆ, ಇತರ ಪ್ರಕಾರಗಳೂ ಬೆಳೆಯಬೇಕು. ಎಂತಲೇ ದೇಜಗೌ ಭಾಷಾಂತರ, ಜೀವನಚರಿತ್ರೆ, ಪ್ರವಾಸಕಥನಗಳ ಕಡೆಗೆ ವಿಶೇಷ ಗಮನಹರಿಸಿದರು. ಕನ್ನಡಕ್ಕೆ ಅವರ ಕೊಡುಗೆ ಅತ್ಯಂತ ಮೌಲಿಕವಾಗಿ ಸಂದಿರುವುದು ಈ ಕ್ಷೇತ್ರಗಳಲ್ಲೇ. ಇತರ ಸೃಜನಪರ ಮತ್ತು ಸೃಜನೇತರ ಸಾಮರ್ಥ್ಯಗಳು ಮೇಳವಿಸಿದ ಪ್ರಕಾರಗಳೆಂಬುದನ್ನು ನೆನಪಿಡಬೇಕು. ವಿಮರ್ಶೆ, ಗ್ರಂಥಸಂಪಾದನೆಗಳ ವಲಯದಲ್ಲೂ ದೇಜಗೌ ಕೆಲಸ ಉತ್ತಮಮಟ್ಟದ್ದಾಗಿ ಕಂಡುಬರುತ್ತದೆ. ಇತರ ಕೆಲವು ಪ್ರಕಾರಗಳಲ್ಲಿ ಕೂಡ ಅವರು ಕೃಷಿಮಾಡಿದ್ದಾರೆ.

ದೇಜಗೌ ವಾಙ್ಮಯದಲ್ಲಿ ಒಂದು ಬಗೆಯ ಪೂರ್ಣತೆಯ ವಿನ್ಯಾಸವನ್ನು ಗುರುತಿಸಬಹುದು. ಅವರೊಬ್ಬ ಸವ್ಯಸಾಚಿ, ಸಮನ್ವಯಕಾರ. ಅವರು ಸ್ವತಂತ್ರವಾಗಿ ಬರೆದಿದ್ದಾರೆ. ಭಾಷಾಂತರ ಮಾಡಿದ್ದಾರೆ. ವ್ಯಕ್ತಿನಿಷ್ಠವಾಗಿ ಬರೆದಿದ್ದಾರೆ. ದೊಡ್ಡವರಿಗಾಗಿ ಬರೆದಿದ್ದಾರೆ. ಮಕ್ಕಳಿಗಾಗಿ ಬರೆದಿದಾರೆ. ಹಳೆಯ ಕೃತಿಗಳನ್ನು ವಿಮರ್ಶಿಸಿದ್ದಾರೆ. ಹೊಸ ಸಾಹಿತ್ಯವನ್ನು ವಿಮರ್ಶಿಸಿದ್ದಾರೆ. ಶಿಷ್ಟ ಸಾಹಿತ್ಯವನ್ನು ವಿವೇಚಿಸಿದ್ದಾರೆ. ಜಾನಪದವನ್ನು ವಿವೇಚಿಸಿದ್ದಾರೆ. ಆತ್ಮಕಥೆ ಬರೆದಿದ್ದಾರೆ. ಜೀವನಚರಿತ್ರೆ ಬರೆದಿದ್ದಾರೆ. ಭಾವಮಯವಾಗಿ ಬರೆದಿದ್ದಾರೆ. ವೈಚಾರಿಕವಾಗಿ ಬರೆದಿದ್ದಾರೆ; ಅಚ್ಚಗನ್ನಡದಲ್ಲಿ ಬರೆದಿದ್ದಾರೆ ಇತ್ಯಾದಿ ಇಂಥ ವಿವಿಧತೆಯನ್ನು ಪ್ರದರ್ಶಿಸಿದವು ವಿರಳ.

ಮುಖ್ಯವಾಗಿ ದೇಜಗೌ ಒಬ್ಬ ಗದ್ಯ ಲೇಖಕರು. ಆ ಪ್ರಾಂತದಲ್ಲಿ ಮುಂಚೂಣಿಯಲ್ಲಿ ನಿಲ್ಲತಕ್ಕವರು. ಅವರದು ಬಹುರೂಪಿಯಾದ, ಕಾವ್ಯಗ್ರಂಥಿಯಾದ ಗದ್ಯವಿಲಾಸ. ಹೊಸಗನ್ನಡ ಗದ್ಯದ ರೂವಾರಿಗಳಲ್ಲಿ ದೇಜಗೌ ನಿಸ್ಸಂದೇಹವಾಗಿ ಒಬ್ಬರೆಂದೇ ಹೇಳಬಹುದು.

ಭಾಷಾಂತರ ಕಾರ್ಯದಲ್ಲಿ ದೇಜಗೌ ಸಿದ್ಧಹಸ್ತರು. "ನೆನಪು ಕಹಿಯಲ್ಲ" ಪುನರುತ್ಥಾನ; 'ಹಮ್ಮುಬಿಮ್ಮು', ಯುದ್ಧ ಮತ್ತು ಶಾಂತಿ; ಅನ್ನಾಕರೆನಿನಾ' ಮುಂತಾದ ಕೃತಿಗಳು ದೇಜಗೌ ಅವರ ಭಾಷಾಂತರ ಶಕ್ತಿಗೆ ಸಾಕ್ಷಿಗಳಾಗಿ ನಿಂತಿದ್ದಾರೆ. ಇವುಗಳಲ್ಲಿ "ಯುದ್ಧ ಮತ್ತು ಶಾಂತಿ"ಯೊಂದು ಬೃಹದ್ಗ್ರಂಥ. ಕನ್ನಡ ಸಾಹಿತ್ಯದ ಸೀಮೆಯನ್ನು ವಿಸ್ತರಿಸಿರುವ ಈ ಅನುವಾದಗಳು 'ಕನ್ನಡ ಭಾಷಾಂತರ ಕ್ಷೇತ್ರದ ಸಾಮ್ರಾಟ' ಎಂಬ ಹೆಸರನ್ನು ದೇಜಗೌ ಅವರಿಗೆ ತಂದುಕೊಡಬಲ್ಲವು.

ತಮ್ಮ ಆತ್ಮಕಥೆಯನ್ನು ಎರಡು ಮೂರು ಸಂಪಟುಗಳಲ್ಲಿ ರಚಿಸಿದ್ದು ಈಗ ಒಂದೇ ಸಂಪುಟವಾಗಿ ಹೊರಬಂದಿದೆ. ಪ್ರಾಮಾಣಿಕವಾಗಿ, ಆತ್ಮ ಪರೀಕ್ಷಾಪೂರ್ವಕವಾಗಿ ನಿರೂಪಿಸಿದ್ದಾರೆ. ದೇಜಗೌ ಅವರ ಪವಾದ ಸದೃಶವಾದ ಬದುಕು ಅಲ್ಲಿ ಕುತೂಹಲಕರವಾಗಿ ಸುರುಳಿಬಿಚ್ಚಿಕೊಂಡಿದೆ. ಹಾಗೆಯೇ, ಜೀವನ ಚರಿತ್ರೆಗಳ ಒಂದು ಗೊಂಚಲನ್ನೇ ಕನ್ನಡಕ್ಕೆ ನೀಡಿದ್ದಾರೆ, ದೇಜಗೌ. ಅವುಗಳಲ್ಲಿ ಪ್ರಮುಖವಾಗಿ "ರಾಷ್ಟ್ರಪತಿ ಕುವೆಂಪು", 'ಮೋತಿಲಾಲ್ ನೆರು', 'ಅಮೆರಿಕಾಗಾಂಧಿ', ಕರ್ನಾಟಕದರೂವಾರಿ; ಕ್ರಾಂತಿಕಾರಿ ಡಾ. ಅಂಬೇಡ್ಕರ್, 'ತೀನಂಶ್ರೀ; ನಿತ್ಯ ಸಚಿವ, ಲೋಕದ ಬೆಳಕು, ದಕ್ಷಿಣೇಶ್ವರಕ್ಕೆ ನಮನ ಲೋಕನಾಯಕ, ವಿಚಾರವಾದಿ ಪೆರಿಯಾರ್, ನಾರಾಯಣಗುರು, ಸಿದ್ದಗಂಗೆಯ ಶಿವನಿಧಿ, ಮುಂತಾದವುಗಳು, 'ರಾಷ್ಟ್ರಕವಿ ಕುವೆಂಪು'ವೊಮದು ಗುರುಚರಿತವೇ ಸರಿ. ಒಟ್ಟಿನಲ್ಲಿ ದೇಜಗೌ ಅವರ ಪರಿಶ್ರಮದಿಂದ ಕನ್ನಡಕ್ಕೊಂದು ಬೆಳಕಾಗಿ ಕಂಡುಬಂದಿದೆ ಎಂದು ಹೇಳಬಹುದು. ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರ ದೇಜಗೌ ಅವರ ಅನೇಕ ಪ್ರವಾಸ ಕಥನಗಳಿಂದ ಶ್ರೀಮಂತವಾಗಿದೆ. "ಆಫ್ರಿಕಾಯಾತ್ರೆ", "ವಿದೇಶದಲ್ಲಿ ನಾಲ್ಕು ವಾರ. ವಿಸ್ಮಯಗಳ ನಾಡಿನಲ್ಲಿ 'ಜಗತ್ತಿನ ನಡುನೆತ್ತಿಯ ಮೇಲೆ ಮೊದಲಾದವು ದೇಜಗೌ ಬರೆದಿರುವ ರೋಚಕ ಪ್ರವಾಸ ಕಥನಗಳು.

ವಿಚಾರ, ವಿಮರ್ಶೆ ಮತ್ತು ಸಂಶೋಧನೆಯಲ್ಲೂ ದೇಜಗೌ ಅವರದು ಎತ್ತಿದ ಕೈ. ನುರಿತಕೈ. ಈ ದಿಶೆಯಲ್ಲಿ ಗದುಗಿನ ಭಾರತ ಒಂದು ಸಾಮಸ್ಕೃತಿಕ ಅಧಯನ, 'ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು' ನಂಜುಮಡಕವಿ, ಗದ್ಯಶೈಲಿ, ಕುವೆಂಪುಶೈಲಿ, ಕುವೆಂಲು ಅವರ ಶಿಕ್ಷಣ ವಿಚಾರಗಳು ಇನ್ನು ಮುಂತಾದ ಗದ್ಯ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯಕ, ಸಾಮಸ್ಕೃತಿಕ, ಶೈಕ್ಷಣಿಕ ಮುಂತಾದ ವಿಚಾರಧಾರೆಗಳನ್ನು ಒಳಗೊಂಡಿದೆ.

'ಕುಲಪತಿಯ ಭಾಷಣಗಳು' ಇವುಗಳದು ಒಂದು ಪುಟ್ಟ ವಿಶ್ವಕೋಶದ ಸ್ವರೂಪ ಎಂದರೆ ತಪ್ಪಾಗಲಾರದು. ದೇಜಗೌ ಅವರ ಸಮಕಾಲೀನ ಪ್ರಜ್ಞೆ, ವೈಚಾರಿಕ ನಿಲುವುಗಳು ಅವುಗಳಲ್ಲಿ ಪ್ರಕಟವಾಗಿವೆ.

ದೇಜಗೌ ಒಬ್ಬ ಶ್ರೇಷ್ಠ ಜಾನಪದ ತಜ್ಞರಾಗಿದ್ದರು. ಅವರ ಜಾನಪದ ವಿದ್ವತ್ತು ಯಾವ ರಿತಿ ಇತ್ತೆಂದರೆ, ಇವರು ರಚಿಸಿರುವ 'ಜಾನಪದ ಸೌಂದರ್ಯ ಇವುಗಳಲ್ಲಿ 'ಜಾನಪದ ಅಧ್ಯಯನ'ವಂತೂ ವಿಭಿನ್ನವಾಗಿದೆ. ಜಾನಪದ ಗೀತಾಂಜಲಿ' ಎಂಬ ಸಂಪಾದಿತ ಕೃತಿಯೂ ಗಮನಾರ್ಹ ಇಲ್ಲಿ ಲೆಕ್ಕಿಸಬೇಕಾದ ಒಂದು ಮೂಲಕ ಭೂತ ಸಂಗತಿ ಎಂದರೆ ದೇಜಗೌ ಅವರಲ್ಲಿ ಸಹಜವಾಗಿಯೇ ಜಾನಪದ ಪ್ರಜ್ಞೆ ದೇಶಿ ಪ್ರಜ್ಞೆ ದಟ್ಟವಾಗಿದೆ ಎಂಬುದು ತಿಳಿಯುತ್ತದೆ.

ಕನ್ನಡ ಮಾಧ್ಯಮ ಕಾಲೇಜುಗಳಲ್ಲಿ ಐಚ್ಚಿಕ ಕನ್ನಡ. ಆಡಳಿತ ಭಾಷೆಯಾಗಿ ಕನ್ನಡ ಈ ಸಂಬಂಧ ಅವರ ಪ್ರಯತ್ನಗಳನ್ನು ಎಲ್ಲರೂ ಬಲ್ಲರು. ಆದರೆ ಅವರು ಕಟ್ಟಿದ, ಸ್ಥಾಪಿಸಿದ ಕೆಲವು ಸಂಸ್ಥೆಗಳ ಬಗ್ಗೆ ಭಾರತೀಯ ಸ್ಥಳನಾಮಗಳ ಸಂಸ್ಥೆ ಮುಂತಾದವುಗಳ ಬಗ್ಗೆ ನಮಗೆ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಕನ್ನಡದ ಕೆಲಸ ಎಂದಾಗ ಅದೊಂದು ಸಾಮೂಹಿಕ ಕಾರ್ಯ ಎಂಬ ನಿಲುವು ಅವರದು. ಹಿಂದೆ, ಕನ್ನಡ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾನಿಲಯಗಳಿಂದ ಪ್ರಗತಿಶೀಲ ಲೇಖಕರು ದೂರವೇ ಇದ್ದರು. ಇದನ್ನು ಮನಗಂಡ ದೇಜಗೌ ಅವರು ಅನಕೃ, ತರಾಸು, ಬಸವರಾಜುಕಟ್ಟೀಮನಿ, ನಿರಂಜನ, ಮಿರ್ಜಿ ಅಣ್ಣರಾಯ, ಮೊದಲಾದವರನ್ನು ತೆಕ್ಕೆಗೆ ತೆಗೆದುಕೊಂಡು ಕಾರ್ಯಸಾಧನೆ ಮಾಡಿದ್ದಾರೆ. ಇದನ್ನೆಲ್ಲ ನೋಡಿದರೆ ದೇಜಗೌರವರಿಗೆ ಕನ್ನಡದ ಬಗ್ಗೆ ಎಷ್ಟೊಂದು ಕಳಕಳಿ ಇತ್ತೆಂದರೆ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಸ್ನಾತಕೋತ್ತರ ಕೇಂದ್ರಗಳ ಸ್ಥಾಪನೆ ಅಲ್ಲಿ ಡಾಕ್ಟರೇಟು ಪದವಿಗಳನ್ನು ಕನ್ನಡದಲ್ಲಿಯೂ ಪಡೆದ ಸಂಶೋಧನಾ ಕಾರ್ಯಕಲಾಪಗಳು, ಕನ್ನಡ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಜಾನಪದ ಸಾಹಿತ್ಯ ಸಂಶೋಧನೆ, ವಿಶ್ವಕೋಶ ರಚನೆ, ಎಫಿಗ್ರಾಫಿಯಾ ಕರ್ನಾಟಕ ಹೀಗೆ ಹಲವಾರು ಕನ್ನಡಕ್ಕೆ ಸಂಬಂಧಿಸಿದ ಕೇವಲ ನಗರವಾಸಿಗಳಿಗೆ ಮಾತ್ರವಲ್ಲ, ಗ್ರಾಮೀಣ ಜನತೆಗೂ ಸಂಪರ್ಕವಿರುವ ವಿಷಯ ವಿಚಾರಗಳು ವಿಶ್ವವಿದ್ಯಾನಿಲಯದಲ್ಲಿ ಪ್ರಚಾರಗೊಂಡು, ಆ ಮೂಲಕ ನಾಡುನುಡಿಗಳ ಏಳಿಗೆ ಬುನಾದಿಯಿಂದಲೇ, ಗ್ರಾಮೀಣ ನೆಲೆಯಿಂದಲೇ ಭದ್ರವಾಗಿ ಬೇರೂರಬೇಕೆಂದು

ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದು ಸರ್ವಸಾಧನೆ ಮಾಡಿದರೆಂಬುದು ಗಣನೀಯವಾಗಿದೆ.

ಒಟ್ಟಿನಲ್ಲಿ ದೇಜಗೌ ಅವರದು ಎತ್ತರದ ವ್ಯಕ್ತಿತ್ವ ಬೆರಗುಗೊಳಿಸುವ ಸಾಧನೆ, ಏಕೆಂದರೆ ಅವರ ವ್ಯಕ್ತಿತ್ವದಲ್ಲಿ ಹುಟ್ಟು ಹೋರಾಟಗಾರ, ದಣಿವರಿಯದ ನಿರ್ಮಾಪಕ, ಶ್ರೇಷ್ಠ ಸಂಶೋಧಕ-ಅಧ್ಯಾಪಕ, ದೂರದೃಷ್ಟಿಯ ಉತ್ತಮ ಆಡಳಿತಗಾರ, ಮಹಾಕನಸುಗಾರ – ಇವರೆಲ್ಲರ ಗುಣ ವೈಶಿಷ್ಟ್ಯಗಳೂ ಮೇಳೈಸಿವೆ. ಹಾಗೆಯೇ ತಮ್ಮ ಪದವಿಯ ಔನ್ನತ್ಯದಿಂದ, ಅಸದೃಶವಾದ ನಾಡಪ್ರೇಮದಿಂದ ಅಪರಿಮಿತ ಪಾಂಡಿತ್ಯದಿಂದ ದೇಜಗೌ ಲೆಕ್ಕವಿಲ್ಲದಷ್ಟು ಸಭೆ ಸಮಾರಂಭ ವಿಚಾರಸಂಕಿರಣಗಳಲ್ಲಿ ಭಗವಹಿಸಿ ಆಯಾ ಸಂದರ್ಭಕ್ಕನುಗುಣವಾಗಿ ಔಚಿತ್ಯಪೂರ್ಣವಾಗಿ ಮಾತನಾಡಿ ಅಮೂಲ್ಯವಾದ ಚಿಂತನೆಗಳನ್ನು ನೀಡಿ ಚರ್ಚೆ, ಜಿಜ್ಞಾಸೆಯ ಶ್ರೀಮಂತಿಕೆಯನ್ನು ದ್ವಿಗುಣಗೊಳಿಸಿದ್ದಾರೆ. ಈ ಮಾತಿಗೆ ಅವರ 'ಕುಲಪತಿಯ ಬಾಷಣಗಳು' ಮಾಲಿಕೆಯಲ್ಲಿ ಪ್ಕಟವಾಗಿರುವ ಆರು ಸಂಪುಟಗಳು ಹಾಗೂ ತರುವಾಯ ಪ್ರಸಿದ್ಧವಾದ "ನಿರಂತರ" ಗ್ರಂಥಗಳೇ ಸಾಕ್ಷಿ. ಸಾಹಿತ್ಯ, ಸಮಾಜ, ಶಿಕ್ಷಣ, ಸಂಸ್ಕೃತಿ, ರಾಷ್ಟ್ರಜೀವನ, ಸ್ತ್ರೀ ವಿದ್ಯಾಭ್ಯಾಸ, ಜಾನಪದ, ಸೀಮಾಪುರುಷರ ಪರಿಚಯ, ವಿವಿಧ ಮತಗಳ ತೌಲನಿಕ ವಿಚಾರ, ಹೋರಾಟದ ಅಗತ್ಯ, ಭಾಷಾ ಸಮಸ್ಯೆ, ಜನಸಾಮಾನ್ಯರ ಬಾಳು-ಬದುಕು, ವಿಜ್ಞಾನ ಯುಗದಲ್ಲಿ ಮತ – ಹಿಗೆ ಅಸಂಖ್ಯಾತ ವಿಷಯಗಳ ಮೇಲೆ ದೇಜಗೌ ಉಪನ್ಯಾಸ ನೀಡಿದ್ದಾರೆ. ಎಪ್ಪತ್ತರ ದಶಕದ ಆರಂಭದಿಂದ ಮಧ್ಯಭಾಗದವರೆಗೆ ದೇಜಗೌ ವಿಶ್ವವಿಖ್ಯಾತ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದವರು. ಆ ಅವಧಿಯಲ್ಲಿ ಅವರು ಮಾಡಿದ ಭಾಷಣಗಳು ನಷ್ಟವಾಗದೆ ನಮಗೆ ಗ್ರಂಥರೂಪದಲ್ಲಿ ದಕ್ಕಿರುವುದು ನಮ್ಮ ಸುದೈವ. ಬರಹವನ್ನು ಒಂದು ವ್ರತವಾಗಿ ಕೈಕೊಂಡಿರುವ ಈ ಮಹನೀಯರು ಶಿಕ್ಷಣ ಕ್ಷೇತ್ರದ ಅತ್ಯುನ್ನತ ಒಂದು ವ್ರತವಾಗಿ ಕೈಕೊಂಡಿರುವ ಈ ಮಹನೀಯರು ಶಿಕ್ಷಣ ಕ್ಷೇತ್ರದ ಅತ್ಯುನ್ನತ ಹುದ್ದೆ ಪ್ರಾಪ್ತವಾದ ಸಂದರ್ಭದಲ್ಲಿ ಹೊಸ ಜವಾಬ್ದಾರಿಯಿಂದ ಬರಹಕ್ಕೆ ಎಲ್ಲಿ ಕುತ್ತು ಬೀಳುತ್ತದೋ ಎಂದು ದಿಗಿಲುಗೊಂಡದ್ದುಂಟು.

ದೇಜಗೌ ಭಾಷಣಗಳಲ್ಲಿ ವಸ್ತು ವೈವಿಧ್ಯ ವ್ಯಾಪಕತೆ ಮತ್ತು ನಿರೂಪಣಾ ಶೈಲಿಯ ವೈಶಿಷ್ಟ್ಯದಿಂದ ಅಚ್ಚರಿಮೂಡುತ್ತದೆ. ದಾಸ್ಯ ಶೃಂಖಲೆಯಲ್ಲಿ ದೇಶ ಬಂಧಿತವಾಗಿದ್ದು ಮಹಾತ್ಮಗಾಂಧಿಯವರ ಹೋರಾಟದ ಫಲವಾಗಿ ಬಿಡುಗಡೆಗೊಂಡ ಬಳಿಕ ನಾಡು-ನುಡಿಗಳ

ಬಗ್ಗೆ ದೇಶೀಯರಲ್ಲಿ ಒಲವು ಮುಡಿದ್ದು ಸಹಜವಾಗೇ ಇದೆ. 'ಚಿಕ್ಕದು ಸುಂದರ' ಎಂಬ ಅರಿವಿನಂತೆ ನಮ್ಮ ನಾಡು, ನಮ್ಮ ಬಾಷೆ ಸಂಸ್ಕೃತಿಗಳನ್ನು ಉದ್ದೀಪನಗೊಳಿಸಬೇಕಾದ ಅಗತ್ಯವನ್ನು ಚಿಂತಕರು ಮನಗಂಡದ್ದು ಸರಿಯಷ್ಟೆ ಈ ನಿಟ್ಟಿನಲ್ಲಿ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಕಾಪಾಡುವುದರಲ್ಲಿ ಆ ಸಂಬಂಧದ ಚಳವಳಿಯಲ್ಲಿ ದೇಜಗೌ ಮುಂಚೂಣಿಯಲ್ಲಿದ್ದುದನ್ನು ಕಾಣುತ್ತೇವೆ. ಹಾಗಾಗಿ ಮೇಲಿಂದ ಮೇಲೆ ದೇಜಗೌ ಕನ್ನಡನಾಡು, ಕನ್ನಡ ಭಾಷೆ, ಹೋರಾಟದ ಅಗತ್ಯ, ರಾಜ್ಯೋತ್ಸವ ಏಕೆ, ಕಾಸರಗೋಡಿನ ಬಗ್ಗೆ, ಕನ್ನಡದ ಅಭಿವೃದ್ಧಿ, ಕನ್ನಡ ಸರ್ವಮಾಧ್ಯಮವಾಗಬೇಕು, ಕರ್ನಾಟಕ ನಾಮಕರಣೋತ್ಸವ, ಕನ್ನಡದ ಕೋಡು, ಕರ್ನಾಟಕದಲ್ಲಿ ಕನ್ನಡ ಸಾಹಿತ್ಯದ ಅಭಿವೃದ್ಧಿ, ಕನ್ನಡದಿಂದಲೇ ಕನ್ನಡಿಗರಿಗೆ ಮುಕ್ತಿ, ಕನ್ನಡ ಅಧ್ಯಯನ ಸಂಸ್ಥೆ, ಕನ್ನಡಕ್ಕೊಂದು ಸಮಗ್ರ ಯೋಜನೆ, ಕನ್ನಡ ಚಳುವಳಿ ಮುಂತಾದ ವಿಷಯಗಳ ಕುರಿತು ಎಲ್ಲರ ಮನಮುಟ್ಟುವಂತೆ ಮಾತನಾಡಿದ್ದಾರೆ.

"ಕನ್ನಡ ಭಾಷಾ ಸಾಹಿತ್ಯಗಳಂತೆ ಪ್ರಜ್ವಲವೂ ಸಂಪತ್ ಸಮೃದ್ಧವೂ ರಮ್ಯವೂ ಅವಿಚ್ಛಿನ್ನವೂ ಆದ ಸುದೀರ್ಘ ಇತಿಹಾಸವುಳ್ಳ ಭಾಷಾ ಸಾಹಿತ್ಯಗಳು ಜಗತ್ತಿನಲ್ಲಿಯೇ ಅತಿ ವಿರಳವೆಂದು ಹೇಳಿದರೆ ಯಾರೂ ಕಡೆಗಣಿಸಬಾರದು. ಚಕ್ರವರ್ತಿಗಳು ಮಹಾಮಂತ್ರಿಗಳು ದಂಢಾದೀಶರು ಸಂತರು ಸಮಾಜ ಸುಧಾರಕರು ವಿರಕ್ತರು ಸ್ತ್ರೀಯರು ವಿವಿಧ ಕಾಯಕದವರು ಭಾಷಾ ಸಾಹಿತ್ಯಗಳ ಮೇಲ್ಮೆಗಾಗಿ ತಮ್ಮ ಪ್ರತಿಭೆಯನ್ನು ಧಾರೆಯೆರೆದಿದ್ದಾರೆ (ಕುಲಪತಿಗಳ ಭಾಷಣಗಳು, ಸಂಪುಟ-೨). ಇಷ್ಟಾಗಿಯೂ ಕನ್ನಡ ತುಂಬದ ಕೊಡ. ಇನ್ನು ಬೇರೆ ಮೂಲದಿಂದ ಜ್ಞಾನವನ್ನು ಆಮದು ಮಾಡಿಕೊಳ್ಳಬೇಕಾದ ಅಗತ್ಯವಿಲ್ಲವೆಂದು ದೇಜಗೌ ಭಾವಿಸುವುದಿಲ್ಲ. ಕನ್ನಡದ ಕಕ್ಷೆಗೆ ಎಷ್ಟು ಬಗೆದು ತೆಗೆದುಕೊಂಡರೂ ಅವರಿಗೆ ಸಾಕಾಗುವುದಿಲ್ಲ. ಕನ್ನಡದಲ್ಲಿ ಇಲ್ಲಿಯ ತನಕ ಸೃಷ್ಟಿಯಾಗಿರುವುದರ ಬಗೆಗೆ ಸಾಕಷ್ಟು ತೃಪ್ತರಾಗಿಯೇ ಮುಂದೇನಾಗಬೇಕೆಂದು ಅವರು ಸೂಚಿಸುವ ರೀತಿ ಅನನ್ಯವಾದದ್ದು.

"ಪಂಪ, ರನ್ನ, ಹರಿಹರ, ಬಸವೇಶ್ವರ, ನಾರಣಪ್ಪ, ರತ್ನಾಕರರು, ಕನಸಿನಲ್ಲಿಯೂ ಊಹಿಸಿಕೊಳ್ಳದಿದ್ದ ಅತ್ಯದ್ಭುತವಾದ ಸಂಕೀರ್ಣ ಜಗತ್ತು ನಮ್ಮ ಮುಂದಿದೆ. ಹತ್ತಿಪ್ಪತ್ತು ಶತಮಾನಗಳ ತುತ್ತ ತುದಿಯಲ್ಲಿರುವ, ಅನೇಕ ಸಂಸ್ಕೃತಿಗಳ ಕೂಡುದಾರಿಯಲ್ಲಿರುವ, ದಿನದಿನವೂ ಪರಿವರ್ತನೆಯಾಗುತ್ತಿರುವ ಜಗತ್ತಿನ ನಡುವಿರುವ ನಮ್ಮ ಮುಂದೆ ಅಕ್ಷಯನಿಧಿಯಿದೆ. ದಶರಥನಂತೆ ಹತ್ತು ದಿಕ್ಕುಗಳಲ್ಲಿಯೂ ಭಾಷೆಯನ್ನು ನಡೆಸಬಲ್ಲ ಧೀರ

ಸಾಹಸಿಯ ಮುಂದೆ ಇನ್ನೂ ಚಲಾವಣೆಗೆ ತರದ ನಾಣ್ಯ ರಾಶಿಯ ಮಹಾಚಲವಿದೆ. ಕೇಶಿರಾಜ ಭಟ್ಟಾ ಕಳಂಕ ಮೊದಲಾದ ಮಹಾ ಪಂಡಿತರಿಗೆ ದಕ್ಕದ ಶಬ್ದಭಂಡಾರ ಬೇಕಾದಷ್ಟಿದೆ. ನೆರೆಹೊರೆಯ ಹಾಗೂ ವಿದೇಶೀಯ ಭಾಷೆಗಳು ತಮ್ಮ ತಮ್ಮ ಶಬ್ಧಭಂಡಾರದ ಬಾಗಿಲ ಕೀಲಿ ಕೈಯನ್ನು ನಮ್ಮ ಕೈಗೆ ಕೊಟ್ಟುಬಿಟ್ಟವೆ. ವಿಜ್ಞಾನ ಗಣಿತ ತಾಂತ್ರಿಕ ವಿಜ್ಞಾನ ಸಮಾಜ ವಿಜ್ಞಾನ ಇಂತೆಯೇ ಇನ್ನೆಷ್ಟೋ ಜ್ಞಾನಶಾಖೆಗಳು ದಿನಬೆಳಗಾದರೆ ನೂರಾರು ಸಾವಿರಾರು ಪದಗಳನ್ನು ಟಂಕಿಸಿವೆ. ಜಾನಪದ ಭಂಡಾರದ ಮುದ್ರೆಯನ್ನೊಡೆಯುವ ಕೆಚ್ಚೆದೆಯ ಕಟ್ಟಾಳು ಇನ್ನೂ ಹುಟ್ಟಬರಬೇಕಾಗಿದೆ. ಇಷ್ಟೆಲ್ಲವನ್ನು ಕೊಳ್ಳೆ ಹೊಡೆದಾಗ ಕನ್ನಡ ಹೊನ್ನಿನ ಯುಗವನ್ನು ಕಾಣುತ್ತದೆ (ಕುಲಪತಿಯ ಭಾಷಣಗಳು ಸಂಪುಟ. ೪-೫).

ನಾಡು-ನುಡಿಯ ಪ್ರೇಮಿಯಾಗಿ, ಆರಾಧಕರಾಗಿ ದೇಜಗೌ ಕನ್ನಡದ ಪ್ರಶ್ನೆಯನ್ನು ಮೇಲಿಂದ ಮೇಲೆ ಅವರು ಚರ್ಚಿಸಿರುವುದರ ಜೊತೆಗೆ ವಿದ್ಯೆಯ ಮಹತ್ವದ ಬಗೆಗೂ ಅನೇಕ ವೇದಿಕೆಗಳಿಂದ ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಗ್ರೀಸಿನ ಪುರಾತನ ವಾಗ್ಮಿಗಳು ಸ್ಥಿತಿವಂತರು, ಬಹಳ ಅನುಕೂಲಕರವಾದ ಪರಿಸರದಲ್ಲಿ ಹುಟ್ಟಿ ಬೆಳೆದವರು; ತರಬೇತಿಗೆ, ಮಾರ್ಗದರ್ಶನಕ್ಕೆ ವ್ಯವಸ್ಥಿತವಾದ ಸನ್ನಿವೇಶವನ್ನು ರೂಪಿಸಿಕೊಂಡಿದ್ದವರು. ನಿರಕ್ಷರ ವಲಯದಿಂದ ಬಂದ ದೇಜಗೌ ಲೋಕವನ್ನು ನೋಡಿ ಸರ್ವಜ್ಞಾನ ಸಂಪನ್ನತೆಯನ್ನು ಗಳಿಸಿಕೊಮಡವರು. ಇವರ ಬೆಂಗಾವಲಿಗೆ ಗುರು ಮತ್ತು ಗುರಿ ಎರಡೂ ದಕ್ಕಿದ್ದವು.

ಗುರುವಿನ ಸಂಸ್ಪರ್ಶದಿಂದ ಜ್ಞಾನದೇಗುಗಲದ ಬಾಗಿಲು ತೆರೆದ ಕಾರಣ ಅವಕಾಶ ಒದಗಿದಾಗಲೆಲ್ಲ ಅವರು ವಿದ್ಯೆ ಮತ್ತು ಜ್ಞಾನಾರ್ಜನೆಯ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಅವರ ಪ್ರಕಾರ 'ಈ ಧರೆ ಬಲವಂತರ ಆಸ್ತಿ ಎಂಬೊಂದು ನಂಬಿಕೆ ಒಂದಾನೊಂದು ಕಾಲದಲ್ಲಿತ್ತು; ಈಗ ಅದು ಜ್ಞಾನಸಂಪನ್ನರ ಸ್ವತ್ತಾಗಿದೆ. ಜ್ಞಾನ ಧೈರ್ಯ ಮತ್ತು ಆತ್ಮಪ್ರತ್ಯಯಗಳು ಪರಸ್ಪರಾವಲಂಬಿ' (ಸಂಪುಟ ೪-೫) ಮತ್ತೊಂದು ಕಡೆ ಇದೇ ವಿಷಯದ ಪ್ರಸ್ತಾಪವಿದೆ. "ಬಡತನಕ್ಕೂ ಗುಲಾಮತನಕ್ಕೂ ಹತ್ತಿರದ ನಂಟು. ಅನಕ್ಷರಸ್ಥರು ಹಾಗೂ ಅವಿದ್ಯಾವಂತರು ಅಧಿಕವಾಗಿರುವ ದೇಶ ಎಂದಿಗೂ ಅಭಿವೃದ್ಧಿಮುಖವಾಗುವುದಿಲ್ಲ. ಯಾವಾಗಲೂ ಹಿಂದುಳಿದಿರುತ್ತದೆನ್ನುವುದಕ್ಕೆ ಭರತಖಂಡವೇ ಜ್ವಲಂತ ನಿದರ್ಶನ. ಈ ಯುಗದಲ್ಲಿ ಮಾನವನ ನಿಜವಾದ ಶಕ್ತಿಯೆಂದರೆ ಜ್ಞಾನವೇ ಹೊರತು ಶಸ್ತ್ರಾಸ್ತ್ರವಲ್ಲ, ಆಸ್ತಿಯಲ್ಲ, ಶಾರೀರಿಕ ಬಲವಲ್ಲ, ಜ್ಞಾನವೊಂದಿದ್ದರೆ ಅವೆಲ್ಲ ತಾವಾಗಿಯೇ ಬರುತ್ತವೆ.

ಅಕ್ಷಯ ನಿಧಿಯಾದ ಜ್ಞಾನವನ್ನು ದಕ್ಕಿಸುವುದು ಮೂಲತಃ ಶಿಕ್ಷಣದ ಗುರಿ. ಈ ಜವಾಬ್ದಾರಿಯನ್ನು ಪ್ರಾಥಮಿಕ ಶಾಲೆಯಿಂದ ಹಿಡಿದು ಉನ್ನತ ಶಿಕ್ಷಣ ಸಂಸ್ಥೆಗಳು ಅದರಲ್ಲೂ ವಿಶೇಷವಾಗಿ ವಿಶ್ವವಿದ್ಯೆಯನ್ನೇ ತನ್ನ ಲಕ್ಷ್ಯದಲ್ಲಿಟ್ಟುಕೊಂಡ ವಿಶ್ವವಿದ್ಯಾನಿಲಯ ಹೊರಬೇಕು. ಆದ್ದರಿಂದಲೇ "ವಿಶ್ವವಿದ್ಯಾನಿಲಯ ಸಮಾಜದಿಂದ ಬೇರೆಯಾಗಿ ನಿಲ್ಲಬಾರದು. ತನ್ನ ಸಹಸ್ರಾರು ಬಾಹುಗಳಿಂದ ಸಮಾಜದ ಸಕಲ ಶಾಖೆಗಳನ್ನು ಬಾಚಿ ತಬ್ಬಿಕೊಳ್ಳಬೇಕು. ಸಮಾಜದ ಆಶೋತ್ತರಗಳನ್ನು ಈಡೇರಿಸಬೇಕು. ಅದರ ಲೋಪದೋಷಗಳನ್ನು ನಿವಾರಿಸಿ, ಜೀವನವನ್ನು ಹಸನುಗೊಳಿಸಿ, ಅದು ಸದಾ ಚೈತನ್ಯಮಯವಾಗಿ ಪ್ರವಹಿಸುವಂತೆ ಅನುಕೂಲ ವಾತಾವರಣವನ್ನು ಕಲ್ಪಿಸುವುದು ಅದರ ಆದ್ಯ ಕರ್ತವ್ಯ (ಸಂಪುಟ ೪–೫).

ಉನ್ನತ ವ್ಯಾಸಂಗದ ಅಗತ್ಯತೆಯನ್ನು ಒತ್ತಿಹೇಳುವಾಗಲೂ ಭರತಖಂಡದ ಅಕ್ಷರ ವಿಹೀನ ಅಕ್ಷೋಹಿಣಿ ಸೈನ್ಯ ಧೈನ್ಯವಾಗಿ ಜಮಾಯಿಸಿರುವ ದೃಶ್ಯವನ್ನು ದೇಜಗೌ ಮತ್ತೆ ಮತ್ತೆ ನೆನಪುಮಾಡುತ್ತಾರೆ. ಅಕ್ಷರ ವಿಹೀನ ವಯಸ್ಕರಿಗೆ ಯಾವ ಮಾರ್ಗದಲ್ಲಿಯಾದರೂ, ಯಾವ ಪ್ರಮಾಣದಲ್ಲಿಯಾದರೂ ವಿದ್ಯೆಯನ್ನು ಕೊಡಬೇಕೆಂದು ತಿಳಿಸುತ್ತಾ ಇಲ್ಲೂ ಕೂಡ ವಿಶ್ವವಿದ್ಯಾನಿಲಯ ತನ್ನ ಜವಾಬ್ದಾರಿಯನ್ನು ಹೊರಬೇಕೆಂದು ಹೇಳುತ್ತಾರೆ.

ಇನ್ನು ಮುಂದೆ ವಿಶ್ವವಿದ್ಯಾನಿಲಯಗಳು ಪ್ರತ್ಯೇಕವಾದ ದಂತದ ಗೋಪುರದೊಳಗೆ ತಮ್ಮನ್ನು ನಿರ್ಬಂಧಪಡಿಸಲಾರವು. ಅವು ತಮ್ಮ ಪ್ರಧಾನ ಉದ್ದೇಶವನ್ನು ಬಲಿಕೊಡದೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ತಮ್ಮ ಸುತ್ತಮುತ್ತಲ ಸಮಾಜದ ಅಗತ್ಯಗಳನ್ನು ಹಾಗೂ ಹಾರೈಕೆಗಳನ್ನು ಪೂರೈಸಬಹುದಾಗಿದೆ. ಅವು ಶ್ರೀಮಂತ ಜ್ಞಾನ ಭಂಡಾರಗಳಾಗಿರಬೇಕು. ಈ ಅಮೂಲ್ಯ ಜ್ಞಾನಸ್ತೋತ್ರವು ಅಲ್ಲಿಂದ ಮುಕ್ತ ಸ್ವರೂಪದಲ್ಲಿ ಓತಪ್ರೋತವಾಗಿ ಹರಿದುಬರಬೇಕು (ಸಂಪುಟ–೬).

ಎಪ್ಪತ್ತರ ದಶಕದಲ್ಲಿ ದೇಜಗೌ ಅವರ ಅನೇಕ ಭಾಷಣಗಳು ಅನುರಣನೆಗೊಳ್ಳುತ್ತಿದ್ದವು. ನಾಡುನುಡಿಯ ಬಗಗೆ ಅವರ ಮಾತುಗಳು ಭೋರ್ಗರೆಯುತ್ತಿದ್ದ ರೀತಿ, ಕನ್ನಡ ಮಾಧ್ಯಮ ವಿರೋಧವನ್ನು ಅವರು ಮಾಡುತ್ತಿದ್ದ ಬಗೆ, ಅವಿದ್ಯೆಯನ್ನು ಅವರು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಪರಿ, ಸಾಂಸ್ಕೃತಿಕ ಉದ್ದೀಪನವನ್ನು ಅವರು ಒತ್ತಿ ಹೇಳುತ್ತಿದ್ದ ಕ್ರಮ ಅಸದೃಶ, ಎಂಭತ್ತು ದಶಕಗಳ ಉತ್ತುಂಗದಲ್ಲಿ ಮೊದಲಿನ ಕಾವು ಕಂಡುಬರುವುದಿಲ್ಲವಾದರೂ

ಮಾಗಿದ ಮನಸ್ಸಿನ ರಸಪಾಕ ಶ್ರೋತೃಗಳಿಗೆ ಲಭ್ಯವಾಗುವುದುಂಟು. ತನ್ನದೇ ಆದ ಮಾಧುರ್ಯ, ರುಚಿ ಇರುವುದನ್ನು ಕಾಣಬಹುದು.

ದೇಜಗೌರವರು ಎಲ್ಲಾ ಸಂದರ್ಭಗಳಲ್ಲೂ ಹೋರಾಟವನ್ನು ಮಾಡುತ್ತಾ ಬಂದಿರುವುದನ್ನು ಕಾಣಬಹುದು. ತಮ್ಮ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳ ಬಗ್ಗೆ ಹೇಳುತ್ತಲೇ ಬಂದಿದ್ದಾರೆ. ದೇಜಗೌರವರ ಹೋರಾಟದ ಹಿಂದಿರುವ ಸಾಂಸ್ಕೃತಿಕ ಮಹತ್ವವನ್ನು ನಾವು ಮನಗಾಣಬಹುದು. ಅವರ ಹೋರಾಟ ಎಂದಿಗೂ ವ್ಯರ್ಥವಾಗುವುದಿಲ್ಲ ಅಥವಾ ಕ್ಷಣಕಾಲದ ಭಾವೋದ್ವೇಗದ ವಿಚಾರವಾಗಿ ಅಳಿಸಿಹೋಗುವುದಿಲ್ಲ. ಕಾಲಾನಂತರವೂ ಆ ಹೋರಾಟದ ಸತ್ವ ಪ್ರಸರಣವಾಗುತ್ತಲೇ ಇರುತ್ತವೆ. ಈ ಹೋರಾಟಕ್ಕೆ ತಾತ್ವಿಕ ಹಿನ್ನೆಲೆ ಗಟ್ಟಿಯಾಗಿರುವುದು ಇದಕ್ಕೆ ಕಾರಣ. ದೇಜಗೌರವರು ಗ್ರಾಮೀಣ ಜನರು ಆಡಳಿತದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಅವರಾಡುವ ಭಾಷೆಯನ್ನು ಆಡಳಿತ ಭಾಷೆಯಾಗಿಸಬೇಕು. ಅವರು ಓದುವ ಭಾಷೆಯನ್ನು ಶಿಕ್ಷಣ ಮಾಧ್ಯಮ ಭಾಷೆಯನ್ನಾಗಿಸಬೇಕೆಂದು ಹಿಂದಿನಿಂದಲೂ ಒತ್ತಾಯ ಮಾಡುತ್ತಾ ಬಂದಿದ್ದಾರೆ. ಕನ್ನಡ ನಾಡಿನ ಮಕ್ಕಳು ತಮ್ಮ ಸಹಜ ಪ್ರತಿಭೆಯಿಂದಲೇ ಸರ್ಕಾರಿ ನೌಕರಿ ಪಡೆದು ಸ್ವಾಭಿಮಾನಿಗಳಾಗಿ ಬದುಕಬೇಕೆಂಬುದು ದೇಜಗೌರವರ ಕನಸಾಗಿತ್ತು.

ದೇಜಗೌರವರ ಹೋರಾಟವನ್ನು ಮೂರು ಘಟ್ಟಗಳಲ್ಲಿ ವಿಶ್ಲೇಷಿಸಬಹುದು. ಶ್ರೇಷ್ಠ ಸಾಹಿತ್ಯ ಪುರುಷರಾಗಿ ಕನ್ನಡ ಬಾಷೆಗೆ ಕೊಟ್ಟ ಕೊಡುಗೆ ಸಹಜವಾಗಿ ಬಂದ ಅಧಿಕಾರದಿಂದ ಕನ್ನಡ ಅಭಿವೃದ್ಧಿಗೆ ಮಾಡಿದ ಕಾರ್ಯಗಳು ಶ್ರೀಸಾಮಾನ್ಯರ ನೆಲೆಯಲ್ಲಿ ನಿಂತು ಕಾಲದಿಂದ ಕಾಲಕ್ಕೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಗೆ ದೊರೆಯಬೇಕಾದ ಸೌಲಭ್ಯಗಳ ಬಗ್ಗೆ ಧ್ವನಿಯೆತ್ತಿ ಜನಜಾಗೃತಿ ಮಾಡಿರುವುದನ್ನು ನಾವು ನೋಡಬಹುದು. ಮೊದಲನೆಯ ಘಟ್ಟವಾಗಿ ಕಳೆದ ಅರ್ಧ ಶತಮಾನದಿಂದ ದೇಜಗೌರವರು ಕನ್ನಡಭಾಷೆಗೆ ಕೊಟ್ಟ ಸಾಹಿತ್ಯ ಸಂಪತ್ತನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ. ಒಟ್ಟಾರೆ ಅವರ ಎಲ್ಲಾ ಕೃತಿಗಳನ್ನು ಪರಿಚಯಿಸುವುದು ಅಥವಾ ವಿಮರ್ಶಿಸುವುದು ವ್ಯಕ್ತಿಯೊಬ್ಬರಿಗೆ ಸಾಧ್ಯವಾಗುವ ಕೆಲಸವಲ್ಲ. ವಿಶ್ವವಿದ್ಯಾಲಯಗಳು ಇದಕ್ಕಾಗಿ ಪ್ರತ್ಯೇಕ ಅಧ್ಯಯನ ಪೀಠವನ್ನು ಪ್ರಾರಂಭಿಸಬೇಕಾಗುತ್ತದೆ. ಇದೆಲ್ಲವನ್ನು ನೋಡಿದ ನಮಗೆ ಅವರ ಸಾಹಿತ್ಯ ರಾಶಿ ಆ ಪ್ರಮಾಣದಲ್ಲಿ ಸಮೃದ್ಧವಾಗಿರುವುದನ್ನು ಗಮನಿಸಬಹುದು.

ಶಿಕ್ಷಣ ಪರಿಣಾಮಕಾರಿಯಾಗಲು ಆಡಳಿತ ಸಾರ್ಥಕವಾಗಲು ದೇಶಭಾಷಾ–ಮಾಧ್ಯಮ ಅನಿವಾರ್ಯ. ಅದು ಪ್ರಚಲಿತವಿರುವ ಪ್ರದೇಶದಲ್ಲೆಲ್ಲ ಎಲ್ಲಿ ಹೋದರೂ ಜನರ ಕಿವಿಗಳಲ್ಲಿ ಅಲೆಯುತ್ತದೆ. ನಾಲಗೆಗಳ ಮೇಲೆ ನರ್ತಿಸುತ್ತದೆ. ಇಡೀ ವಾತಾವರಣ ಅದರ ಸೊಂಪು ಸೊಗಡುಗಳಿಂದ ಸಂಭ್ರಮಿಸುತ್ತದೆ. ಅದರ ಶಬ್ದಗಳು ಸದಾ ಸಮಸ್ತ ಜನರ ಕಿವಿಗಳಲ್ಲಿ ಗುನುಗುಡುವುದರಿಂದ, ಅವರ ನಾಡಿಗಳಲ್ಲಿ ಮಾರ್ದನಿಸುವುದರಿಂದ ಅದರ ಧ್ವನಿತರಂಗಗಳು ಅಲ್ಲಿಯ ಸಚರಾಚರ ವಸ್ತುಗಳಲ್ಲಿ ಕಂಪಿಸುವುದರಿಂದ, ಆ ಭಾಷೆ ಮನೆ ಭಾಷೆಗಿಂತ ಮಿಗಿಲಾಗಿ ಸರ್ವರ ಸ್ವತ್ತಾಗುತ್ತದೆ. ಸ್ವಾತಂತ್ರ್ಯಾನಂತರ ದಕ್ಷಿಣೋತ್ತರ ಜನರ ವಲಸೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯಷ್ಟೇ. ಮೈಸೂರಂಥ ಸಣ್ಣ ನಗರ ಸಹ ಕಿರುಭಾರತವಾಗುತ್ತಿದೆ. ಉತ್ತರದ ಹಲವು ಕುಟುಂಬಗಳು ಇಲ್ಲಿ ನೆಲೆಸುತ್ತಿವೆ. ಆ ಕುಟುಂಬಗಳ ಐದಾರು ವರ್ಷದ ಮಕ್ಕಳು ಕೇವಲ ಐದಾರು ತಿಂಗಳಲ್ಲಿ ಇಲ್ಲಿನ ಮಕ್ಕಳೊಡನೆ ಆಟ ಪಾಠಗಳಲ್ಲಿ ಬೆರೆಯುತ್ತ ಕನ್ನಡ ಸ್ವಭಾಷೆ ಎನ್ನುವಷ್ಟರ ಮಟ್ಟಿಗೆ ಸೊಗಸಾಗಿ ಕಲಿತುಕೊಳ್ಳುತ್ತಾರೆ. ಅವರ ತಾಯಿ ನುಡಿ ಮನೆಯೊಳಗೆ ಮೂರ್ನಾಲ್ಕು ಮಂದಿಗೆ ಮಾತ್ರವೇ ಸೀಮಿತವಾಗುತ್ತದೆ. ಮನೆಯ ಹೊಸ್ತಿಲಿಂದಾಚೆಗೆ ಅವರು ಕಾಲಿಡುತ್ತಿದ್ದಂತೆ ತಾಯಿ ನುಡಿಯನ್ನು ಮರೆಸುವಷ್ಟರಮಟ್ಟಿಗೆ ದೇಶ ಭಾಷೆ ವಿಜೃಂಭಿಸುತ್ತದೆ. ಮನೆಯಲ್ಲಿಯೂ ಅವರು ದೇಶಭಾಷೆಯನ್ನೇ ಬಳಸುವ ಸಂಭವವುಂಟು. ಅವರಾದ ನಂತರ ದೇಶಭಾಷೆಯನ್ನು ಬಹು ಶೀಘ್ರವಾಗಿ ಕಲಿಯುವ ವಲಸೆಗಾರರೆಂದರೆ ಸ್ತ್ರೀಯರು. ಆಳು ಕಾಳುಗಳೊಡನೆ ಹಾಲು, ಮೊಸರುಗಳ ಮಂಗಮ್ಮರೊಡನೆ ಮಾರ್ಕೆಟ್ಟಿನ ಬೀದಿಯ ಚಿಲ್ಲರೆಶೆಟ್ಟರೊಡನೆ ವ್ಯವಹಾರ ನಡೆಸುತ್ತ ತೀವ್ರವಾಗಿ ಅದನ್ನು ಕಲಿತುಕೊಳ್ಳುತ್ತಾರೆ.

ಪ್ರಜಾಪ್ರಭುತ್ವಕ್ಕೂ ಆಡಳಿತ ಮಾಧ್ಯಮಕ್ಕೂ ಶಿಕ್ಷಣ ಮಾಧ್ಯಮಕ್ಕೂ ಹೊಕ್ಕುಳು ಬಳ್ಳಿಯ ಸಂಬಂಧವಿದೆ ಎನ್ನುವುದನ್ನು ನಾಯಕನಾಗಲಿ, ತತ್ತ್ವಜ್ಞಾನಿಯಾಗಲಿ ಮರೆಯಲಾಗದು. ಪ್ರಜಾಸತ್ತಾತ್ಮಕ ತತ್ತ್ವಗಳಿಗನುಗುಣವಾಗಿ, ಭಾಷೆಗಳ ಆಧಾರದ ಮೇಲೆ ಜರ್ಮನಿ, ಫ್ರಾನ್ಸ್ ಮೊದಲಾದ ದೇಶಗಳಾಗಲಿ, ಒರಿಸ್ಸಾ, ಮಹಾರಾಷ್ಟ್ರ, ತಮಿಳುನಾಡು ಮೊದಲಾದ ಪ್ರಾಂತ್ಯಗಳಾಗಲಿ ವಿಂಗಡಣೆಗೊಂಡಿವೆ ಎಂಬುದು ಸರ್ವವೇದ್ಯ, ಪ್ರಜೆಗಳ ಧರ್ಮ ಒಂದೇ ಆದರೂ ಭಾಷಾ ಸಮಸ್ಯೆಯ ಕಾರಣವಾಗಿ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳು ಪ್ರತ್ಯೇಕಗೊಂಡಿವೆ ಎಂಬುದು ಜಗತ್‌ಜಾಹಿರಾತಾಗಿದೆ. ಈಗ ಕೆನಡಾದ ಒಂದು

ಭಾಗವಾಗಿರುವ ಬೇಕ್ ಪ್ರತ್ಯೇಕ ರಾಷ್ಟ್ರವಾಗಲು ಚಳವಳಿ ನಡೆಸುತ್ತಿರುವುದಕ್ಕೆ ಭಾಷೆಯೇ ಕಾರಣವಲ್ಲವೇ ಎಂಬುದನ್ನು ನಾವು ತಿಳಿಯಬೇಕಾಗುತ್ತದೆ. ಈ ದೃಷ್ಟಿಯಿಂದ ಎಲ್ಲವನ್ನು ಮನಗಂಡ ದೇಜಗೌರವರು ಇವುಗಳೆಲ್ಲದರ ವಿರುದ್ಧ ಹೋರಾಟ ಮಾಡುತ್ತಲೇ ಬಂದಿದ್ದಾರೆ.

ಸಂಸ್ಕೃತಿ ವಿಕಾಸಕ್ಕೆ ಹೃದಯಸಂವಾದಕ್ಕೆ, ಭಾವೈಕ್ಯತೆ ಮತ್ತು ಆಡಳಿತಕ್ಕೆ ಭಾಷೆಯ ತಳಹದಿ ಎನ್ನುವ ತತ್ತ್ವವನ್ನು ಜಗತ್ತಿನ ಪ್ರಜ್ಞಾವಂತ ರಾಜಕೀಯ ಮುತ್ಸದ್ದಿಗಳೆಲ್ಲಾ ಅಂಗೀಕರಿಸಿದ್ದಾರೆ. ಅಲ್ಪಸಂಖ್ಯಾತ ಭಾಷೆಗಳ ಬೆಳವಣಿಗೆಗೆ ಮುಕ್ತಾವಕಾಶ ಕಲ್ಪಿಸಬಹುದಾದರೂ ಬಹುಜನರ ಭಾಷೆ ಎಂದೇ ಆಯಾ ಪ್ರದೇಶಗಳ ಜನ ಒಪ್ಪಲೇಬೇಕು. ಬಹುಜನರ ಭಷೆಯಲ್ಲಿ ಆಡಳಿತ ನಡೆಸಬೇಕಾದ್ದು ಪ್ರಜಾಪ್ರಭುತ್ವದ ತತ್ತ್ವಗಳಲ್ಲೊಂದು. ಆಡಳಿತ ಪಾರದರ್ಶಕವಾಗಬೇಕಾದರೆ, ಗುರಿ ತಲುಪಬೇಕಾದರೆ ಪರಿಣಾಮಕಾರಿಯಾಗ-ಬೇಕಾದರೆ ಎಲ್ಲರಿಗೂ ತಿಳಿಯುವ ಬಹುಜನರ ಭಾಷೆಯಲ್ಲಿ ಸರ್ಕಾರ ಆಡಳಿತ ನಡೆಸಬೇಕು. ಪ್ರಜೆಗಳಿಗೆ, ಪ್ರಜಾಪ್ರಭುತ್ವಕ್ಕೆ ದ್ರೋಹವೆಸಗುತ್ತಿದೆ ಎಂದೇ ಹೇಳಬೇಕು. ಅಂದ ಮೇಲೆ ದೇಶಭಾಷೆಯೇ ಆಡಳಿತ ಮಾಧ್ಯಮವಾಗಬೇಕೆಂಬ ವಿಷಯದಲ್ಲಿ ಲವಲೇಶವೂ ಸಂದೇಹವಿಲ್ಲ. ಯಾವುದು ಆಡಳಿತ ಮಾಧ್ಯಮವೋ ಅದೇ ಶಿಕ್ಷಣ ಮಾಧ್ಯಮವಾಗಬೇಕೆಂಬುದು ಸಹಜವಾಗಿ, ತಾರ್ಕಿಕವಾಗಿ, ವೈಜ್ಞಾನಿಕವಾಗಿ ಸಂಲಬ್ಧವಾದ ಅಂತಿಮ ನಿರ್ಣಯ, ಜನರ ಕಷ್ಟಸಂಕಷ್ಟಗಳಿಗೆ ಸಂವೇದಿಸಿದ, ಅವರೊಡನೆ ನೇರ ಸಂಪರ್ಕವನ್ನು ಸಾಧಿಸಿದ ಮತ್ತು ಅವರಿಗೆ ಅರ್ಥವಾಗುವಂಥ ಭಾಷೆಯಲ್ಲಿ ವ್ಯವಹಾರ ನಡೆಸದ ಶವ ಸದೃಶವಾದದ್ದೆಂದೇ ಹೇಳಬೇಕಾಗುತ್ತದೆ.

ಪ್ರೌಢಶಾಲಾ ಹಂತದಿಂದ ಮುಂದಕ್ಕೆ ಕರ್ನಾಟಕದಲ್ಲಿ ಕನ್ನಡ ಏಕಮಾತ್ರ ಶಿಕ್ಷಣ ಮಾಧ್ಯಮವಾಗಬೇಕು. ಕನ್ನಡ ಕಡ್ಡಾಯವಾಗಿ ಪ್ರಥಮ ಭಾಷೆಯ ಸ್ಥಾನಮಾನಗಳನ್ನು ಪಡೆಯಬೇಕು. ತ್ರಿಭಾಷಾ ಸೂತ್ರದ ಪ್ರಕಾರ ಯಾವುದಾದರೂ ಎರಡು ಭಾಷೆಗಳನ್ನು ಐಚ್ಛಿಕವಾಗಿ ಕಲಿಸಬಹುದು. ರಾಜ್ಯಾಂಗದಲ್ಲಿ ಅಲ್ಪಸಂಖ್ಯಾತ ಭಾಷೆಗಳಿಗೆ ರಕ್ಷಣೆಕೊಟ್ಟಿರುವುದು ಸರಿಯಲ್ಲ. ಉದಾಹರಣೆಗೆ, ಕರ್ನಾಟಕದಲ್ಲಿ ತಮಿಳು, ತೆಲುಗು ಮಲೆಯಾಳಂ ಇತ್ಯಾದಿ ಭಾಷೆಗಳು ಅಲ್ಪಸಂಖ್ಯಾತ ವರ್ಗಕ್ಕೆ ಸೇರುತ್ತವೆ. ಅವುಗಳನ್ನು ಕೇವಲ ಭಾಷೆಯಾಗಿ ಕಲಿಯಲು ಪೂರ್ಣಾವಕಾಶ ಒದಗಿಸಬೇಕಾದ್ದು ಸಹಜ. ಆದರೆ ಅವು ಶಿಕ್ಷಣ ಮಾಧ್ಯಮವಾಗಬೇಕೆಂದು ಆಡಳಿತ ಮಾಧ್ಯಮವಾಗಬೇಕೆಂದು ಹಂಬಲಿಸಬಾರದು. ಹಾಗೇ

ಹಂಬಲಿಸುವುದಾದರೆ ಭಾಷಾಧಾರಿತ ಪ್ರಾಂತೀಕರಣ ತತ್ತ್ವವೇ ಹುಸಿಯಾಗುವುದಲ್ಲದೆ, ಅನಾವಶ್ಯಕವಾದ ದೇಶಹಿತವಿರೋಧಿಯಾದ ಐಕ್ಯಭಂಗಕಾರಿಗಳಾದ ಅಪಾಯಗಳಿಗೆ ಗುರಿಯಾಗಬೇಕಾಗುತ್ತದೆ.

ಭಾರತದ ಭಾಷಾ ಶ್ರೇಣಿಯಲ್ಲಿ ಇಂಗ್ಲಿಷಿನ ಸ್ಥಾನವೇನೆಂಬ ಪ್ರಶ್ನೆಯೂ ಅನಾವಶ್ಯಕ, ಅದು ಐಚ್ಛಿಕ ಬಾಷೆಯಾಗಿ ಪರಿವಾರದ ಭಾಷೆಯಾಗಿ ಈ ರಾಷ್ಟ್ರದಲ್ಲಿ ಉಳಿಯಲೇಬೇಕು. ಅಷ್ಟೇ ಅಲ್ಲ. ಉನ್ನತ ಸಂಶೋಧನೆಯನ್ನು ಮಾಡುವ ಎಲ್ಲ ತಜ್ಞರು ಅದನ್ನು ಕಡ್ಡಾಯವಾಗಿ ಕಲಿಯಬೇಕು. ಆದರೆ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹಣಬೆಗಳಂತೆ ಏಳುತ್ತಿರುವುದು ವಿಷಾದದ ಸಂಗತಿಯಾಗಿದೆ. ಆದರೆ ಪ್ರತಿ ವರ್ಷವೂ ಮಾನ್ಯತಾ ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಭಾರೀ ಮೊತ್ತವನ್ನು ತೆರಬೇಕಾಗುತ್ತದೆ. ಈ ಶುಲ್ಕದಿಂದ ಬರುವ ಆದಾಯದಿಂದ ಸರ್ಕಾರ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ನೀಡುವುದರ ಜೊತೆಗೆ ಪ್ರೋತ್ಸಾಹ ಧನವನ್ನು ಸಲ್ಲಿಸಬಹುದು. ಈಗ ಅನುದಾನವಿಲ್ಲದೆ ರೋಗಗ್ರಸ್ತವಾಗಿ ನರಳುತ್ತಿರುವ ಕನ್ನಡ ಶಾಲೆಗಳನ್ನು ಉದ್ಧರಿಸಬಹುದು. ಕನ್ನಡ ಪೂರ್ಣ ಆಡಳಿತ ಮಾಧ್ಯಮವಾಗಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಮಾತ್ರ ಸರ್ಕಾರಿ ನೌಕರಿ ಗಳಿಸಲು ಅರ್ಹರೆಂದು ಘೋಷಿಸುವಂತೆ ಸರ್ಕಾರದ ಮೇಲೆ ಒತ್ತಡ ತಂದಾಗ ಭಾಷಾಗೊಂದಲ ತಾನಾಗಿಯೇ ಬಗೆಹರಿಯುತ್ತದೆ. ಕನ್ನಡ ಮಾಧ್ಯಮ ಕರ್ನಾಟಕಕ್ಕೊಂದು ಕೋಟೆಯಾದೀತು.

ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮ ಜಾರಿಗೊಂಡು ಸುಮಾರು ಮೂರು ದಶಕಗಳಾದರೂ ಇಂಜನಿಯರಿಂಗ್ ಮತ್ತು ವೈದ್ಯ ಶಿಕ್ಷಣ ಕನ್ನಡದಲ್ಲಿ ನಡೆಯದಿರುವುದು ವಿಷಾದದ ಸಂಗತಿಯಾಗಿದೆ ಆ ವಿಷಯಗಳಲ್ಲಿ. ಪಠ್ಯಪುಸ್ತಕಗಳಿಲ್ಲದಿರುವುದೊಂದು ನೆಪ ಬೇಡಿಕೆ ಹೆಚ್ಚಿದಂತೆ ಕಾರ್ಖಾನೆಗಳಲ್ಲಿ ಮಾಲು ಸಿದ್ಧವಾಗುತ್ತದೆ. ಕನ್ನಡ ಮಾಧ್ಯಮದ ಘೋಷಣೆ ಹೊರಬಿದ್ದ ಕೂಡಲೇ ಗ್ರಂಥಗಳು ಪ್ರಕಟವಾಗುತ್ತವೆ. ಈ ದಿಶೆಯಲ್ಲಿ ಸರ್ಕಾರವೂ ಪ್ರೋತ್ಸಾಹ ನೀಡಬೇಕಾಗುತ್ತದೆ. ಬೋಧನೆಯ ಅನುಭವವಿಲ್ಲದೆ ಉದ್ಗ್ರಂಥಗಳು ಖಂಡಿತವಾಗಿಯೂ ರಚನೆಯಾಗಲಾರವು. ನೌಕರಿಗೆ ಸೇರಿದನಂತರ ವೈದ್ಯರು ಮತ್ತು ಇಂಜನಿಯರ್‌ಗಳು ಬಳಸುವ ಸಂಪರ್ಕ ಮಾಧ್ಯಮ ಯಾವುದಾಗಿರುತ್ತದೆಯೋ ಅದರಲ್ಲಿಯೇ ಅವರು ತಮ್ಮ ವಿದ್ಯಾರ್ಥಿ ದಿಶೆಯಲ್ಲಿ ಶಿಕ್ಷಣ ಪಡೆಯಬೇಕಾದ್ದು ಧರ್ಮ ಹಾಗೂ ಸಹಜ. ಜ್ಞಾನಪ್ರಸಾರದ ದೃಷ್ಟಿಯಿಂದ ಸಮಾನತಾ ತತ್ತ್ವದ ದೃಷ್ಟಿಯಿಂದ ಜನತಾ ಪ್ರಜ್ಞೆಯ ವಿಕಸನದ

ನಿಮಿತ್ತವಾಗಿ ಸಂಸ್ಕೃತಿ ಸಂದರ್ಶನ ದೃಷ್ಟಿಯಿಂದ ನಾಡಿನ ಅಭ್ಯುದಯದ ದೃಷ್ಟಿಯಿಂದ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆನ್ನುವುದರಲ್ಲಿ ಕಿಂಚಿತ್ತೂ ಸಂದೇಹವಿಲ್ಲವೆಂಬುದು ದೇಜಗೌ ಅವರ ಅಭಿಮತವಾಗಿದೆ.

ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಸಾಮಾಜಿಕ ಆರ್ಥಿಕ ಕ್ರಾಂತಿಗಳಿಗೆ, ವ್ಯಕ್ತಿ ಸ್ವಾತಂತ್ರ್ಯ ಹಾಗೂ ರಾಷ್ಟ್ರಸ್ವಾತಂತ್ರ್ಯ ರಕ್ಷಣೆಗೆ ಶಿಕ್ಷಣವೇ ತಳಹದಿಯೆಂಬುದು ಪ್ರಜ್ಞಾವಂತ ಜನರಿಗೆಲ್ಲ ಗೊತ್ತು. ರಾಜ್ಯಾಂಗ ಜಾರಿಗೆ ಬಂದು ಹತ್ತು ವರ್ಷಗಳೊಳಗಾಗಿ ೧೪ ವರ್ಷಗಳೊಳಗಿನ ಎಲ್ಲ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ನೀಡತಕ್ಕದ್ದೆಂದು ರಾಜ್ಯಾಂಗದ ೪೫ನೆಯ ವಿಧಿ ಘೋಷಿಸುತ್ತದೆ. ಆದರೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ತುಂಬುತ್ತಿದ್ದರೂ ಶಿಕ್ಷಣಕ್ಕೆ ಸಂಬಂಧಿಸಿದ ಆ ವಿಧಿಯನ್ನು ಜಾರಿಗೊಳಿಸಿದೆ ರಾಜ್ಯಾಂಗವನ್ನು ಗೌರವಿಸದಿರುವ ಕಾರಣವಾಗಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಸೋತಿವೆ ಎಂದು ಹೇಳಬೇಕು. ಈ ಸೋಲಿಗೆ ಆಳುವವರ ನಿರ್ಲಕ್ಷ್ಯ, ದೂರದೃಷ್ಟಿರಾಹಿತ್ಯ ಮತ್ತು ಅದಕ್ಷತೆಗಳೇ ಕಾರಣ. ಗಾಂಧೀಜಿಯ ಅಪೇಕ್ಷೆಯಂತೆ ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸರ್ಕಾರ ಹೊತ್ತುಕೊಂಡಿದ್ದರೆ, ಈ ಹೊತ್ತಿಗಾದರೂ ೪೫ನೆಯ ವಿಧಿಯನ್ನು ಸಫಲಗೊಳಿಸಬಹುದಿತ್ತು. ವಯಸ್ಕರ ಶಿಕ್ಷಣವಂತೂ ಯಾರಿಗೂ ಬೇಡವಾದ ತಬ್ಬಲಿಕೂಸಾಗಿದೆ. ಶಿಕ್ಷಣದ ಗುಣಮಟ್ಟವನ್ನು ಕಾಪಾಡುವಲ್ಲಿ ಖಾಸಗಿ ಸಂಸ್ಥೆಗಳು ಸರ್ಕಾರಿ ಶಾಲಾ ಕಾಲೇಜುಗಳಿಗಿಂತ ಯೋಜನಾ ಮುಂದಿವೆ. ರಾಜಕಾರಣವನ್ನು ಶಿಕ್ಷಣ ಕ್ಷೇತ್ರದಿಂದ ದೂರವಿರಿಸಿ ರಾಜಕಾರಣಿಗಳ ಒತ್ತಾಯಕ್ಕೆ ಮಣಿದು ನೀತಿ ನಿಯಮಗಳಿಗನುಗುಣವಾಗಿ ಶಿಕ್ಷಣವನ್ನು ವ್ಯವಸ್ಥೆಗಳನ್ನು ಶಿಕ್ಷಣ ಗುಣಮಟ್ಟವನ್ನು ತೃಪ್ತಿಕರವಾಗಿಯೇ ಸಾಧಿಸಬಹುದಿತ್ತು. ಶಿಕ್ಷಣತಜ್ಞರಲ್ಲದವರ ಕೈಯಲ್ಲಿ ಸಿಕ್ಕಿಕೊಂಡು ನರಳುತ್ತಿರುವ ಶಿಕ್ಷಣ ವ್ಯವಸ್ಥೆ ದಿನೇ ದಿನೇ ಸೊರಗುತ್ತಿದೆ. ಅವಶ್ಯಕತೆ ಇರಲಿ ಇಲ್ಲದಿರಲಿ ಪ್ರಾಥಮಿಕ ಸೌಲಭ್ಯಗಳು ಲಭ್ಯವಿರಲಿ ಇಲ್ಲದಿರಲಿ ಸರ್ಕಾರಿ ವಲಯದಲ್ಲಾಗಲಿ ಖಾಸಗಿ ವಲಯದಲ್ಲಾಗಲಿ ಮನಸ್ಸಿಗೆ ಬಂದಂತೆ ಪೂರೈಸುವ ಶಾಲಾಕಾಲೇಜುಗಳ ಮಂಜೂರಾತಿಯಿಂದಾಗಿ ಶಿಕ್ಷಣದ ವ್ಯವಸ್ಥೆ ಹದಗೆಡುತ್ತಿದೆ. ಗುಣಮಟ್ಟ ಕುಸಿಯುತ್ತಿದೆ. ಅನಿಯಂತ್ರಿತವಾದ ಅನುದಾನವನ್ನು ಯಾವ ಖಾಸಗಿ ಸಂಸ್ಥೆಯೂ ನಿರೀಕ್ಷಿಸಕೂಡದು. ನಾಡಿನ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಖಾಸಗಿ ಜನರು ಭಾಗವಹಿಸಕೂಡದು. ಆ ಮೂಲಕ ವಿಕೇಂದ್ರೀಕರಣವನ್ನು ಸಾಧಿಸಲಾಗುತ್ತದೆಂಬ,

ಆಡಳಿತದಲ್ಲಿ ಸಾಹಸಪ್ರಿಯರೆಲ್ಲರಿಗೂ ಅನುಭವಾವಕಾಶ ದೊರೆಯಲೆಂಬ ಸರ್ಕಾರದ ಹೊರೆಯು ಕಡಿಮೆಯಾಗುತ್ತದೆಂಬ ವಿವೇಕಯುತ ಮುತ್ಸದ್ಧಿತನದ ವ್ಯವಸ್ಥೆ ಶ್ಲಾಘನೀಯವಾದದ್ದು ಎಂದು ದೇಜಗೌ ತಿಳಿಸುತ್ತಾರೆ.

ಆರ್ಥಿಕ ಚೈತನ್ಯವಿಲ್ಲದಿರುವ ಪಕ್ಷಕ್ಕೆ ಖಾಸಗಿ ಶಾಲೆಗಳಿಗೆ ಸರ್ಕಾರವೇಕೆ ಮಂಜೂರಾತಿ ನೀಡಬೇಕು. ಅನುದಾನರಹಿತ ಶಾಲೆಗಳಲ್ಲಿ ನಡೆಯುವ ಕೆಳಮಟ್ಟದ ಶಿಕ್ಷಣದಿಂದ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡುವುದಕ್ಕಿಂತ ಶಿಕ್ಷಣವನ್ನು ಕೊಡದಿರುವುದೇ ಮೇಲಲ್ಲವೇ, ಹಣದ ಕೊರತೆಯ ನೆಪವೊಡ್ಡಿ ಏನೇನೊ ಸಬೂಬು ಹೇಳುವುದರ ಬದಲು, ಸಂಪನ್ಮೂಲಗಳನ್ನು ಕೊಂಡುಕೊಳ್ಳಲು ಸರ್ಕಾರ ಪ್ರಯತ್ನಿಸಬೇಕು. ತಲೆ ಶಿರೋಭಾರವೆನ್ನುವಂತೆ ಉನ್ನತ ಹುದ್ದೆಗಳನ್ನು ಸೃಷ್ಟಿಸಬಾರದು. ಹುದ್ದೆಗಳ ಸಂಖ್ಯೆಗಳನ್ನಿಳಿಸಬೇಕು. ಸರ್ಕಾರಿ ಅಥವಾ ಅರೆಸರ್ಕಾರಿ ಹುದ್ದೆಗಳಿಗೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ಮಾತ್ರ ನೇಮಕ ಮಾಡಿಕೊಳ್ಳುವುದೆಂದು ಶಾಸನಗಳನ್ನು ರಚಿಸಿದ ನಂತರ ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸ್ಥಾಪನೆಗೆ ಮುಕ್ತ ಅವಕಾಶ ನೀಡುವುದಲ್ಲದೆ ಅವುಗಳಿಗೆ ಕೊಡುವ ಅನುದಾನವನ್ನು ನಿಲ್ಲಿಸಬೇಕು. ಅಷ್ಟೇ ಅಲ್ಲ ಇಂಗ್ಲಿಷ್ ಮಾಧ್ಯಮದ ಪ್ರತಿಯೊಬ್ಬ ವಿದ್ಯಾರ್ಥಿಯೂ ತಿಂಗಳಿಗೆ ೧೦, ೧೫ ರೂಪಾಯಿ ಶುಲ್ಕವನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಪಠ್ಯಪುಸ್ತಕಗಳ ಮೇಲೆ ಶಿಕ್ಷಣ ಶುಲ್ಕವನ್ನು ವಿಧಿಸಬೇಕು. ಅಂತೆಯೇ ಹೋಟೆಲ್, ಸಿನಿಮಾ, ದೇವಾಲಯ ಮತ್ತು ಅಬಕಾರಿ ಉದ್ದಿಮೆಗಳಿಗೂ ಶಿಕ್ಷಣ ಶುಲ್ಕ ನಿಯಮವನ್ನು ಅನ್ವಯಿಸತಕ್ಕದ್ದು. ಯಾವ ಬಾಬುಗಳಿಂದ ಇಂತಹ ಶುಲ್ಕವನ್ನು ಪಡೆಯಬೇಕೆಂದು ವಿಚಾರ ಸರ್ಕಾರಕ್ಕೆ ಬಿಟ್ಟದ್ದು ಎಂದು ದೇಜಗೌ ಹೇಳುತ್ತಾರೆ.

ಖಾಸಗಿ ಶಿಕ್ಷಣ ವ್ಯಾಪಾರೋಧ್ಯಮವಾಗುತ್ತಿದೆ ಎಂಬ ಕೂಗಿನಲ್ಲಿ ಅರ್ಥವಿಲ್ಲ, ಸರ್ಕಾರದ ಅಧಿಕಾರಿಗಳೇ ವ್ಯಾಪಾರೋದ್ಯಮಕ್ಕೆ ಶಾಮೀಲೆನ್ನುವುದು ಸರ್ಕಾರಕ್ಕೆ ಗೊತ್ತಾಗಬೇಕು. ಯಾವುದಾದರೂ ಶಾಲೆಯಲ್ಲಿ ವ್ಯಾಪಾರ ನಡೆಯುತ್ತಿದ್ದರೆ, ಮಾನ್ಯತೆಯನ್ನು ರದ್ದುಗೊಳಿಸಬೇಕು. ವಲಯದ ಅಧಿಕಾರಿಯನ್ನು ವಜಾಮಾಡಬೇಕು. ಸ್ವಾವಲಂಬಿ ವಿದ್ಯಾಸಂಸ್ಥೆಗಳು ಬೆಳೆದಷ್ಟು ಸರ್ಕಾರಕ್ಕೆ ಲಾಭ. ದೇಶಕ್ಕೆ ಕ್ಷೇಮ. ಖಾಸಗಿ ಶಾಲಾಕಾಲೇಜುಗಳ ಲೆಕ್ಕಪತ್ರಗಳನ್ನು ತಪಾಸಣೆ ಮಾಡುವ ಅಧಿಕಾರವನ್ನು ಸರ್ಕಾರ ಉಳಿಸಿಕೊಂಡರೆ ಬೇಡವೆನ್ನಬಾರದು. ಒಂದು ಶಿಕ್ಷಣ ಸಂಸ್ಥೆಯ ಪೂರ್ಣಾಭಿವೃದ್ಧಿಗೆ

ಸ್ವಾಯತ್ತತೆ ಅತ್ಯಾವಶ್ಯಕ ಎನ್ನುವುದನ್ನು ವಿವೇಕಿಗಳು ಮರೆಯಬಾರದು. ಸರ್ಕಾರವಾಗಲಿ ಅಧಿಕಾರಿಶಾಹಿಯಾಗಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಉಪಕಾರವನ್ನು ಮರೆಯಲಾಗದು ಎಂಬುದು ದೇಜಗೌ ಅವರ ಅಭಿಮತವಾಗಿದೆ.

ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ನೂತನ ದೃಷ್ಟಿಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಇಂದಿನ ಶಿಕ್ಷಣ ಪದ್ಧತಿ ಸರಿಯಿಲ್ಲ. ಅದು ನಮ್ಮ ಜಾಯಮಾನಕ್ಕೆ ಹೊಂದಿಕೊಂಡಿಲ್ಲ. ನಮ್ಮ ಪ್ರಗತಿಗೆ ಅನುಕೂಲವಾಗಿಲ್ಲ. ಇದರಿಂದ ಬುದ್ಧಿ ಚಿಗುರುವುದಿಲ್ಲ. ಹೃದಯ ಮಾಗುವುದಿಲ್ಲ. ದೇಹ ಚುರುಕಾಗುವುದಿಲ್ಲ, ಆತ್ಮವಿಕಾಸಗೊಳ್ಳುವುದಿಲ್ಲ. ಮುಕ್ತಿ ದೊರೆಯುವಂತೆಯೇ ಇಲ್ಲ ಎಂದು ಎಲ್ಲರೂ ಸಾರುತ್ತಿರುತ್ತಾರೆ. ಶಿಕ್ಷಣಶಾಸ್ತ್ರಜ್ಞನದು ಅದೇ ರಾಗ. ರಾಜಕಾರಣಿಯದು ಕೂಡ ಅದೇ ಪಲ್ಲವಿ. ಆಡಳಿತಗಾರನದೂ ಅದೇ ಸುದ್ದಿ. ಈ ರಾಗ, ಈ ಸುದ್ದಿ ಈ ಪಲ್ಲವಿ ಇಂದಿನದಲ್ಲ ಹಳೆಯದು. ಬಹಳ ಹಳೆಯದು. ಬಿಟ್ಟು ಹೋಗಿರುವ ಆಸ್ತಿ. ಅವರು ನಮ್ಮ ದೇಶವನ್ನು ಆಳುತ್ತಿದ್ದಾಗ ಅನೇಕ ಸಂಗತಿಗಳನ್ನು ನಡೆಸಿ ಹೊಸ ಪದ್ಧತಿಯನ್ನು ಜಾರಿಗೆ ತರುವುದಾಗಿ ನಟಿಸಿದ್ದರು. ಅದೆಲ್ಲ ಕೇವಲ ಭಾರತೀಯರನ್ನು ಶೋಷಿಸುವ ಮಾರ್ಗವಾಗಿತ್ತು. ಸ್ಯಾಡ್ಲರ್ ವಿಚಾರಣಾ ಸಮಿತಿ ಹಾರ್ಟೋಗ್ ಸಮಿತಿ ಹೀಗೆ ಹಲವಾರು ಸಮಿತಿಗಳನ್ನು ರಚಿಸಿದರು. ಇವುಗಳ ಜೊತೆಗೆ ಅಂದಿನ ಪ್ರಾಂತ ಸರ್ಕಾರಗಳು ನೇಮಿಸಿದ ಸಮಿತಿಗಳಿಗೆ ಲೆಕ್ಕವಿಲ್ಲ. ಇದಕ್ಕಾಗಿ ವ್ಯಯ ಮಾಡಿದ ಹಣವೆಷ್ಟೋ ಈ ಸಮಿತಿಗಳ ವರದಿಗಳಲ್ಲಿ ಹಲವಂತೂ ಕಾಗದದ ವರದಿಗಳಾಗಿಯೇ ಇಂದಿಗೂ ಉಳಿದಿವೆ.

ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಾರ್ಧಾಯೋಜನೆ ತಯಾರಾಯಿತು. ಈ ಯೋಜನೆ ಜಾರಿಗೆ ಬರಬಹುದೆಂದು ಭಾರತೀಯ ಜನತೆ ಕುತೂಹಲದಿಂದ ನೋಡಿತು. ಆದರೆ ಅದು ಜಾರಿಗೆ ಬರಲೇ ಇಲ್ಲ. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು ತನ್ನದೇ ಆದ ಜವಾಬ್ದಾರಿಯುತ ಸರ್ಕಾರ ರಚಿತವಾಗಿದ್ದರೂ, ಈ ರಾಷ್ಟ್ರೀಯ ಯೋಜನೆ ಮಾತ್ರ ಇನ್ನೂ ಕಾಗದದ ಕಟ್ಟುಗಳಲ್ಲಿ ಸುಭದ್ರವಾಗಿ ತೂಕಡಿಸುತ್ತಿದೆ. ಅನ್ನದ ಸಮಸ್ಯೆಯನ್ನು ನೀಗಲು, ದೇಶದ ಐಕ್ಯತೆಯನ್ನು ರೂಢಿಸಲು ಪ್ರಾಥಮಿಕ ವಿದ್ಯಾಭ್ಯಾಸ ಅಗತ್ಯವಾಗಿದೆ. ಉಚ್ಚಶಿಕ್ಷಣ ಬೇಡ, ಆದರೆ ಎಲ್ಲರಿಗೂ ಪ್ರಾಥಮಿಕ ವಿದ್ಯಾಭ್ಯಾಸವಾದರೂ ಲಭಿಸುವಂತೆ ಮಾಡುವುದು ಸರ್ಕಾರದ ಆದ್ಯಕರ್ತವ್ಯವಾಗಿದೆ ಎಂದು ದೇಜಗೌರವರು ಯಾವಾಗಲೂ ಹೇಳುತ್ತಿದ್ದರು.

ದೇಜಗೌರವರ ಮೂಲ ಉದ್ದೇಶ ಯಾವ ರೀತಿ ಇತ್ತೆಂದರೆ ತಾಯ್ನಾಡಿ ಬೋಧನ ಭಾಷೆಯಾಗುವುದು ಸುಲಭ. ಬಿಡಿಕಾಸು ಖರ್ಚಿಲ್ಲದೆ ಯಾವ ನಷ್ಟವೂ ಇಲ್ಲದೆ ನಿರುಪಾಯವಾಗಿ ಈ ಕ್ಷಣವೇ ಅದನ್ನು ಜಾರಿಗೆ ತರಬಹುದು, ತರಬೇಕು. ಆದರೆ ಕಸುಬುಗಳ ಶಿಕ್ಷಣವನ್ನು ಜಾರಿಗೆ ತರುವುದು ಸುಲಭವಲ್ಲ. ಮೊದಲನೆಯದು ಹಣದ ಸಮಸ್ಯೆ ಎಂಟು ಹತ್ತು ವರ್ಷಗಳ ಹುಡುಗರು ತಯಾರು ಮಾಡುವ ಸಾಮಾನುಗಳನ್ನು ಸರ್ಕಾರ ಕೊಳ್ಳುತ್ತದೆಯಲ್ಲವೇ ಸರ್ಕಾರಕ್ಕೂ ಗಿರಾಕಿ ಬೇಡವೇ ಆ ಮಾಲು ಪೋಲಾದರೆ ಮತ್ತೆ ಆ ಬಗ್ಗೆ ಸಾಲವನ್ನು ಹೊರಲು ಜನತೆ ಹೆಗಲು ಕೊಡಬೇಕಾಗುತ್ತದಲ್ಲವೇ ಎಂದು ದೇಜಗೌರವರು ಚಿಂತಿಸುತ್ತಿದ್ದರು. ಅವರ ಚಿಂತನಾಕ್ರಮವೇ ಬೇರೆ ಇತ್ತು. ಅದೂ ಇರಲಿ ದಿನಕ್ಕೆ ಮೂರೂವರೆ ಗಂಟೆಗಳ ಕಾಲ ಮಕ್ಕಳು ಕೆಲಸ ಮಾಡುವುದು ಸಾಧ್ಯವೇ? ಹತ್ತಿ ಬಿಡಿಸಬಹುದು, ನೂಲಬಹುದು, ನೇಯಬಹುದು ಆದರೆ ಉಳುಮೆ ಇತ್ಯಾದಿ ಕೆಲಸಕ್ಕೆ ಸಂಬಂಧಿಸಿದ ಕೆಲಸಗಳು ಎಳೆಯ ಮಕ್ಕಳಿಂದ ಸಾಧ್ಯವೇ ಎಂದು ದೇಜಗೌ ಚಿಂತಿಸುತ್ತಾರೆ.

ಕೆಲಸ ಮಾಡಿ ಮಾಡಿ ಜಡ್ಡುಗಟ್ಟಿದ ಕರ್ಕಶ ಶರೀರದಿಂದ ಮಾತ್ರ ಆ ಕೆಲಸ ಸಾಧ್ಯ. ಮೇಕೆಯ ಹಾಲು ಕುಡಿಯದವನು ಅದು ಸುಲಭ, ಇದು ಸುಲಭ ಎಂದು ಹೇಳಬಹುದು. ಕಛೇರಿಯಲ್ಲಿ ಕುಳಿತು ಬಿಳಿಯ ಕಾಗದದ ಮೇಲೆ ಕರಿಯ ಮಸಿ ಹಚ್ಚಬಹುದು. ನೇಗಿಲ ಮೇಲೆ ಕೈ ಇಟ್ಟು ಹಾರೆ ಗುದ್ದಲಿ ಹಿಡಿದವರು ಈ ಅಂಶವನ್ನು ಸುಲಭವಾಗಿ ಒಪ್ಪಿಕೊಳ್ಳಲಾರರು. ಅಷ್ಟೇ ಅಲ್ಲ, ಎಲ್ಲ ಕಸುಬುಗಳಲ್ಲಿಯೂ ಎಲ್ಲ ನೆಲಗಳಲ್ಲಿಯೂ ಒಂದೇ ತರದ ಉತ್ಪತ್ತಿ ಬರುತ್ತದೇನು ಎಂದು ಚಿಂತಿಸುತ್ತಿದ್ದರು ದೇಜಗೌರವರು. ಇನ್ನು ಮುಂದಕ್ಕೆ ದೇಜಗೌರವರು ಯೋಚಿಸುತ್ತಾ ನಮ್ಮಂಥ ವಿದ್ಯಾವಂತರಲ್ಲಿಯೇ ನೈತಿಕ ಮಟ್ಟದವರಿಲ್ಲ ಸಾರ್ವಜನಿಕ ವಸ್ತುವಿಗೂ ಸ್ವಂತ ವಸ್ತುವಿಗೂ ಅಭೇದ ಕಲ್ಪಿಸಿದವರು ನಾವಲ್ಲವೇ. ಆದುದರಿಂದ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೆ ತರುವ ಮೊದಲು ಈ ಹೊರಗು ಒಳಗುಗಳನ್ನು ಕೂಲಂಕಷವಾಗಿ ವಿವೇಚಿಸಬೇಕಾಗುತ್ತದೆ ಎಂದು ದೇಜಗೌರವರು ಹೇಳುತ್ತಾರೆ.

ಹಳೆಯ ವ್ಯವಸ್ಥೆಯನ್ನು ಪೂರ್ತಿಯಾಗಿ ತುಚ್ಛವೆಂದು ಪರಿಗಣಿಸದೆ ಆ ಚೌಕಟ್ಟಿನಲ್ಲಿಯೇ ಈ ಯೋಜನೆಯನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಹಳ್ಳಿಯ ಪ್ರತಿಯೊಬ್ಬ ಹುಡುಗನೂ ಸಾಮಾನ್ಯವಾಗಿ ತನ್ನ ತಂದೆಯ ವೃತ್ತಿಯನ್ನು ತಕ್ಕಮಟ್ಟಿಗಾದರೂ ಅರಿತುಕೊಂಡಿರುತ್ತಾನೆ. ಅರಿತುಕೊಳ್ಳುವುದು ಸುಲಭ. ಮಕ್ಕಳ ಮೊದಲ ಪಾಠಶಾಲೆ ಮನೆ,

ಆದುದರಿಂದ ತಂದೆಯ ವೃತ್ತಿಯ ಅನುಭವ ಮಗನಿಗೆ ಸಹಜವಾಗಿಯೇ ಒದಗಿರುತ್ತದೆ. ಉದಾಹರಣೆಗೆ ಯಾವುದೇ ಒಬ್ಬ ರೈತನ ಎಂಟು ವರ್ಷದ ಹುಡುಗನಿಗೆ ಯಾರೂ ಹೇಳಿಕೊಡದೆಯೇ ವ್ಯವಸಾಯದ ಹಲವು ವಿಷಯಗಳು ಗೊತ್ತಿರುತ್ತವೆ. ಉಪಕರಣಗಳ ಹೆಸರುಗಳೂ ತಿಳಿದಿರುತ್ತವೆ. ಆದರೆ ಹುಡುಗ ಅವುಗಳನ್ನು ಶಾಸ್ತ್ರೀಯವಾದ ರೀತಿಯಲ್ಲಿ ಅರಿತುಕೊಂಡಿರುವುದಿಲ್ಲ. ಹಾಗೆಯೇ ಪ್ರಾಥಮಿಕ ಶಿಕ್ಷಣದ ಏಳು ವರ್ಷಗಳ ಅವಧಿಯನ್ನು ನಾಲ್ಕು ವರ್ಷಗಳಿಗೆ ಸದ್ಯಕ್ಕೆ ನಿಲ್ಲಿಸಿಕೊಳ್ಳಬಹುದು. ಈ ನಾಲ್ಕು ವರ್ಷಗಳ ನಂತರ ಕಲಿತ ಕಲೆ ಮರೆಯದಂತೆ ಮುಂದುವರಿದ ಶಿಕ್ಷಣವನ್ನು ಏರ್ಪಡಿಸಬಹುದು. ನಾಲ್ಕು ವರ್ಷದ ನಂತರ ಅವರು ಹಗಲು ವೇಳೆ ಶಾಲೆಗೆ ಬರಬೇಕಾಗಿಲ್ಲ. ಮುಂದುವರಿದ ಶಿಕ್ಷಣಕ್ಕಾಗಿ ರಾತ್ರಿಯ ವೇಳೆ ಶಾಲೆಯನ್ನು ನಡೆಸಬಹುದು. ಸಮಾಜ ವಿಜ್ಞಾನ, ಗ್ರಾಮಾಡಳಿತ, ವೃತ್ತ ಪತ್ರಿಕೆಗಳನ್ನು ಓದಿ ಇತ್ಯಾದಿ ವಿಷಯಗಳನ್ನು ಆ ಒಂದು ವರ್ಷದ ಕಾಲ ಕಲಿಸಿದರೆ ಸಾಕು. ಈಗ ಕೊಡುತ್ತಿರುವ ದಸರೆ, ಕ್ರಿಸ್‌ಮಸ್, ಬೇಸಿಗೆ ರಜಾ ದಿನಗಳನ್ನು ರೈತನ ಅನುಕೂಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಹುದು.ಕಳೆ, ನಾಟಿ, ಸುಗ್ಗಿಯ ಕಾಲದಲ್ಲಿ ಈ ರಜಾ ದಿನಗಳು ಬರುವಂತೆ ಏರ್ಪಾಡು ಮಾಡಬಹುದು ಎಂದು ದೇಜಗೌ ಹೇಳುತ್ತಾರೆ. ಜತೆಗೆ ಈ ಕೆಳಕಂಡ ಸಲಹೆಗಳನ್ನು ನೀಡುತ್ತಾರೆ.

೧. ಸಾಮಾನ್ಯವಾಗಿ ಪ್ರೈಮರಿ ಶಾಲೆಗಳ ಉಪಾಧ್ಯಾಯರು ಹಳ್ಳಿಯವರಾದುದರಿಮದ ಅವರಿಗೆ ವ್ಯವಸಾಯವೇ ಮೊದಲಾದ ಕಸುಬುಗಳು ಗೊತ್ತಿರುತ್ತವೆ.

೨. ಉಪಾಧ್ಯಾಯರು ಅವುಗಳ ಶಾಸ್ತ್ರೀಯವಾದ ಜ್ಞಾನ, ಅವುಗಳನ್ನು ನೂತನ ಪಾಠಪಟ್ಟಿಯಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ಕಲಿಸಿದರೆ ಸಾಕು.

೩. ವಿದ್ಯಾಭ್ಯಾಸದ ಇಲಾಖೆ ಮತ್ತು ವಿಶ್ವವಿದ್ಯಾನಿಲಯ ಈ ಎರಡು ಸಂಸ್ಥೆಗಳು ಸೇರಿ ಒಂದು ಪ್ರಯೋಗಶಾಲೆಯನ್ನು ಸ್ಥಾಪಿಸಿ ನೂತನ ಸಂಶೋಧನೆಗಳಿಗೆ ಅವಕಾಶವನ್ನು ಕಲ್ಪಿಸಬಹುದು.

೪. ಮಾಸಪತ್ರಿಕೆಯೊಂದನ್ನು ಪ್ರಕಟಿಸಿ ಅದರ ಮೂಲಕ ನೂತನ ಸುಧಾರಣೆ ಸಂಶೋಧನೆಗಳ ಅರಿವು ಹಳ್ಳಿಯ ಪ್ರತಿಯೊಬ್ಬ ಉಪಾಧ್ಯಾಯನಿಗೂ ಲಭಿಸುವಂತೆ ಏರ್ಪಾಡು ಮಾಡಬೇಕು.

ಶ್ರೀಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇಜಗೌ ಅವರ ಪಾಶ್ಚಾತ್ಯ ಶಿಕ್ಷಣಪದ್ಧತಿಯಿಂದ ಹಳ್ಳಿಗಳಿಂದ ಕೂಡಿದ ಭಾರತ ದೇಶಕ್ಕೆ ಯಾವುದೇ ರೀತಿಯ ಪ್ರಯೋಜನವಿಲ್ಲ ಎನ್ನುತ್ತಾರೆ. ದೇಶೀಯ ಶಿಕ್ಷಣ ಪದ್ಧತಿಯನ್ನು ಅನುಸರಿಸಿದ್ದಾದರೆ ದೇಶ ಇಂದು ಶಿಕ್ಷಣರಂಗದಲ್ಲಿ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಂದು ಹೇಳುತ್ತಾರೆ.

131609

ಶಾಲಾಕಾಲೇಜುಗಳನ್ನು ಸ್ಥಾಪಿಸುವ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕೆಂಬ ಅವು ವ್ಯಾಪಾರ ಸಂಸ್ಥೆಗಳಾಗದಂತೆ ಎಚ್ಚರವಹಿಸಬೇಕೆಂಬ ನೀತಿ ಸೂತ್ರ ಅಂಗೀಕಾರಾರ್ಹವಾಗಿದೆ. ಈಗ ಅಸ್ತಿತ್ವದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಭಾರವನ್ನು ಸರ್ಕಾರವೇ ವಹಿಸಿಕೊಂಡಿದ್ದಲ್ಲಿ ಈಗಿನ ಎರಡು–ಮೂರುರಷ್ಟು ಹಣವನ್ನು ಅದು ಖರ್ಚುಮಾಡಬೇಕಿತ್ತು. ಸೈನ್ಯಕ್ಕೆ, ನೀರಾವರಿ ಯೋಗನೆಗಳಿಗೆ, ವಸತಿ ಸೌಲಭ್ಯಗಳಿಗೆ ಹಣ ಸಾಲದಿರುವಾಗ ಶಿಕ್ಷಣಕ್ಕೆ ಹೆಚ್ಚು ಹಣ ಎಲ್ಲಿಂದ ಬರಬೇಕು? ಅದಕ್ಕಾಗಿಯೇ ಗಾಂಧೀಜಿ ಹೇಳಿದ್ದು, ಎಸ್ಸೆಸ್ಸೆಲ್ಸಿಯವರೆಗಿನ ಶಿಕ್ಷಣದ ಹೊಣೆ ಸರ್ಕಾರಕ್ಕೆ ಸೇರಿದ್ದು, ಉಳಿದದ್ದು, ಸಮಾಜ ಹೊರಬೇಕಾದ್ದು ಎಂದೂ. ಅಂದರೆ ಉಚ್ಚಶಿಕ್ಷಣ ಬೇಕಾದವರು ಅದಕ್ಕೆ ತಗಲುವ ವೆಚ್ಚವನ್ನು ಸಂಪೂರ್ಣವಾಗಿ ಭರಿಸಬೇಕು. ತಮ್ಮ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಮುಂದುವರಿದ ಜನ ತಾವೇ ತುಂಬಬೇಕು. ತಮ್ಮ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಮುಂದುವರಿದ ಜನ ತಾವೇ ತುಂಬಬೇಕು. ಹಿಂದುಳಿದವರ ಶಿಕ್ಷಣದ ಭಾರವನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದ್ದಾರೆ. ಖಾಸಗಿ ಸಂಸ್ಥೆಗಳು ಶಿಕ್ಷಣಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಸರ್ಕಾರ ಒಪ್ಪಿಕೊಂಡಿರುವಂಥದ್ದು ಸಂತೋಷದ ಸಂಗತಿ. ಖಾಸಗಿ ವಲಯದಲ್ಲಿರುವ ಅನೇಕ ಶಾಲಾ ಕಾಲೇಜುಗಳು ಸರ್ಕಾರೀ ಕ್ಷೇತ್ರದ ಶಿಕ್ಷಣ ಸಂಸ್ಥೆಗಳಿಗಿಂತ ಉತ್ತಮವಾಗಿವೆಯೆಂಬುದನ್ನು ಮರೆಯುವಂತಿಲ್ಲ. ರಾಜಕೀಯದ ಒತ್ತಡಕ್ಕೋಸ್ಕರ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ, ಅವುಗಳಿಗೆ ಕನಿಷ್ಟ ಸೌಲಭ್ಯಗಳನ್ನು ಸಹ ಒದಗಿಸದಿರುವುದು ಶೋಚನೀಯ ಸಂಗತಿ. ಅಂಥ ಅವ್ಯವಸ್ಥೆಯನ್ನು ಮುಂದುವರಿಸುವ ಬದಲಾಗಿ ತನ್ನ ಆರ್ಥಿಕ ಶಕ್ತಿ ಭರಿಸಬಹುದಾದಷ್ಟೇ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರ ಆದರ್ಶರೀತಿಯಲ್ಲಿ ನಡೆಸಿ ಉಳಿದ ಭಾರವನ್ನು ಖಾಸಗಿ ಸಂಸ್ಥೆಗಳಿಗೆ ವಹಿಸುವುದೇ ಸರ್ವಶ್ರೇಷ್ಠವಾದ ಮಾರ್ಗ, ದೇಶಾಭ್ಯುದಯ ಸಾಧನೆಯಲ್ಲಿ ಖಾಸಗಿ ವ್ಯಕ್ತಿಗಳು ಭಾಗವಹಿಸಬೇಕಾದ್ದು ಭಾಗವಹಿಸುವಂತೆ ಸರ್ಕಾರ ಉತ್ತೇಜನ ನೀಡಬೇಕಾದ್ದು ಪ್ರಜಾಪ್ರಭುತ್ವದ ಲಕ್ಷಣ.

ದ್ವೇಷಾಸೂಯೆಯಿಂದ ಕ್ಯಾಪಿಟೇಷನ್ ಪದ್ಧತಿಯನ್ನು ವಿರೋಧಿಸುವ ಜನ ಸರ್ಕಾರವನ್ನು ತಪ್ಪು ದಾರಿಗೆಳೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹಣವುಳ್ಳವರಿಗೆ ಮಾತ್ರ ಆ ಪದ್ಧತಿ ಪ್ರಯೋಜನವಾಗುತ್ತಿದೆಯೆಂಬುದು ಅವರ ವಾದ. ಅವರೂ ಭಾರತೀಯ ಪ್ರಜೆಯಲ್ಲವೇ? ತಮಗೆ ಬೇಕಾದ ಶಿಕ್ಷಣವನ್ನು ಪಡೆಯುವ ಹಕ್ಕು ಅವರಿಗಿಲ್ಲವೇ? ತಮ್ಮ ಶಿಕ್ಷಣದ ಭಾರವನ್ನು ತಾವೇ ಭರಿಸಿಕೊಳ್ಳುವಾಗ ಇತರರಿಗೇಕೆ ಹೊಟ್ಟೆಕಿಚ್ಚು? ಶೇಕಡ ತೊಂಬತ್ತು ಅಂಕ ಬಂದವನಿಗೆ ಪ್ರವೇಶ ದೊರೆತು, ಎಂಭತ್ತು ಬಂದವನಿಗೆ ದೊರೆಯದಿದ್ದರೆ ಅನ್ಯಾಯವಾಗುವುದಿಲ್ಲವೇ? ವಿಶ್ವವಿದ್ಯಾನಿಲಯಗಳು ಕನಿಷ್ಠ ಪ್ರವೇಶಾಂಗವನ್ನು ಗೊತ್ತು ಮಾಡುವುದಷ್ಟೇ. ಸರ್ಕಾರ ಸಮಾಜಗಳೆರಡೂ ಶ್ರೀಮಂತರನ್ನು ಸಹಿಸಿಕೊಂಡಿಲ್ಲವೇ? ಅವರನ್ನು ಮಾನ್ಯ ಮಾಡಿಲ್ಲವೇ? ಅವರಲ್ಲಿ ಸಂಗ್ರಹಗೊಂಡಿರುವ ದ್ರವ್ಯವನ್ನು ಸೆಳೆದುಕೊಳ್ಳಲು ಇದೊಂದು ಮಾರ್ಗವಲ್ಲವೇ? ಖಾಸಗಿ ಸಂಸ್ಥೆಗಳು ಶ್ರೀಮಂತರಿಗಾಗಿಯೇ ಇವೆಯೆಂದು ಇಟ್ಟುಕೊಳ್ಳೋಣ. ಹಿಂದುಳಿದವರಿಗಾಗಿ ಮತ್ತು ಉತ್ತಮ ದರ್ಜೆಯವರಿಗಾಗಿ ಸರ್ಕಾರ ಕಾಲೇಜುಗಳನ್ನು ನಡೆಸಿದರೆ ಬೇಡವೆನ್ನುವವರಾರು? ಆರ್ಥಿಕವಾಗಿ ಹಿಂದುಳಿದಿದ್ದು, ಉಚ್ಚಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ಸರ್ಕಾರ ವಿದ್ಯಾರ್ಥಿವೇತನ ಅಥವಾ ಸಾಲದ ರೂಪದಲ್ಲಿ ಧನ ಸಹಾಯ ಮಾಡಿ, ಅನಿವಾರ್ಯವಾದಾಗ ಅವರು ಖಾಸಗಿ ಸಂಸ್ಥೆಗಳಿಗೆ ಸೇರುವಂತೆ ಅವಕಾಶವನ್ನು ಕಲ್ಪಿಸಬಾರದೇಕೆ? ಕ್ಯಾಪಿಟೇಷನ್ ಶುಲ್ಕ ದೂಷ್ಯವಲ್ಲವೆಂದು ನೂತನ ಶಿಕ್ಷಣ ನೀತಿಯಲ್ಲಿ ಶ್ರುತಪಡಿಸಿರುವ ವಿಚಾರ ಮೆಚ್ಚಬೇಕಾದ್ದೇ. ಖಾಸಗಿ ಕಾಲೇಜುಗಳು ವ್ಯಾಪಾರೀ ಸಂಸ್ಥೆಗಳಾಗದಂತೆ ಅವುಗಳ ಲೆಕ್ಕ ಪತ್ರಗಳ ಮೇಲೆ ಸರ್ಕಾರ ಕಣ್ಣಿಟ್ಟಿರಬೇಕಾದ್ದು ಅತ್ಯಂತ ಅವಶ್ಯಕವಾಗಿದೆ ಎಂದು ದೇಜಗೌ ಮನಗಂಡಿದ್ದಾರೆ.

ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡಬೇಕಾದ್ದು ಸುಸಂಸ್ಕೃತ ಸರ್ಕಾರದ ಆದ್ಯಕರ್ತವ್ಯ ಭಾಷೆ ಮತ್ತು ಮತಗಳಿಗೆ ಮಾತ್ರವೇ ಸೀಮಿತವಾಗಿದ್ದ ಅಲ್ಪಸಂಖ್ಯಾತರ ಕಲ್ಪನೆಯನ್ನು ಈಚೆಗೆ ಜಾತಿಗಳಿಗೂ ಅನ್ವಯಿಸುವಂತೆ ಕಾಣುತ್ತಿದೆ. ಅಲ್ಪಸಂಖ್ಯಾತರು ಯಾರೆಂದು ನಿರ್ಣಯಿಸುವುದು ಕಷ್ಟವಾಗಿದೆ. ವಾಸ್ತವವಾಗಿ ಅನೇಕ ಪ್ರತ್ಯೇಕ ಜಾತಿಗಳಿಂದ ಕೂಡಿರುವ ಹಿಂದೂ ಮತೀಯರೂ ಮುಸ್ಲಿಮರಿಗಿಂತ ಅಲ್ಪಸಂಖ್ಯಾತರೆಂದು ತಿಳಿಯಬೇಕಾಗುತ್ತದೆ. ಬ್ರಾಹ್ಮಣ ವರ್ಗಕ್ಕೆ ಸೇರುವ ಸಾರಸ್ವತರನ್ನು ಭಾಷೆಯ ಆಧಾರದ ಮೇಲೆ ಅಲ್ಪ

ಸಂಖ್ಯಾತರಾಗುವುದಾದರೆ ಕರ್ನಾಟಕದಲ್ಲಿರುವ ತಮಿಳು ಬ್ರಾಹ್ಮಣರೂ ಅಲ್ಪಸಂಖ್ಯಾತರಾಗುತ್ತಾರೆ. ಭಾರತದ ಅಖಂಡತೆಯನ್ನು ಮಾನ್ಯಮಾಡುವುದಾದರೆ, ೧೨ ಕೋಟಿ ಮುಸ್ಲಿಮರು ಅಲ್ಪಸಂಖ್ಯಾತರಾಗಲಾರರು. ಎಪ್ಪತ್ತು ಲಕ್ಷ ವೀರಶೈವರು ಬಹುಸಂಖ್ಯಾತರಾಗಲಾರರು ಬೇರೊಂದು ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಮಾರ್ವಾಡಿಗಳು ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗುತ್ತಾರೆಯೇ? ಅವೈಜ್ಞಾನಿಕವಾದ ಈ ವರ್ಗೀಕರಣವನ್ನೊಪ್ಪಿಕೊಂಡರೂ ಅವರಿಗೆ ನೀಡುತ್ತಿರುವ ಸೌಲಭ್ಯಗಳು ವಿಚಾರಮತಿಗೆ ಒಪ್ಪಿಗೆಯಾಗುವಂತಿಲ್ಲವೆಂದೇ ಹೇಳಬೇಕು. ತಂತಮ್ಮ ಭಾಷೆ, ಮತ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಸಲುವಾಗಿ ಅಲ್ಪಸಂಖ್ಯಾತರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸತಕ್ಕದೆಂದು ರಾಜ್ಯಾಂಗ ಹೇಳುತ್ತದೆ.

ಮುಸ್ಲಿಮರಿಗಾಗಿಯೇ ಮುಸ್ಲಿಮರು, ಕ್ರಿಶ್ಚಿಯನ್ನರಿಗಾಗಿಯೇ ಕ್ರಿಶ್ಚಿಯನ್ನರು, ಕೊಂಕಣಿಗಳಿಗಾಗಿಯೇ ಕೊಂಕಣಿಗಳು ಶಾಲಾ ಕಾಲೇಜುಗಳನ್ನು ಸ್ಥಾಪಿಸಿಕೊಳ್ಳುವುದಾದರೆ ಯಾರದೂ ಅಭ್ಯಂತರವಿರಲಾರದು. ತಮ್ಮವರನ್ನು ಬಿಟ್ಟು ಬೇರೆಯವರಿಗಾಗಿ ಯಾವುದೋ ಮತೀಯರು ಕಾಲೇಜನ್ನು ತೆರೆದಾಗ ಅದು ಅಲ್ಪಸಂಖ್ಯಾತರ ಸಂಸ್ಥೆಯಾಗಲಾರದು. ಉದಾಹರಣೆಗೆ ಮೈಸೂರಲ್ಲೊಂದು ಕ್ರಿಶ್ಚಿಯನ್ ಕಾಲೇಜಿದೆಯೆಂದು ಇಟ್ಟುಕೊಳ್ಳೋಣ, ಅಲ್ಲಿಯ ಎರಡು ಸಾವಿರ ವಿದ್ಯಾರ್ಥಿಗಳಲ್ಲಿ ಇಪ್ಪತ್ತಕ್ಕಿಂತ ಹೆಚ್ಚಾಗಿ ಕ್ರಿಶ್ಚಿಯನ್ ಮಕ್ಕಳಿಲ್ಲದಿರುವಾಗ ಅದನ್ನು ಅಲ್ಪಸಂಖ್ಯಾತರ ಕಾಲೇಜೆಂದು ಘೋಷಿಸಿ, ಅದಕ್ಕೆ ಸರ್ವ ಸೌಲಭ್ಯಗಳನ್ನು ನೀಡುವುದು ಅವಿವೇಕದ ಸಂಗತಿ. ಇದರಿಂದ ಮತೀಯ ವೈಷಮ್ಯ ತೀವ್ರವಾಗುವುದಾದರೆ ಸೋಜಿಗವಾಗದು. ಕಾಲೇಜು ನಡೆಸಲು ಕ್ರಿಶ್ಚಿಯನ್ನರಿಗೆ ಅನುಮತಿ ನೀಡಬಾರದೆಂಬುದು ಈ ಮಾತಿನ ಅರ್ಥವಲ್ಲ. ತಾವು ಅಲ್ಪಸಂಖ್ಯಾತರೆಂದು ಅಬ್ಬರಿಸದೆ, ಅಸಮಾನ ಕೃತ್ರಿಯ ಅಧಿಕಾರವನ್ನು ಚಲಾಯಿಸದೆ, ಇತರರಂತೆಯೇ ಕಾನೂನಿಗೊಳಪಟ್ಟು ಸಂಸ್ಥೆಗಳನ್ನು ನಡೆಸುವುದಾದರೆ ಸರ್ವರಿಗೂ ಒಳಿತಾದೀತು.

ದಿನೇ ದಿನೇ ಮೌಲ್ಯಗಳು ಆಲಾಗುತ್ತಿರುವುದನ್ನು ಕಂಡ ದೇಜಗೌರವರು ಅದರಿಂದಾಗಿ ಸಾರ್ವಜನಿಕ ಜೀವನ ಮಲಿನಗೊಳ್ಳುತ್ತಿದೆಯೆಂದು ಭಾವಿಸಿ, ಜಾತೀಯತೆ, ಮತಾಂಧತೆ, ಹಿಂಸೆ, ಮೌಢ್ಯ, ಮೊದಲಾದ ಅಸುರೀ ಪ್ರವೃತ್ತಿಗಳನ್ನು ತಡೆಗಟ್ಟುವ ಸಲುವಾಗಿ ಮೌಲ್ಯಾಧಾರಿತ ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ಭರವಸೆಯನ್ನು ನೂತನ ಶಿಕ್ಷಣ ನೀತಿಯ ವಿಚಾರವನ್ನು

ನೋಡಿದಾಗ ಹಲವಾರು ವಿಚಾರಗಳು ನಮಗೆ ತಿಳಿಯುತ್ತವೆ. ಆ ಭರವಸೆ ಮೂರ್ತ ಸ್ವರೂಪವನ್ನು ತಳೆಯಬೇಕಾದರೆ, ಮೊದಲು ಶಿಕ್ಷಣ ಸಂಸ್ಥೆಗಳು ರಾಜಕೀಯದಿಂದ ಮುಕ್ತಗೊಳ್ಳಬೇಕು. ಮತೀಯತೆ ಜಾತೀಯತೆಗಳಿಂದ ಪಾರಾಗಬೇಕು. ಭರತಖಂಡದಂಥ ಮಿಶ್ರಸಂಸ್ಕೃತಿಯ ರಾಷ್ಟ್ರದಲ್ಲಿ ರಾಷ್ಟ್ರಗೀತೆ, ರಾಷ್ಟ್ರಧ್ವಜಗಳಿಗೆ ಗೌರವ ಸಲ್ಲಿಸಬೇಕಾದ್ದು ಪ್ರತಿಯೊಬ್ಬ ಭಾರತೀಯನ ಪ್ರಥಮ ಧರ್ಮ, ಶಿಕ್ಷಣದ ಮೂಲಕ ಸೆಕ್ಯುಲರಿಸಮ್, ಸಮಾಜವಾದ, ವೈಚಾರಿಕತೆ, ಪ್ರಜಾಪ್ರಭುತ್ವ, ವಿಶ್ವಮಾನತ್ವ, ಭಾರತ ದರ್ಶನಗಳು ಯುವಕರಲ್ಲಿ ಮೂಡುವಂಥ ಏರ್ಪಾಡು ಅತ್ಯವಶ್ಯಕವೆಂಬುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ರಾಷ್ಟ್ರೀಯ ನೀತಿಯನ್ನು ರೂಪಿಸಿ, ಅದರ ಅನುಷ್ಠಾನವನ್ನು ಸಂಪೂರ್ಣವಾಗಿ ರಾಜ್ಯಸರ್ಕಾರಗಳಿಗೆ ವಹಿಸಿ, ಕೇವಲ ಮಾರ್ಗದರ್ಶಿಯಾಗುವುದು ಮೇಲು ತನಗೆ ಸಂಬಂಧಿಸಿದ ರಾಜ್ಯದ ಒಳವ್ಯವಹಾರಗಳಿಗೆ ತಲೆ ಹಾಕಿದಾಗಲೇ ಸಂಘರ್ಷ ಸಮನಿಸುತ್ತದೆ. ಸಂಘರ್ಷ ಛಿದ್ರತೆಗೆ ದಾರಿಯಾಗುತ್ತದೆ. ರಾಷ್ಟ್ರದ ಏಕತೆಯನ್ನುಳಿಸಿಕೊಂಡು ಅನ್ಯಕ್ರಮಣಕ್ಕೆ ಅವಕಾಶವಾಗದಂತೆ ಸದಾ ಜಾಗರೂಕವಾಗಿರಬೇಕಾದ್ದು ಕೇಂದ್ರ ಸರ್ಕಾರದ ಆದ್ಯಕರ್ತವ್ಯ, ಹಳ್ಳಿ ಮತ್ತು ಪಟ್ಟಣಗಳ ನಡುವಣ ಎಡೆ ಇಲ್ಲವಾದಾಗಲೇ ದೇಶದ ಅಭ್ಯುದಯವೆಂಬುದನ್ನು ಕೇಂದ್ರ ಅರಿಯುವಂತಾಗಬೇಕು. ಶಿಕ್ಷಣ ಸಂಸ್ಥೆಗಳ ಮೂಲಕವೇ ಈ ಆದರ್ಶಗಳೆಲ್ಲ ವಾಸ್ತವೀಕರಣಗೊಳ್ಳಬೇಕಾಗಿದೆ. ಶಿಕ್ಷಣ ಸಂಸ್ಥೆಗಳ ಆಧಾರಸ್ತಂಭವೆಂದರೆ ಅಧ್ಯಾಪಕ, ಶಿಕ್ಷಕನೂ ಒಬ್ಬ ತಪಸ್ವಿ ನಿರಂತರ ತಪಸ್ಸು ಅಧ್ಯಯನ ಸಂಶೋಧನೆಗಳಿಂದಲ್ಲದೆ, ತಾನು ಕಲಿಸುವ ಸಂಸ್ಥೆಗೆ ತನ್ನನ್ನು ಸಮರ್ಪಿಸಿಕೊಳ್ಳಲಾಗದಿದ್ದರೆ, ಅವನು ವಿಶ್ವಮಾನವನಾಗಿ ತನ್ನ ವಿದ್ಯಾರ್ಥಿಗಳನ್ನು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸದಿದ್ದರೆ ನೀತಿ ಸಂಹಿತೆಯ ಘೋಷಣೆಯಿಂದಲೇ ಶಿಕ್ಷಣ ಕ್ಷೇತ್ರ ಸುಧಾರಿಸುತ್ತದೆಂದು ತಿಳಿಯಬಾರದು. ನೀತಿ ಸಂಪನ್ನರೂ ಜ್ಞಾನ ಶ್ರೀಮಂತರೂ ಶ್ರದ್ಧಾಯುಕ್ತರೂ ರಾಜಕೀಯದೂರರೂ ಆದ ಶುದ್ಧ ಹೃದಯದ ಶಿಕ್ಷಕರನ್ನು ಶಿಕ್ಷಣ ಸಂಸ್ಥೆಗಳಿಗೆ ನೇಮಿಸಿದಾಗಲೇ ಶಿಕ್ಷಣ ಕ್ಷೇತ್ರ ಹಸನಾಗಿ, ನಾಡಿಗೆ ಕಾಮಧೇನುವಾಗುತ್ತದೆಂದು ಭಾವಿಸಬಹುದಾಗಿದೆ ಎಂದು ದೇಜಗೌ ಸ್ಪಷ್ಟ ಮಾತುಗಳಲ್ಲಿ ಹೇಳುತ್ತಾರೆ.

ದೇಜಗೌರವರು ಬಡತನದಲ್ಲಿ ಹುಟ್ಟಿ ಬೆಳೆದಿದ್ದರಿಂದ ಶಿಕ್ಷಣದ ಸೌಲಭ್ಯವನ್ನು ಹಳ್ಳಿಯ ಬಡಮಕ್ಕಳಿಗೆ ಸುಲಭವಾಗಿ ಸಿಗುವ ಉದ್ದೇಶದಿಂದ ಶಾಲೆಗಳನ್ನು ತೆರೆದರು ಈ

ಸಂದರ್ಭದಲ್ಲಿಯೇ ದೇಜಗೌರವರು ಕುವೆಂಪು ಸಾಹಿತ್ಯ ಪ್ರಸಾರ ಮತ್ತು ಕನ್ನಡ ಸಂಶೋಧನೆ ಎರಡೇ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಮುಖ್ಯಗುರಿಗಳು. ಕುವೆಂಪು ಸಂದೇಶ ಪ್ರಸಾರಕ್ಕೆ ಪ್ರೌಢಶಾಲೆಗಳು ಸೂಕ್ತ ಮಾಧ್ಯಮಗಳಾಗಬಹು ದೆಂಬುದು ನನ್ನ ಆಗಿನ ಭ್ರಮೆ. ಎರಡು ಮೂರು ಭಾಗಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವ ಉದ್ದೇಶದಿಂದ, ಶ್ರೀಮಾನ್, ಬಿ.ಎನ್.ಕೆಂಗೇಗೌಡರು ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾಗಿದ್ದ ಸಮಯದಲ್ಲಿ ನಿವೇಶನಗಳನ್ನು ಪಡೆದುಕೊಂಡರು. ಮೊದಲ ಶಾಲೆಯನ್ನು ೧೯೭೫ರಲ್ಲಿ ಬೃಂದಾವನ ಬಡಾವಣೆಯಲ್ಲಿ ಸ್ಥಾಪಿಸಿದರು. ಸರ್ಕಾರದಿಂದ ಅನುದಾನ ಬರುತ್ತಿರಲಿಲ್ಲ. ಸಂಬಳ ಬಹಳ ಕಡಿಮೆ ಆದ್ದರಿಂದ ಒಳ್ಳೆಯ ಉಪಾಧ್ಯಾಯರು ಸಿಗುತ್ತಿರಲಿಲ್ಲವಾದ್ದರಿಂದ ಸಿಕ್ಕಿದವರನ್ನೇ ತಿದ್ದಿಕೊಳ್ಳುವುದೆಂದು ಯೋಚಿಸಿ ತೆಗೆದುಕೊಂಡಿರುವುದನ್ನು ಗಮನಿಸಬಹುದು. ಮೂರು ವರ್ಷಗಳ ನಂತರ ಸರ್ಕಾರದ ಅನುದಾನ ಬಂದಾಗ ಅವರಿಗೆ ಕೈತುಂಬ ಸಂಬಳ ದೊರೆತು ನೆಮ್ಮದಿಯನ್ನು ಕಂಡರು.

ಉಪಾಧ್ಯಾಯರು ದೇಜಗೌರವರನ್ನು ಭೇಟಿ ಮಾಡಿದಾಗಲೆಲ್ಲಾ ಅಥವಾ ವರ್ಷಕ್ಕೊಂದೆರಡು ಸಲ ಅವರ ಸಭೆ ಕರೆದು ಹೇಳುತ್ತಿರುವುದನ್ನು ನಾವು ಗಮನಿಸಬಹುದು. ತಂದೆತಾಯಿಯರು ನಿಮ್ಮನ್ನು ನಂಬಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ. ಅವರ ಸರ್ವಾಂಗೀಣ ಅಭಿವೃದ್ಧಿ ನಿಮ್ಮನ್ನವಲಂಬಿಸಿದೆ. ಆ ಸಂದರ್ಭದಲ್ಲಿ ದೇಜಗೌರವರು ಉಪಾಧ್ಯಾಯರನ್ನು ಕುರಿತು ಈ ರೀತಿ ಹೇಳುತ್ತಿದ್ದರು. ನೀವು ತರಗತಿಯಲ್ಲಿ ಯಾಂತ್ರಿಕವಾಗಿ ಗಿಣಿಪಾಠ ಮಾಡಿದರೆ ಸಾಲದು. ಮಕ್ಕಳಿಂದಲೇ ಪಾಠ ಓದಿಸಬೇಕು. ಪ್ರಶ್ನೋತ್ತರಗಳ ಮೂಲಕ ಅವರ ತಿಳಿವಳಿಕೆಯನ್ನು ಹೆಚ್ಚಿಸಬೇಕು. ವಾಕ್ಚಾತುರ್ಯವನ್ನು ವಿಕಾಸಗೊಳಿಸಬೇಕು. ಅವರ ಪ್ರತಿಭೆಯನ್ನು ಗುರುತಿಸಬೇಕು. ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ಅವರು ಗ್ರಂಥಾಲಯದ ಪ್ರಯೋಜನವನ್ನು ಪಡೆಯಬೇಕು. ವಾಚನದಿಂದ, ವಿದ್ಯೆಯಿಂದ ಒದಗುವ ಲಾಭಗಳನ್ನು ತಿಳಿಯಬೇಕು. ಪಠ್ಯಕ್ರಮದಷ್ಟೇ ಪಠ್ಯೇತರ ಚಟುವಟಿಕೆಗಳಿಗೆ ಕ್ರೀಡೆಗಳಿಗೆ ಗಮನಕೊಡಬೇಕು. ಚರ್ಚಾಗೋಷ್ಠಿ, ಉಪನ್ಯಾಸಮಾಲೆ, ಆಶುಭಾಷಣಸ್ಪರ್ಧೆ, ಸಂಗೀತ, ನಾಟಕ ಕಾರ್ಯಕ್ರಮಗಳ ಮೂಲಕ ಅವರ ಪ್ರತಿಭೆಯನ್ನು ತಿಳಿಯಬೇಕು. ಅಜ್ಞಾನ ಮೌಢ್ಯಗಳಿಗೆ ಬಲಿಯಾಗದಂತೆ ಅವರಿಗೆ ತಿಳಿವಳಿಗೆ ಕೊಡಬೇಕು. ಕುವೆಂಪು ಸಂದೇಶವನ್ನು ನೀವುಗಳು ಮೊದಲು ಅರ್ಥಮಾಡಿಕೊಂಡು ಅವರ ಮನಮುಟ್ಟುವಂತೆ ವಿವರಿಸಬೇಕು.

ಬೌದ್ಧಿಕವಾಗಿ ಹಿಂದುಳಿದ ಮಕ್ಕಳನ್ನು ಹತ್ತಿರಕ್ಕೆ ಕರೆದು ಸಲುಗೆಯಿಂದ ಮಾತಾಡಿಸಿ, ಅವರ ಸಮಸ್ಯೆಗಳನ್ನು ಗ್ರಹಿಸಲು ಪ್ರಯತ್ನಿಸಬೇಕು. ದಿನವೂ ಕನಿಷ್ಠ ಪಕ್ಷ ಒಂದಾದರೂ ವಿಶೇಷ ತರಗತಿ ತೆಗೆದುಕೊಳ್ಳಬೇಕು. ಮೊದಲು ನೀವು ಜ್ಞಾನ ಕುತೂಹಲವನ್ನು ಬೆಳೆಸಿಕೊಂಡು ಓದುವ ಅಭಿರುಚಿಯನ್ನು ಹೆಚ್ಚಿಸಿಕೊಳ್ಳಬೇಕು. ಒಬ್ಬವಿದ್ಯಾರ್ಥಿ ಪರೀಕ್ಷೆಯಲ್ಲಿ ಫೇಲಾದರೂ ನೀವು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಉಪಧ್ಯಾಯರಿಗೆ ದೇಜಗೌ ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಎಲ್ಲರೂ ಒಪ್ಪಿಗೆ ಸೂಚಿಸುತ್ತಿದ್ದರು. ಸಭೆಯಿಂದ ಹೊರಗೆ ಬಂದ ಕೂಡಲೇ ನನ್ನ ಮಾತನ್ನು ಮರೆಯುತ್ತಾರೆ ಎಂದು ದೇಜಗೌ ನೊಂದುಕೊಳ್ಳುತ್ತಾರೆ. ನಾನು ಮಾತನಾಡುವಾಗ ಉಪಾಧ್ಯಾರ ಕಣ್ಣು ನನ್ನಲ್ಲಿ ನಾಟಿರುತ್ತದೆಯೇ ಹೊರತು ಆಗ ಅವರ ಮನಸ್ಸು ಎಲ್ಲಿಯೇ ಅಲೆದಾಡುತ್ತಿರುತ್ತದೆ, ಕಿವಿಯನ್ನು ಮುಚ್ಚಿಕೊಂಡಿರುತ್ತಾರೆ ನಮ್ಮಲ್ಲಿರುವ ಮಕ್ಕಳು ನಿರಕ್ಷರಿಗಳ ಮನೆಯಿಂದ ಬಂದವರು ಎಂದು ಏನಾದರೂ ಸಬೂಬು ಹೇಳುತ್ತಿದ್ದರು. ನಾವು ಏನೇ ಹೇಳಿದರು. ಅವರ ಮನಸ್ಸಿಗೆ ಅತ್ತುವುದಿಲ್ಲ ಆಗ ದೇಜಗೌ ನಾನು ನಿರಕ್ಷರಿಗಳ ಮನೆಯಿಂದ ಬಂದವನೇ ನಮ್ಮ ಉಪಾಧ್ಯಾಯರು ಚೆನ್ನಾಗಿ ಪಾಠ ಮಾಡುತ್ತಿದ್ದರು. ಅವರೆಲ್ಲ ಬ್ರಾಹ್ಮಣರು. ಅವರಿಗೆ ಬೇರೇನೂ ಹವ್ಯಾಸವಿರಲಿಲ್ಲ. ಪಾಠಮಾಡುವುದೊಂದೇ ತಮ್ಮ ಕರ್ತವ್ಯವೆಂದು ತಿಳಿದಿದ್ದರು. ಆದರೆ ನೀವುಗಳು ಎಷ್ಟು ಹೊತ್ತಿಗೆ ಶಾಲೆಯಿಂದ ಹೊರಗೆ ಹೋದೇನೋ ಎಂಬ ಆತುರದಲ್ಲಿ ನೀವಿರುತ್ತೀರಿ ಎಂದು ದೇಜಗೌ ನೊಂದುಕೊಳ್ಳುತ್ತಿದ್ದರು. ದೇಜಗೌ ಉಪಾಧ್ಯಾಯರನ್ನು ಕುರಿತು ನಿಮ್ಮಲ್ಲಿ ಕೆಲವರಿಗೆ ಏನೇನೋ ಹವ್ಯಾಸಗಳಿವೆ ಎಂದು ನನಗೆ ಗೊತ್ತು. ಒಬ್ಬರು ಲೇವಾದೇವಿದಾರರು, ಮತ್ತೊಬ್ಬರು ರಾಜಕೀಯ ಪುಡಾರಿ, ಮತ್ತೊಬ್ಬರಿಗೆ ಕ್ಲಬ್ಬು ಹುಚ್ಚು ಇವೆಲ್ಲವನ್ನು ಮರೆತಾಗ ನೀವು ಮಕ್ಕಳಿಗೆ ಸರಿಯಾದ ಪಾಠಹೇಳಬಲ್ಲವರಾಗುತ್ತೀರಿ ಎಂದು ನೀವು ನಿಮ್ಮ ಕರ್ತವ್ಯವನ್ನು ಮರೆತಿರಾದರೆ ದೇಶದ್ರೋಹ, ಸಮಾಜದ್ರೋಹ ಕೊನೆಗೆ ಆತ್ಮದ್ರೋಹದ ಪಾಪಕ್ಕೆ ಬಲಿಯಾಗುತ್ತೀರಿ ಉಪದೇಶ ನೀಡುತ್ತಿದ್ದರು.

ಪಾಠ ಪ್ರವಚನಗಳಲ್ಲಿ ಬ್ರಾಹ್ಮಣರೇ ಮೇಲೇನೋ ಎಂಬ ಅನುಮಾನ ನನ್ನ ಮನಸ್ಸಿನಲ್ಲಿ ಮೂಡುತ್ತದೆ ಎಂದು ದೇಜಗೌರವರ ಅಭಿಪ್ರಾಯವಾಗಿತ್ತು. ಕಾರಣ ಅವರೊಂದು ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದರೆ ಅದರಲ್ಲಿಯೇ ಮಗ್ನರಾಗುತ್ತಾರೆ. ಬುದ್ಧಿಯಲ್ಲಿ ಬೇರೆಯವರು ಕಡಿಮೆಯೆಂಬ ಮಾತನ್ನು ನಾನು ಒಪ್ಪಿಕೊಳ್ಳುವುದಿಲ್ಲ.

ಬ್ರಾಹ್ಮಣರನ್ನು ಬಿಟ್ಟು ಬೇರೆ ಜಾತಿಯವರು ಕಷ್ಟಪಡುವುದಿಲ್ಲವೆಂಬುದು ದೇಜಗೌರವರ ದೂರಾಗಿತ್ತು. ಕೆಲವರಿಗೆ ಕಾಗುಣಿತವೇ ಗೊತ್ತಿಲ್ಲ. ಬರಲ್ಲ ಈ ಸಂದರ್ಭದಲ್ಲಿ ದೇಜಗೌರವರ ಅಭಿಪ್ರಾಯ, ಈ ರೀತಿ ಇದೆ ಅದು ಯಾವ ರೀತಿಯಾಗಿತ್ತೆಂದರೆ ಬ್ರಾಹ್ಮಣರಲ್ಲದವರಿಗೆ ಕೆಲಸ ಕೊಡಬೇಡಿರೆಂದು ನಾನು ಹೇಳುವುದಿಲ್ಲ, ಕೆಲಸ ಕೊಡಿ ಆದರೆ ಅವರಿಗೆ ದೀರ್ಘಕಾಲದ ತರಬೇತಿ ನೀಡಿ. ಮೂರುವರ್ಷಕ್ಕೊಮ್ಮೆ ಪುನಶ್ಚೇತನ ತರಬೇತಿಯನ್ನು ಒದಗಿಸಿ, ಉಪಾಧ್ಯಾಯರ ಮಟ್ಟ ಏರದ ಹೊರತು, ವಿದ್ಯಾಮಟ್ಟ ಏರಲಾರದು ಎನ್ನುವ ಅಭಿಪ್ರಾಯ ದೇಜಗೌರವರದಾಗಿತ್ತು. ಸರಕಾರೀ ಶಾಲೆಗಳ ಮಟ್ಟಕ್ಕೆ ಖಾಸಗೀ ಶಾಲೆಗಳನ್ನಿಳಿಸುವುದು ಒಳ್ಳೆಯದಲ್ಲ ಎಂದು ಎಲ್ಲಾ ಕಡೆ ಭಾಷಣಗಳಲ್ಲಿಯೂ ಅವರು ಹೇಳುತ್ತಿದ್ದರು.

ಆಡಳಿತ ಮಂಡಳಿಯ ಅಧಿಕಾರವನ್ನು ಕಿತ್ತುಕೊಳ್ಳುವ ಖಾಸಗಿ ಸಂಸ್ಥೆಗಳನ್ನು ಪರೋಕ್ಷವಾಗಿ ಸರ್ಕಾರೀಕರಣ ಮಾಡುವ ಹವಣಿಕೆ ನಡೆದಿದೆಯೆಂದು ನಾನು ಕೇಳಿದ್ದೇನೆ ಎಂದು ದೇಜಗೌ ಹೇಳುತ್ತಿದ್ದರು. ಆಡಳಿತ ಮಂಡಲಿಗೆ ಸಾಕಷ್ಟು ಅಧಿಕಾರ ಕೊಡದಿದ್ದರೆ ಉಪಾಧ್ಯಾಯರಲ್ಲಿ ಅತಿಯಾದ ಅಶಿಸ್ತು ಬೆಳೆಯುತ್ತದೆ. ಅದರ ನೈತಿಕತೆ ಅವನತಿ ಹೊಂದುತ್ತದೆ. ವಿದ್ಯಾಮಟ್ಟವನ್ನು ಬೆಳೆಸುವುದರಲ್ಲಿ ಸರ್ಕಾರದ ಆಸಕ್ತಿಯಿರಬೇಕೇ ಹೊರತು ಬೇರೆಯ ಚಿಂತೆ ಮಾಡಬಾರದೆಂದು ದೇಜಗೌರವರ ಅಭಿಪ್ರಾಯವಾಗಿತ್ತು.

ದೇಜಗೌರವರು ಈ ರೀತಿಯಾಗಿ ಹೇಳುತ್ತಾರೆ ನನಗೆ ಗೊತ್ತಿರುವ ಶಾಲೆಗಳಲ್ಲಿ ಇತ್ತೀಚೆಗೆ ನಡೆದಿರುವ ಒಂದೆರಡು ಸಂಗತಿಗಳನ್ನು ಅತ್ಯಂತ ವ್ಯಥೆಯಿಂದ ಇಲ್ಲಿ ದಾಖಲಿಸಬೇಕಾಗುತ್ತದೆ. ಒಬ್ಬ ಉಪಾಧ್ಯಾಯ ಅಮಾಯಕ ಹೆಣ್ಣುಮಕ್ಕಳನ್ನು ಏನೇನೋ ನೆಪ ಹೇಳಿ ತನ್ನ ಹೆಂಡತಿ ಇಲ್ಲದಾಗ ತನ್ನ ಮನೆಗೆ ಕರೆದೊಯ್ದು ಅತ್ಯಾಚಾರಕ್ಕೆ ಪ್ರಯತ್ನ ಮಾಡಿದನೆಂಬ ಗುಲ್ಲು ಎದ್ದದ್ದುಂಟು. ಬೆಂಕಿ ಇಲ್ಲದೆ ಹೊಗೆಯಾಡುವುದುಂಟೆ? ಅವನ ಮೇಲೆ ಕ್ರಮ ತೆಗೆದುಕೊಂಡದ್ದಾದರೆ ಜಾತೀಯ ರಾಜಕೀಯ ಶುರುವಾಗುತ್ತದೆಂಬ ಸಂದೇಹದಿಂದ ಹೇಗೋ ಆ ಪ್ರಕರಣವನ್ನು ಮರೆಸಿದ್ದಾಯಿತು. ಇಂತಹ ಸಂದರ್ಭಗಳಲ್ಲಿ ದೇಜಗೌರವರು ಚಿಂತನೆ ತುಂಬಾ ಮಾರ್ಮಿಕವಾಗಿ ಚಿಂತಿಸುತ್ತಿದ್ದರು. ಸಮಾಜದಬಗ್ಗೆ ಅಪಾರವಾದ ಕಾಳಜಿಯನ್ನು ಗಮನಿಸಬಹುದು. ಸರ್ಕಾರಿ ನಿಯಮಗಳ ಪ್ರಕಾರ ಶಾಲೆಗೆ ಸಂಬಂಧಿಸಿದ ಲೆಕ್ಕ ಪತ್ರಗಳ ಸಂಪೂರ್ಣ ಜವಾಬ್ದಾರಿ ಮುಖ್ಯೋಪಾಧ್ಯಾಯರದು. ಶಾಲೆಯಲ್ಲಿ ಕೆಲಸವಿಲ್ಲದಾಗ ಅವರನ್ನು ಒಮ್ಮೊಮ್ಮೆ ಟ್ರಸ್ಟಿನ ಕೆಲಸಕ್ಕೆ ಕಳಿಸುತ್ತಿದ್ದುದುಂಟು.

ಅವರು ಮಾಡುತ್ತಿದ್ದುದು ಅಟೆಂಡರ್ ಅಥವಾ ಅಂಚೆಯವನ ಕೆಲಸವಷ್ಟೇ. ಇನ್ನು ಕೆಲವು ವಿಷಯಗಳ ಬಗ್ಗೆ ದೇಜಗೌರವರು ತಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಅವಾಂತರವನ್ನು ಕಂಡು ಅವರನ್ನು ತರಾಟೆಗೆ ತೆಗೆದುಕೊಂಡದ್ದು ಉಂಟು ಇದರಿಂದ ನಮಗೆ ತಿಳಿಯುವ ವಿಷಯವೇನೆಂದರೆ ಯಾವುದೇ ಸಂದರ್ಭದಲ್ಲಿ ದೇಜಗೌಡರು ಅನ್ಯಾಯ ಅಕ್ರಮಗಳು ನಡೆಯುವುದಕ್ಕೆ ಬಿಡುತ್ತಿರಲಿಲ್ಲ ಅತ್ಯಂತ ನಿಷ್ಠುರವಾದಿಯಾಗಿದ್ದುದನ್ನು ನಾವುಗಳು ಅಂದಿಗೂ ಮತ್ತು ಇಂದಿಗೂ ಗಮನಿಸಬಹುದಾಗಿದೆ.

ರಾಜ್ಯದ ಸಾವಿರಾರು ಶಾಲೆಗಳಲ್ಲಿ ಇಂಥದೇ ಅವ್ಯವಹಾರಗಳು ನಡೆಯುತ್ತಿದ್ದರೆ ನನಗೆ ಆಶ್ಚರ್ಯವಾಗದು ಎಂದು ದೇಜಗೌರವರು ನೊಂದುಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲವರಾದರೂ ಪ್ರಾಮಾಣಿಕರು ಇರಬಹುದಲ್ಲವೇ? ಇದನ್ನೆಲ್ಲ ನೋಡಿದಾಗ ಇಡೀ ರಾಜ್ಯದಲ್ಲಿ ಕೇವಲ ಇಲಾಖೆಗಳ ಮಟ್ಟದಲ್ಲಿ ಸಾವಿರಾರು ಕೋಟಿ ರೂಪಾಯಿ ಅಪಹಣರವಾಗುತ್ತಿದೆ. ದೇಜಗೌರವರು ತುಂಬಾ ನೊಂದುಕೊಂಡದ್ದುಂಟು.

ಒಮ್ಮೆ ದೇಜಗೌರವರೇ ಸ್ಥಾಪಿಸಿದ ಪ್ರೌಢಶಾಲೆಯಲ್ಲಿ ಅನ್ಯಾಯ ಅಕ್ರಮವನ್ನು ಮಾಡಿದ ಮುಖ್ಯೋಪಾಧ್ಯಾಯರನ್ನು ತರಾಟೆಗೆ ತೆಗೆದುಕೊಂಡಿರುವ ವಿಷಯವನ್ನು ಗಮನಿಸಿದರೆ ನಮಗೆ ಗೊತ್ತಾಗುವ ವಿಷಯವೇನೆಂದರೆ ಶಿಕ್ಷಣಕ್ಷೇತ್ರದಲ್ಲಿ ಆಗುವ ಅವ್ಯವಹಾರವನ್ನು ಖಂಡಿಸುತ್ತಿರುವುದನ್ನು ನಾವು ಗಮನಿಸಬಹುದು. ಇದರಿಂದ ನಮಗೆ ತಿಳಿಯುವ ವಿಷಯವೇನೆಂದರೆ ದೇಜಗೌರವರು ಎಷ್ಟೊಂದು ಪ್ರಾಮಾಣಿಕ ವ್ಯಕ್ತಿಯಾಗಿದ್ದರೆಂಬುದನ್ನು ತಿಳಿಯಬಹುದು. ಶಿಕ್ಷಣಕ್ಷೇತ್ರದಲ್ಲಿ ಆಗುತ್ತಿರುವ ಅಪ್ರಮಾಣಿಕತೆಯನ್ನು ಸದಾ ವಿರೋಧಿಸುತ್ತಿದ್ದರು.

ದೇಜಗೌರವರು ಎಷ್ಟೊಂದು ಪ್ರಾಮಾಣಿಕ ವ್ಯಕ್ತಿಯಾಗಿದ್ದರೆಂಬುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಇವರೇ ಸ್ಥಾಪನೆ ಮಾಡಿದ ಒಂದು ಪ್ರೌಢಶಾಲೆಯಲ್ಲಿ ಅವ್ಯವಹಾರ ಮಾಡಿ ಸಿಕ್ಕಿಬಿದ್ದ ಶಿಕ್ಷಕರ ವರ್ತನೆಯನ್ನು ನೋಡಿ ಸ್ವತಃ ದೇಜಗೌರವರು ಪ್ರಾಯಶ್ಚಿತ್ತ ರೂಪವಾಗಿ ತಪ್ಪು ಮಾಡಿದ ವ್ಯಕ್ತಿಗೆ ವಿವೇಕಬರಲೆಂದು ಇಡೀ ಶಿಕ್ಷಣಕ್ಷೇತ್ರಕ್ಕೆ ಎಚ್ಚರಿಕೆಯಾಗಲೆಂದು ಒಂದು ದಿನ ಪೂರ್ತಿ ಉಪವಾಸ ಮಾಡಿರುವ ವಿಷಯವನ್ನು ನಾವು ಗಮನಿಸಬಹುದಾಗಿದೆ. ಇನ್ನು ಮುಂತಾದ ಸಂದರ್ಭದಲ್ಲಿ ದೇಜಗೌರವರು ಕನ್ನಡ ನಾಡಿನ ಬಗ್ಗೆ, ಅದರಲ್ಲೂ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂದು ತಿಳಿದರೂ ಸಾಕು ಉಪವಾಸ

ಸತ್ಯಾಗ್ರಹ ಕೂರುತ್ತಿದ್ದರು. ಅದರಲ್ಲೂ ಶಿಕ್ಷಣಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುವಲ್ಲಿ ಶ್ರಮಪಟ್ಟಿದ್ದಾರೆ. ಇವರು ಪಟ್ಟ ಶ್ರಮ ಅಷ್ಟಿಷ್ಟಲ್ಲ ಇವರಿಂದ ಸಹಾಯ ಪಡೆದುಕೊಂಡವರು ನೂರಾರು ಜನ ಈಗಲೂ ಕೂಡ ರಾಜ್ಯದ ಯಾವುದೇ ಭಾಗದಲ್ಲಿ ಅನ್ಯಾಯವಾಗುತ್ತಿದೆ ಎಂದು ತಿಳಿದರೆ ಸಾಕು ಶತಮಾನದ ಅಂಚಿನಲ್ಲಿರುವ ದೇಜಗೌರವರು ಪ್ರತಿಭಟಿಸುತ್ತಾರೆ, ತುಂಬಾ ನೊಂದುಕೊಳ್ಳುತ್ತಾರೆ. ಕನ್ನಡ ನಾಡಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲೂ ಶೈಕ್ಷಣಿಕ ಕ್ಷೇತ್ರಕ್ಕಂತೂ ಬೇಕಾದಷ್ಟು ಮಾರ್ಗದರ್ಶನ ಮಾಡಿದ್ದಾರೆ. ಇವರು ಅಧಿಕಾರದಲ್ಲಿದ್ದಾಗ ಹಲವಾರು ಸಂದರ್ಭಗಳಲ್ಲಿ ಸರ್ಕಾರಕ್ಕೆ ನಿಷ್ಠುರತೆಯಿಂದ ನಡೆದುಕೊಂಡು ಕೆಲಸ ಮಾಡಿಸಿದ್ದಾರೆ. ತಮ್ಮ ಭಾಷಣಗಳ ಮೂಲಕ ಸಮಾಜದಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಶ್ರಮಪಟ್ಟಿದ್ದಾರೆ ದೇಜಗೌಡರವರು.

ಒಮ್ಮೆ ದೇಜಗೌಡರವರು ತಮ್ಮದೇ ಪ್ರೌಢಶಾಲೆಗೆ ಅನುಧಾನ ತರುವುದಕ್ಕೆ ಉಪವಾಸ ವ್ರತವನ್ನು ನಾವು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ. ಕಳೆದೆರಡು ವರ್ಷಗಳಿಂದ ಲಂಚಕ್ಕೆ ಓಡಾಟಕ್ಕೆ ಸಾಕಷ್ಟು ನಷ್ಟವಾಗಿದೆ ನಮ್ಮ ಉಪಾಧ್ಯಾಯರ ನೈತಿಕತೆಗೆ ಹಾನಿಯುಂಟಾಗಿದೆ ಎಂದು ಸ್ವತಃ ದೇಜಗೌಡರು ಹೇಳುತ್ತಾರೆ. ಕೇವಲ ಒಂದು ಶಾಲೆಗಾಗಿ ನಾನಿಷ್ಟು ಕಷ್ಟಪಟ್ಟಿದ್ದೇನೆಂದು ಯಾರೂ ತಿಳಿಯಬಾರದು ಇಂಥ ಶಾಲೆಗಳನ್ನೆಚ್ಚರಿಸಲು ನಿರ್ಲಕ್ಷಿತ ನತದುಷ್ಟ ಅಧ್ಯಾಪಕರ ಗೋಳನ್ನು ಲೋಕದ ಗಮನಕ್ಕೆ ತರಲು ಸರ್ಕಾರದ ಅಧಿಕಾರಿಗಳನ್ನು ಜಡತೆಯಿಂದ ಜಾಗೃತಗೊಳಿಸಲು ಈ ಉಪವಾಸ ಕೇವಲ ಸಂಕೇತಮಾತ್ರ ಶಿಕ್ಷಣ ಸಮಗ್ರ ಪ್ರಗತಿಗೆ ಮೂಲ, ಗುಣಮಟ್ಟಕ್ಕೆ ಭಂಗಬರದಂತೆ ಅದನ್ನು ಸಾರ್ವತ್ರಿಕಗೊಳಿಸಬೇಕಾದ್ದು ಸರಕಾರದ ಧರ್ಮ ಸರಕಾರವೊಂದರಿಂದಲೇ ಆ ಕೆಲಸ ಸಾಧ್ಯವಾಗದು. ಖಾಸಗಿ ವಲಯದ ಸಹಾಯ ಸಹಕಾರಗಳನ್ನದು ಪಡೆದುಕೊಳ್ಳಬೇಕಾಗುತ್ತದೆ. ನ್ಯಾಯವಾದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಅವುಗಳಿಗೆ ಪೂರ್ಣವಕಾಶ ನೀಡಬೇಕು. ತಜ್ಞರ ಸಲಹೆಯನ್ನು ಪಡೆಯದೆ ಸರಕಾರವಾಗಲಿ ಕೋರ್ಟುಗಳಾಗಲಿ ಅನಾವಶ್ಯಕವಾಗಿ ಶಿಕ್ಷಣ ಕ್ಷೇತ್ರದಲ್ಲಿ ಗೊಂದಲವುಂಟು ಮಾಡಬಾರದು. ಅಮೇರಿಕೆಯಲ್ಲಿ ಸರಕಾರ ಹಾಗೂ ಖಾಸಗಿ ಕ್ಷೇತ್ರಗಳು ಹೇಗೆ ಯಶಸ್ವಿಯಾಗಿ ಉತ್ಪಾದಕ ಶಕ್ತಿಗಳಾಗಿ ಗೊಂದಲ ಸಂಘರ್ಷಗಳಿಗೆಡೆಗೊಡದಂತೆ ಶೈಕ್ಷಣಿಕ ಪ್ರಗತಿಯನ್ನು ಸಾಧಿಸುತ್ತಿದೆ ಎಂಬುದನ್ನು ನಮ್ಮಲ್ಲಿ ಅಧಿಕಾರವುಳ್ಳ ಜನ ಅಧ್ಯಯನ ಮಾಡಬೇಕೆಂದು ಸ್ವತಃ ದೇಜಗೌಡರವರೇ ತಮ್ಮ 'ಹೋರಾಟದ ಬದುಕು' ಪುಸ್ತಕದಲ್ಲಿ ಹೇಳಿದ್ದಾರೆ.

ಅಡಿಟಿಪ್ಪಣಿ

೧. ಹೋರಾಟದ ಬದುಕು, ಪ್ರಕಾಶಕರು, ದೇಜಗೌ ಟ್ರಸ್ಟ್, ವಿಶ್ವಚೇತನ ಕಲಾ ನಿಲಯ, ಜಯಲಕ್ಷ್ಮಿಪುರಂ, ಮೈಸೂರು-೫, ೨೦೦೧

೨. ಅದೇ ಪುಟ. ೪೦೩

೩. ಅದೇ, ಪು. ೪೦೪

೪. ಅದೇ, ಪು. ೪೦೫

೫. ಅದೇ, ಪು. ೬೦೫

೬. ಅದೇ, ಪು. ೬೦೬

೭. ಅದೇ, ಪು. ೬೦೭

೮. ಶತಮಾನದ ವ್ಯಕ್ತಿ, ದೇಜಗೌ, ಸಂಪಾದಕರು, ಡಾ.ಟಿ.ಕೆ.ಕೆಂಪೇಗೌಡ, ಕಣ್ವಪ್ರಕಾಶನ, ಬೆಂಗಲೂರು

೯. ಅದೇ, ಪು. ೨

೧೦. ಅದೇ, ಪು. ೩-೪

೧೧. ಅದೇ, ಪು. ೧೨೧

೧೨. ಅದೇ, ಪು. ೧೨೨

೧೩. ಅದೇ, ಪು. ೧೨೮

೧೪. ಅದೇ, ಪು. ೨೧೦

೧೫. ಅದೇ, ಪು. ೨೧೧

೧೬. ಅದೇ, ಪು. ೨೭೪

ಅಧ್ಯಾಯ ಐದು

ದೇಜಗೌರವರ ಸಾಹಿತ್ಯಿಕ ಒಟ್ಟು ವಿಶ್ಲೇಷಣೆ

ಪ್ರತಿಭೆ ಯಾರೊಬ್ಬರ ಗುತ್ತಿಗೆಯೂ ಅಲ್ಲ. ಅದು ಎಲ್ಲರಲ್ಲೂ ಸುಪ್ತವಾಗಿ ಅಡಗಿರುತ್ತದೆ. ಸೂಕ್ತ ಅವಕಾಶ ದೊರೆತಾಗ, ಭೂಮಿಗೆ ಬಿದ್ದ ಬೀಜ ಮೊಳೆತು, ಸಸಿಯಾಗಿ, ಗಿಡವಾಗಿ ಹೆಮ್ಮರವಾಗಿ ಬೆಳೆಯುವಂತೆ ಪ್ರವರ್ಧಮಾನಕ್ಕೆ ಬರುತ್ತದೆ ಎಂಬುದಕ್ಕೆ ಡಾ. ದೇ.ಜವರೇಗೌಡರ ಬದುಕು ಉತ್ತಮ ನಿದರ್ಶನವಾಗಿದೆ. ದೇಜಗೌರವರು ಬಾಲ್ಯದ ಬಾಳಗೋಳಿನ ಬವಣೆಗಳನ್ನು ಕಳೆದು, ಆಳ ಅಧ್ಯಯನಕ್ಕಿಳಿದು, ಮೌಢ್ಯದ ವಿರುದ್ಧ ದನಿ ಎತ್ತಿದ ಧೀಮಂತರಾಗಿ ನಾಡು, ನುಡಿ, ಸಂಸ್ಕೃತಿಯ ಆರಾಧಕರಾಗಿ ರೂಪುಗೊಂಡರು.

ದೇಜಗೌರವರು ಕನ್ನಡದ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದು ಕವಿಗುರು ಕುವೆಂಪು ಅವರ ಅಮೃತವಾಣಿಯನ್ನು ಒಪ್ಪಿಕೊಂಡು, ಕನ್ನಡವನ್ನು ಅಪ್ಪಿಕೊಂಡು, ಅದರ ಏಳಿಗೆಗೆ ತಮ್ಮನ್ನು ಸಮರ್ಪಿಸಿಕೊಂಡರು. ದೇಜಗೌ ಅವರು ಹಲವು ಹತ್ತು ಹೋರಾಟಗಳನ್ನು ಕೈಗೊಂಡರು. ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳು ಕನ್ನಡದಲ್ಲಿರಬೇಕೆಂದು ಡಾ. ಸಿದ್ದಯ್ಯ ಪುರಾಣಿಕ ಅವರೊಡನೆ ಚಳವಳಿ ಮಾಡಿದ್ದರ ಫಲವಾಗಿ ಇಂದು ಅದು ಸಾಕಾರಗೊಂಡಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನವನ್ನು ನೀಡಬೇಕೆಂದು ಎಲ್ಲೆಡೆ ನಡೆಯುತ್ತಿದ್ದ ಹೋರಾಟದ ಚಳುವಳಿಯ ಸಂದರ್ಭದಲ್ಲಿ ತಮ್ಮ ವಯಸ್ಸು ಹಾಗೂ ಆರೋಗ್ಯವನ್ನು ಲೆಕ್ಕಿಸದೆ ಉಪವಾಸ ಕುಳಿತದ್ದು ನಾಡಿನೆಲ್ಲೆಡೆ ಹೊಸ ಸಂಚಲನವನ್ನು ಉಂಟುಮಾಡಿತು. ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮ ಜಾರಿಗಾಗಲಿ, ಕಾವೇರಿ–ಕೃಷ್ಣಾ ಜಲವಿವಾದವಿರಲಿ, ಗಡಿ ಸಮಸ್ಯೆಯಾಗಲಿ, ಉದ್ಯೋಗದಲ್ಲಿ ಕನ್ನಡಕ್ಕೆ ಅನ್ಯಾಯವಾದಾಗ ಆಗಲಿ, ರೈಲ್ವೆ ನೌಕರರ ನೇಮಕದಲ್ಲಿ ಕನ್ನಡಿಗರಿಗೆ ಅವಕಾಶ ವಂಚಿತರಾದಾಗ, ಕನ್ನಡ ವಿಶ್ವವಿದ್ಯಾಲಯದ ರಚನೆಗಾಗಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಸ್ತಿತ್ವಕ್ಕಾಗಲಿ, ಆಡಳಿತದಲ್ಲಿ ಕನ್ನಡದ ಅನುಷ್ಠಾನಕ್ಕಾಗಲಿ ದೇಜಗೌ ಹೋರಾಟದ ಕೊಡುಗೆ ಅಪಾರ. ಕನ್ನಡ ನಾಡು–ನುಡಿಗೆ ಅನ್ಯಾಯವಾದಾಗ, ಅದರ ವಿರುದ್ಧ ಬೀದಿಗಿಳಿದು ಹೋರಾಟಗೈದ ಬೆರಳೆಣಿಕೆಯಷ್ಟು ಸಾಹಿತಿಗಳಲ್ಲಿ ಚಿಂತಕ ದೇಜಗೌ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ದೇಜಗೌರವರು ಸಾಹಿತ್ಯದ ಬಗ್ಗೆ ಅಪಾರವಾದ ಆಸಕ್ತಿ ಹೊಂದಿದವರಾಗಿದ್ದರು. ಓದುಬರಹವೆಂದರೆ ಇವರಿಗೆ ಅನ್ನ ನೀರಿದ್ದಂತೆ. ಅವರು ತಮಗಿಷ್ಟವಾದ ಕೃತಿಗಳನ್ನು ಪಡೆಯಲು ಎಷ್ಟು ದೂರ ಬೇಕಾದರೂ ಹೋಗಲು ಸಿದ್ಧ. ಎಷ್ಟೇ ಕಷ್ಟವಾದರೂ ಬಿಡದೆ ಅದನ್ನು ಪಡೆದು ಓದಿ ತಮ್ಮ ಚಿಂತನೆಯ ಹೊಳಪಿನಿಂದ ಹೊಸ ಕೃತಿಗಳ ನಿರ್ಮಿತಿಯಲ್ಲಿ ತೊಡಗಿ ಸಂತಸಪಟ್ಟಿದ್ದಾರೆ. ನೂರಾರು ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವುದು ದೇಜಗೌ ಅವರ ಮಹತ್ಸಾದನೆ. ಇದು ಸಾಮಾನ್ಯರು ಮಾಡುವ ಕಾರ್ಯವಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತಮ್ಮ ವಿಶಿಷ್ಟ ಭಾಷಾಶೈಲಿಯಿಂದ ಕನ್ನಡ ಗದ್ಯ ಸಾಹಿತ್ಯಕ್ಕೆ ಚಿರನೂತನವಾದ ಕೊಡುಗೆ ನೀಡಿದ್ದು ಇಪ್ಪತ್ತನೆಯ ಶತಮಾನದ ಮಹತ್ವದ ಬೆಳವಣಿಗೆ ಎನ್ನಬಹುದು. ಇದಲ್ಲದೆ ದೇಜಗೌರವರ ಅರಿವಿನ ವಿಸ್ತಾರ ಆಳ ಅಗಲವನ್ನು ಗಮನಿಸಿದರೆ ಅವರ ವ್ಯಕ್ತಿತ್ವ ಎಂಥಹುದೆಂಬುದನ್ನು ಗಮನಿಸಬಹುದು. ಎಂದೂ ಒಂದು ಕಡೆ ನಿಲ್ಲದೆ ನಿಂತೆಡೆಯೂ ಒಂದಿಲ್ಲೊಂದು ಕಾರ್ಯದಲ್ಲಿ ತೊಡಗಿ ತಮ್ಮ ಕ್ರಿಯಾ ಶಕ್ತಿಯನ್ನು ನಿರಂತರ ಚೇತನಶೀಲವನ್ನಾಗಿ ಮಾಡಿ, ತಾವಿರುವ ಪರಿಸರವನ್ನು ಸದಾ ಎಚ್ಚರದ ಸ್ಥಿತಿಯಲ್ಲಿಡುವ ಮಾಂತ್ರಿಕತೆ ಅವರಿಗೆ ಸಿದ್ಧಿಸಿದೆ. ಇವರು ಇಂಗ್ಲೆಂಡ್, ಅಮೆರಿಕ, ಆಸ್ಟ್ರೇಲಿಯಾ, ಇಟಲಿ, ರಷ್ಯಾ, ಜಪಾನ್, ಜರ್ಮನಿ, ಶ್ರೀಲಂಕಾ, ಸಿಂಗಾಪುರ ಮೊದಲಾದ ದೇಶಗಳಲ್ಲಿ ಪ್ರವಾಸಮಾಡಿ, ಆದೇಶಗಳ ಚಾರಿತ್ರಿಕ, ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವೈಜ್ಞಾನಿಕ ಅಂಶಗಳನ್ನು ಕನ್ನಡಿಗರಿಗೆ ಪರಿಚಯಿಸುವ ಮೂಲಕ ಅರಿವಿನ ವಿಸ್ತಾರಕ್ಕೆ ಕಾರಣವಾಗಿದ್ದೂ ಸಹ ದೇಜಗೌ ಅವರ ಸಾಧನೆ ಎಂದು ಹೇಳಬಹುದು.

ದೇಜಗೌರವರಿಗೆ ಸಂಘಟನೆ ಮಾಡುವ ಶಕ್ತಿ ಎಷ್ಟೆಂಬುದನ್ನು ಅವರ ಭಾಷಣ ಕಾರ್ಯಕ್ರಮಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಅವರ ಮಾತು ಸೂಜಿಗಲ್ಲಿನಂತೆ ಆಕರ್ಷಕವಾದುದು. ಹೀಗಾಗಿ ಯಾರೇ ಆದರೂ ಅವರಿಗೆ ಮಾರುಹೋದರೆ ಅಚ್ಚರಿಪಡಬೇಕಾಗಿಲ್ಲ. ಭಾಷಾಭಿಮಾನವನ್ನು ನಾಡಿನ ಜನತೆಯಲ್ಲಿ ಉದ್ದೀಪನಗೊಳಿಸುತ್ತಿರುವ ದೇಜಗೌ ಅವರು ಸ್ವತಃ ಹತ್ತಾರು ಸಂಘ–ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ ಕನ್ನಡನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ಇದು ಇತರರಿಗೆ ಮಾದರಿಯಾಗಬಲ್ಲ ಸಂಗತಿ, ಅವರಿಂದ ಚಾಲನೆ ಪಡೆದ ಸಂಘ–ಸಂಸ್ಥೆಗಳವರು ಕೂಡ ಕನ್ನಡ ಕಟ್ಟಿ ಬೆಳೆಸಿ ಕನ್ನಡನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ಅದರಿಂದ ಚಾಲನೆ ಪಡೆದ ಸಂಘ–ಸಂಸ್ಥೆಗಳಲ್ಲಿ

ಜ್ಞಾನೋದಯ ಸಂಘ, ಕರ್ನಾಟಕ ಸಂಘ, ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಕುವೆಂಪು ವಿದ್ಯಾವರ್ಧಕ ಸಂಘ, ಶ್ರೀ ಕುವೆಂಪು ವಿದ್ಯಾಪರಿಷತ್ತು, ಅಖಿಲಭಾರತ ಸ್ಥಳನಾಮ ಪರಿಷತ್ತು, ಹಿರಿಯ ನಾಗರಿಕ ಸಭಾ, ಭಾಷಾಂತರ ಪರಿಷತ್ತು, ಕನ್ನಡ ಅಧ್ಯಾಪಕರ ಪರಿಷತ್ತು, ಕೆ.ವಿ.ಶಂಕರೇಗೌಡ ಸಾಂಸ್ಕೃತಿಕ ಪ್ರತಿಷ್ಠಾನ, ವಚನ ಸಾಹಿತ್ಯ ಪರಿಷತ್ತು, ಅಂತರಜಾತೀಯ ವಿವಾಹ ವೇದಿಕೆ, ನೃಪತುಂಗ ಸಾಹಿತ್ಯ ವೇದಿಕೆ, ದೇಜಗೌ ಟ್ರಸ್ಟ್, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಪ್ರಮುಖವಾಗಿವೆ.

ಇಂಥ ಬಹುಮುಖ ಪ್ರತಿಭೆಯ ಧೀಮಂತರಾದ ದೇಜಗೌ ಅವರನ್ನು ಅರಸಿ ಬಂದ ಪ್ರಶಸ್ತಿ ಪುರಸ್ಕಾರಗಳಿಗೆ ಲೆಕ್ಕವಿಲ್ಲ. ನಾಡಿನಾದ್ಯಂತ ಇರುವ ಸಂಘ–ಸಂಸ್ಥೆಗಳು ಇವರನ್ನು ಸನ್ಮಾನಿಸಿ ಸಂತಸಪಟ್ಟಿವೆ. ಅವುಗಳಲ್ಲಿ ಪ್ರಮುಖವಾದ ಪ್ರಶಸ್ತಿಗಳೆಂದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯದ "ನಾಡೋಜ" ಪುರಸ್ಕಾರ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಮೊದಲಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವೆಲ್ಲವುಗಳಿಗೆ ಕಿರೀಟಪ್ರಾಯವಾಗಿ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ೨೦೦೮ರಲ್ಲಿ ಕರ್ನಾಟಕ ಸರ್ಕಾರವು ನೀಡಿರುವುದು ಅವರ ಸಾಧನೆಗೆ ಸಂದ ಮನ್ನಣೆ ಎಂದು ಹೆಮ್ಮೆಯಿಂದ ಹೇಳಬಹುದು. ಇವರ ಸಾಧನೆ ಸಿದ್ಧಿಗಳು ನಾಡಿನ ಜನತೆಗೆ ದಾರಿದೀಪವಾಗಬಲ್ಲಷ್ಟು ಮಹತ್ವವನ್ನು ಪಡೆದುಕೊಂಡಿವೆ.

ಇವರ ಸಾಹಿತ್ಯಿಕ ಒಟ್ಟಾರೆ ವಿಶ್ಲೇಷಣೆಯನ್ನು ಮತ್ತು ಸಾಧನೆಯನ್ನು ಗಮನಿಸಿದರೆ ನಮಗೆ ಗೊತ್ತಾಗುವುದೇನೆಂದರೆ ಹಳ್ಳಿಯ ಗುಡಿಸಲಿನಿಂದ ಬಂದ ದೇಜಗೌರವರು ಅಧ್ಯಾಪಕ ಪ್ರಾಧ್ಯಾಪಕ, ಕುಲಪತಿ ಎಲ್ಲವೂ ಆದವರು. ಇಪ್ಪತ್ನಾಲ್ಕು ವಿಭಾಗಗಳಿದ್ದ ಮಾನಸಗಂಗೋತ್ರಿಯಲ್ಲಿ ನಲ್ವತ್ತೆಂಟು ವಿಭಾಗ ವಿಷಯಗಳನ್ನು ತೆರೆದ ಕೀರ್ತಿ ಇವರಿಗೆ ಸಲ್ಲುತ್ತದೆ. ದೂರದೃಷ್ಟಿಯಿಂದ ಕನ್ನಡ ಅಧಯ್ಯನ ಸಂಸ್ಥೆಯಲ್ಲಿ ನಡೆಯಬೇಕಾದ ಕೆಲಸಕಾರ್ಯಗಳಿಗೆ ರೂಪುರೇಷೆಗಳನ್ನು ರೂಪಿಸಿ ಇಂದಿಗೂ ಅವೆಲ್ಲವೂ ಅವ್ಯಾಹತವಾಗಿ ಬೆಳೆಯಲು ಕಾರಣರಾಗಿದ್ದಾರೆ. ಜತೆಜತೆಗೇ ತಮ್ಮ ಗುರು ಅವರ ಹಸಿರು ಗಂಗೋತ್ರಿಯ ಕನಸನ್ನು ಸರ್ವಾಂಗ ಸುಂದರವಾಗಿ ಮೈತಾಳಿಸಿದ ಶ್ರೇಯವೂ ದೇಜಗೌ ಅವರದ್ದೇ ಜಾನಪದ ಮತ್ತು ವಸ್ತುಸಂಗ್ರಹಾಲಯ, ಪತ್ರಿಕೋದ್ಯಮ, ಅಂಚೆತೆರಪಿನ ಶಿಕ್ಷಣ ಸಂಸ್ಥೆ ಹಲವಾರು ಡಿಪ್ಲೋಮ ತರಗತಿಗಳ ಪ್ರಾರಂಭಕ್ಕೆ ಪ್ರೇರಕಶಕ್ತಿಯಾದರು. ವಿದ್ಯಾರ್ಥಿಗಳಿಗೆ ತೋಟಗಾರಿಕೆ

ಗ್ರಂಥಾಲಯ ಮುದ್ರಣಾಲಯ ಮುಂತಾದ ಕಡೆಗಳಲ್ಲಿ ಕಲಿತು ಈ ಯೋಜನೆಯಿಂದ ದಿನಕ್ಕೆ ಎರಡು ಗಂಟೆಗಳ ಕೆಲಸ ಕೊಟ್ಟು ವ್ಯಾಸಂಗ ಸಮಯದಲ್ಲಿ ಆರ್ಥಿಕವಾಗಿಯೂ ಸ್ವಾವಲಂಬಿಗಳಾಗಲು ಪ್ರೇರೇಪಿಸಿದ್ದ ಅವರ ಕ್ರಮದ ಫಲವನ್ನು ಹಲವರು ಈಗಲೂ ಸ್ಮರಿಸಿಕೊಳ್ಳುತ್ತಾರೆ.

ದೇಜಗೌರವರು ಸರ್ಕಾರಿ ವ್ಯವಸ್ಥೆಯಲ್ಲಿದ್ದುಕೊಂಡೇ ಕನ್ನಡ ಭಾಷೆಯ ರಕ್ಷಣೆಯಲ್ಲಿ ಮತ್ತು ಬೆಳವಣಿಗೆಯಲ್ಲಿ ಹಲವಾರು ಧ್ಯೇಯೋದ್ದೇಶಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯಗತಗೊಳಿಸಿದರು. ಅವುಗಳೆಂದರೆ

- ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು.
- ಆಡಳಿತ ಮಾಧ್ಯಮವಾಗಬೇಕು.
- ಪಿಹೆಚ್.ಡಿ. ಅಂತಹ ಸಂಶೋಧನಾ ಮಹಾಪ್ರಬಂಧಗಳು ಅದು ಯಾವುದೇ ವಿಷಯದಲ್ಲಿ ಬೇಕಾದರೂ ಇರಲಿ ಅದನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕು.
- ಕನ್ನಡ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ನಡೆಯುತ್ತಿದ್ದವು. ಕನ್ನಡಕ್ಕೆ ಅಂದು ಸರಿಯಾದ ಸ್ಥಾನಮಾನವಿರಲಿಲ್ಲ. ದೇಜಗೌ ಉಪವಾಸ ಸತ್ಯಾಗ್ರಹದ ಮೂಲಕ ಕನ್ನಡವನ್ನು ಅಳವಡಿಸಲು ಕಾರಣರಾದರು.
- ಕಾಲೇಜು ಮಟ್ಟದಲ್ಲಿ ಕನ್ನಡವನ್ನು ಕೇವಲ ಎರಡು ಗಂಟೆ ಮಾತ್ರ ಬೋಧಿಸಲಾಗುತ್ತಿತ್ತು. ಭಾಷಾ ಕನ್ನಡ ತರಗತಿಗಳು ನಾಲ್ಕು ಗಂಟೆಗಳ ಕಾಲ ನಡೆಯುವಂತೆ ವ್ಯವಸ್ಥೆ ಮಾಡಿದ್ದು, ಭಾಷಾಂತರದ ಡಿಪ್ಲೊಮಾ ತರಗತಿ, ಶಿಕ್ಷಣ ಕ್ರಮದಲ್ಲಿ ಮೊದಲ ಬಾರಿಗೆ ಜಾನಪದ ವಿಷಯವನ್ನು ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇಡೀ ಏಷ್ಯಾದಲ್ಲಿ ಪತ್ರಿಕೋದ್ಯಮದ ಸ್ನಾತಕೋತ್ತರ ಕೇಂದ್ರವನ್ನು ಮೊಟ್ಟಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆರೆದದ್ದು ವಿಶ್ವಕೋಶ ಯೋಜನೆ, ಸ್ಥಳನಾಮ ಅಧ್ಯಯನ, ಕನ್ನಡ ನಾಡಿಗೆ ಸೇವೆ ಸಲ್ಲಿಸಿದವರ ಹೆಸರಿನಲ್ಲಿ ಸಂಘ ಸಂಸ್ಥೆಗಳ ಸಾಧನೆಗಾಗಿ ಪ್ರಶಸ್ತಿಗಳನ್ನು ಸೃಷ್ಟಿಮಾಡುವುದರ ಮುಖೇನ ಹೀಗೆ ಹತ್ತು ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಿದ ಕೀರ್ತಿ ದೇಜಗೌರವರಿಗೆ

ಸಲ್ಲುತ್ತದೆ. ಹಲವಾರು ಸಂಘಸಂಸ್ಥೆಗಳನ್ನು ಸ್ಥಾಪನೆಮಾಡಿದ ಇವರಿಗೆ ಹಲವಾರು ಪ್ರಶಸ್ತಿಗಳು ತಾವಾಗಿಯೇ ಅರಸಿ ಬಂದವು. ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ದೇಜಗೌರವರು ೬೦೦೦ ಪುಟಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಮಾಡಿದ್ದಾರೆ. ೪೦೦೦ ಪುಟಗಳನ್ನು ಗುರು ಕುವೆಂಪುರವರ ಸಾಹಿತ್ಯದ ಮೇಲೆ ಬರೆದಿದ್ದಾರೆ. ಅಸಲಿ ಜಾನಪದ ಬದುಕಿನಿಂದ ಮೂಡಿಬಂದ ಚೇತನ ದೇಜಗೌ ಅವರ ವ್ಯಕ್ತಿತ್ವ ಮತ್ತು ಬರವಣಿಗೆಯಲ್ಲಿ ಇತಿಹಾಸಕಾರರ ಚರಿತ್ರೆ ಮನಶಾಸ್ತ್ರಜ್ಞರ ಅಂಶಗಳು ಹಾಗೂ ಮನುಷ್ಯತ್ವಗಳು, ಮೇಳೈಸಿವೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆಯಲು ಪ್ರೇರಣೆ ನೀಡಿದ ಪ್ರೊ ದೇಜಗೌ ಉಪವಾಸದ ಮುಖೇನ ಕನ್ನಡಿಗರ ಗಮನಸೆಳೆಯುವುದಷ್ಟೇ ಅಲ್ಲದೆ ಕೇಂದ್ರದ ಗಮನವನ್ನು ಸೆಳೆದು ಶಾಸ್ತ್ರೀಯ ಸ್ಥಾನಮಾನ ದೊರೆಯಲು ಮುಖ್ಯ ಪ್ರೇರಕ ಶಕ್ತಿಯಾಗಿದ್ದಾರೆ. ಈ ಮೂಲಕ ಇಳಿವಯಸ್ಸಿನಲ್ಲೂ ಕನ್ನಡದ ಕೆಲಸಕ್ಕಾಗಿ ತಮ್ಮ ಜೀವನ ಸದಾ ಸಿದ್ಧ ಎಂದು ತೋರಿಸಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿತ್ಯನೂತನ ಸಾಹಿತ್ಯ ಸೌರಭವನ್ನು ನಿರಂತರ ಪಸರಿಸಲು ಶಕ್ತರಾಗಿರುವ ದೇಜಗೌರವರು ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಈಗಲೂ ಕಾರ್ಯಪ್ರವೃತ್ತರಾಗಿರುವುದು ಹೆಮ್ಮೆಯ ವಿಷಯವಾಗಿದೆ.

ದೇಜಗೌ ಅಗೆದಷ್ಟು ಬಗೆದೋರುವ ಗಣಿ; ಮೊಗೆದಷ್ಟು ಮಿಗುವ ಜ್ಞಾನದ ಕಡಲು, ಕಾರಣ ಅವರ ಬರೆಹದ ವೈಫಲ್ಯ ಹಾಗಿದೆ, ಬೋಧನೆ, ಸಂಸ್ಥೆಗಳ ನಿರ್ಮಾಣ, ಆಡಳಿತ ಅಸಂಖ್ಯಾತ ಸಂಘಸಂಸ್ಥೆಗಳ ಮಾರ್ಗದರ್ಶನ, ಸಾರ್ವಜನಿಕ ಭಾಷಣ, ಉಪನ್ಯಾಸ – ಇವೆಲ್ಲವುಗಳ ಜೊತೆಗೆ ಬರೆಹವನ್ನು ಅವರು ಕೈಗೊಂಡು ಹತ್ತಿರ ಹತ್ತಿರ ಮೂವತ್ತು ಸಾವಿರ ಪುಟಗಳನ್ನು ನೀಡಿದ್ದಾರೆ. ಇದೊಂದು ಸೋಜಿಗ, ಒಂದು ವೇಳೆ ತಮ್ಮ ಸಮಾಜವನ್ನೆಲ್ಲ ದೇಜಗೌ ಬರೆಹಕ್ಕೆ ಮೀಸಲಿರಿಸಿದ್ದರೆ ಅವರು ಇನ್ನೆಷ್ಟು ಬರೆಯುತಿದ್ದರೋ ಊಹಿಸುವುದು ಕಷ್ಟ. ಆದರೆ ಹಲವು ಪಾತ್ರಗಳನ್ನು ಅವರು ನಿಭಾಯಿಸಿರುವುದರಿಂದಲೇ ನಮ್ಮ ಸಮಾಜದಲ್ಲಿ ಅವರು ಅತ್ಯಂತ ಗಣ್ಯರು. ಗೌರವಾನ್ವಿತರೂ ಆಗಿದ್ದಾರೆಂಬುದನ್ನು ನಾವು ಮರೆಯುವಂತಿಲ್ಲ. ಅವರು ನಿರ್ವಹಿಸಿರುವ ಕೆಲಸವನ್ನು ಇನ್ನೊಬ್ಬರು ನಿರ್ವಹಿಸುವುದು ಅಸಾಧ್ಯದ ಮಾತು. ಆದ್ದರಿಂದಲೇ ಅಪಾರವಾದ ಲೋಕಾನುಭವವನ್ನು ಅವರು ಗಳಿಸಿರುವುದು. ಸುದೈವದಿಂದ

ಆ ಲೋಕಾನುಭವವೆಲ್ಲ ಅಕ್ಷರರೂಪ ತಾಳಿ ನಮಗೆ ಲಭ್ಯವಾಗಿದೆ. ಒಂದು ಪುಟ್ಟ ಗ್ರಂಥಾಲಯ ತುಂಬುವಷ್ಟು ಪುಸ್ತಕಗಳನ್ನು ಅವರು ಬರೆದಿದ್ದಾರೆ. ಇಂಥ ಕ್ಷೇತ್ರದ ಮೇಲೆ ಅವರು ಬೆಳಕು ಚೆಲ್ಲಿಲ್ಲ ಎನ್ನುವ ಹಾಗಿಲ್ಲ; ಎಲ್ಲ ಜ್ಞಾನವಲಯಗಳ ಮೇಲೂ ಬೆಳಕು ಚೆಲ್ಲಿದ್ದಾರೆ, ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ.

ನಮ್ಮ ನೆರೆಹೊರೆಯ ಭಾಷೆಗಳಲ್ಲಿ, ಅಷ್ಟೇ ಏಕೆ ಇಡೀ ಇಂಡಿಯಾದಲ್ಲೂ ಇಷ್ಟು ವಿಪುಲವಾಗಿ ಬರೆದಿರುವ ಇನ್ನೊಬ್ಬ ಲೇಖಕ, ಚಿಂತಕ ನಮಗೆ ಕಾಣಸಿಗುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವುಗಳು ಗಮನಿಸಿದಂತೆ ದೇಜಗೌರವರು ಎಲ್ಲಾ ವಿಚಾರಗಳ ಬಗ್ಗೆ ಚಿಂತನೆ ಮಾಡಿದ್ದಾರೆ. ಸ್ವತಃ ಆದರ್ಶ ಜೀವನವನ್ನು ನಡೆಸಿರುವುದರಿಂದ ಆ ಬಗೆಗೆ ಸಹಮಾನವರಿಗೆ ತಿಳಿಯಹೇಳಿದ್ದಾರೆ. ಅವರೊಬ್ಬ ಮಹಾತ್ಮಗಾಂಧಿಯ ಅಪ್ಪಟ ಅನುಯಾಯಿ ಜೊತೆಗೆ ಏಸು, ಬುದ್ಧರ ಮಾರ್ಗವನ್ನೂ ಅನುಸರಿಸುವಂತೆ ಬುದ್ಧಿವಾದ ಹೇಳಿದ್ದಾರೆ. ಕಾಯಕ ಪ್ರಜ್ಞೆಯ ಬಗ್ಗೆ ಅವರು ನಡುಗಾಲದಿಂದ ಎಚ್ಚರಿಸುತ್ತಾ ಬಂದಿದ್ದಾರೆ. ಶಿಕ್ಷಕರ ಜವಾಬ್ದಾರಿಯನ್ನು ಕುರಿತು ಅತ್ಯಂತ ಕಳಕಳಿಯಿಂದ ಮಾತನಾಡಿದ್ದಾರೆ. ಅಸಂಖ್ಯಾತ ಜವಾಬ್ದಾರಿಯನ್ನು ಕುರಿತು ಅತ್ಯಂತ ಕಳಕಳಿಯಿಂದ ಮಾತನಾಡಿದ್ದಾರೆ. ಅಸಂಖ್ಯಾತ ಮಕ್ಕಳ ಭವಿಷ್ಯ ಬರೆಯುವ ಅಧ್ಯಾಪಕವರ್ಗ ಅಧ್ಯಯನವನ್ನು ಶ್ರದ್ಧೆಯಿಂದ ಕೈಗೆತ್ತಿಕೊಳ್ಳದಿದ್ದ ಪಕ್ಷದಲ್ಲಿ ನಾಡಿಗೆ ಕೇಡುತಪ್ಪದು ಎಂದು ಹೇಳಿದ್ದಾರೆ.

ಸಾಹಿತ್ಯರಚನೆಗೆ ಬದುಕನ್ನು ಮುಡಿಪಾಗಿಟ್ಟು ಈ ಮಹನೀಯರು ಸಾಹಿತ್ಯ ಕುರಿತಾಗಿ ಆಡಿರುವ ನುಡಿಗಳು ಮುಕ್ಕಾಗದ ಸೊಬಗಿನಿಂದ ಶೋಭಿಸುತ್ತಿವೆ. ಇಹಪರವೆರಡರ ಸುಖಸಾಧನೆ ಸಾಹಿತ್ಯದ ಗುರಿ, ಸಾವಿರಾರು ವರ್ಷಗಳಿಂದ ಮಾನವನ ಜೀವನವನ್ನು ಸಂಸ್ಕಾರಗೊಳಿಸುತ್ತಾ ಬಂದಿರುವುದು ಸಾಹಿತ್ಯ ಮಾನವನಿಗೆ ಸಾಹಿತ್ಯವು ಕಾಮಧೇನುವಾಗಿ, ಚಿಂತಾಮಣಿಯಾಗಿ ಆತನ ಬಯಕೆಯನ್ನು ಈಡೇರಿಸುತ್ತಾ ಬಂದಿದೆ. "ಸಾಹಿತ್ಯ ಮತ್ತು ಧರ್ಮದ ಸಂಬಂಧವನ್ನು ನಮಗೆ ಕಾಣಿಸುತ್ತಾರೆ. ಏಕೆಂದರೆ ಧರ್ಮವನ್ನು ಸಾಹಿತ್ಯದಿಂದ ಬೇರ್ಪಡಿಸಿದರೆ ಅದರಿಂದ ಆಗುವ ಅನಾಹುತ ಅಷ್ಟಿಷ್ಟಲ್ಲ. ದೇಜಗೌ ಅವರ ದೃಷ್ಟಿಯಲ್ಲಿ ಧರ್ಮವೆಂಬುದು ವ್ಯಕ್ತಿಗಳನ್ನು ಸಂಕುಚಿತ ವಲಯಗಳಲ್ಲಿ ಸೆರೆಯಾಳಾಗಿಸುವ ಸಾಧನವಲ್ಲ. ಬದಲಿಗೆ ಅದು ಆಧ್ಯಾತ್ಮದ ಹಾದಿಯನ್ನು ಅರುಹಿ ವ್ಯಕ್ತಿಯ ಸರ್ವತೋಮುಖ ವಿಕಸನಕ್ಕೆ ನಾಂದಿ ಹಾಡುವಂಥದ್ದು.

ಸರಸ್ವತಿಯ ಆರಾಧಕರಾಗಿ ದೇಜಗೌ "ಪುಸ್ತಕ ಸಂಸ್ಕೃತಿ"ಯನ್ನು ಕುರಿತು ಹೇಳಿರುವ ಮಾತುಗಳು ಅತ್ಯಂತ ಅರ್ಥಗರ್ಭಿತವಾಗಿವೆ. ತಮ್ಮ ಬದುಕಿನ ಆರಂಭದಲ್ಲಿ ಅವರು ಬೆಳೆದದ್ದು ಪುಸ್ತಕರಹಿತ ವಾತಾವರಣದಲ್ಲಿ. ಅವರೇ ಹೇಳುವಂತೆ "ಮುವತ್ತೊಂದನೆಯ ವಯಸ್ಸಿನವರೆಗೆ ಹೆಚ್ಚಿಗೆ ಏನನ್ನೂ ಓದಿಕೊಂಡಿರಲಿಲ್ಲ". ಕವಿ ಕುವೆಂಪುರವರ ಸಂಪರ್ಕ ಹಾಗೂ ಸಂಸರ್ಗ ದೇಜಗೌ ಅವರ ಜೀವನ ಧೋರಣೆಯನ್ನೇ ಬದಲಿಸಿತು. ಕಳೆದು ಹೋದ ಕಾಲವನ್ನು ದ್ವಿಗುಣವಾದ ಶ್ರಮದಿಂದ ಮರಳಿ ಪಡೆಯುವ ಸಂಕಲ್ಪದಿಂದ ಹೆಚ್ಚು ಹೆಚ್ಚು ಓದತೊಡಗಿದರು. ಓದಿದ್ದನ್ನು ಅರಗಿಸಿಕೊಂಡರು. ತಮ್ಮ ಭಾವಕೋಶದ ಒಂದು ಭಾಗವಾಗಿಸಿಕೊಂಡರು. ಹಾಗಾಗಿ ಲೋಕದಲ್ಲಿನ ಎಲ್ಲ ಸಂಗತಿಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯ. ಆಲೋಚನೆಮಾಡುವ ತೆರದಲ್ಲಿ ಅಂತಃರಂಗವನ್ನು ವಿಕಸಿಸಿಕೊಂಡರು. ಪುಸ್ತಕ ಸಂಸ್ಕೃತಿಯಿಂದ ತಮ್ಮ ವ್ಯಕ್ತಿತ್ವವನ್ನು ಔನ್ನತ್ಯಕ್ಕೆ ತೆಗೆದುಕೊಂಡು ಹೋದ ದೇಜಗೌ ಇತರರೂ ಆ ಸುಖ ಹಾಗೂ ಯಶಸ್ಸನ್ನು ತಮ್ಮದಾಗಿಸಿಕೊಳ್ಳಲಿ ಎಂಬ ಕಾಳಜಿಯನ್ನು ಪ್ರದರ್ಶಿಸಿದ್ದಾರೆ. 'ಪುಸ್ತಕಗಳಿಲ್ಲದ ನಾಗರಿಕತೆಗಾಗಲಿ; ಸಂಸ್ಕೃತಿಗಾಗಲಿ ಉಳಿವಿಲ್ಲ' ಎಂಬುದು ಅವರ ಸ್ಪಷ್ಟ ಅಭಿಮತ. ಗ್ರಂಥಾಲಯದ ಬಗ್ಗೆ ಅವರು ಎಂಥ ಮಾತನ್ನಾಡಿದ್ದಾರೆ ಎಂದರೆ ಗ್ರಂಥಾಲಯವೊಂದು ಪವಿತ್ರ ತೀರ್ಥಸ್ಥಾನ, ಎಲ್ಲ ಕಾಲದೇಶಗಳಿಗೂ ಸಂಗಮ ಸ್ಥಾನವದು. ಲೋಕದ ಸಮಸ್ತ ಕವಿ, ಸಾಧು, ಸಂತ, ವಿಜ್ಞಾನಿ, ಮಹಾಪುರುಷರ ರಾಜಮಹಾರಾಜರ, ಮಹಾಯೋಧರ, ಕಲಾವಿದರ ನಿತ್ಯ ಸಮ್ಮೇಳನ ಅಲ್ಲಿ ಜರುಗುತ್ತದೆ. ಅಲ್ಲಿ ಭೌಗೋಳಿಕ ಜನಾಂಗಿಕ ಭೇದಗಳಿಲ್ಲ. ಜಾತಿ, ಕುಲ, ವಂಶ ವರ್ಣಗಳ ವ್ಯತ್ಯಾಸವಿಲ್ಲ. ಅಲ್ಲಿಗೆ ಬಂದು ಜ್ಞಾನತೀರ್ಥದಲ್ಲಿ ಮಿಂದವರು ಮನದ ಕೊಳಕನ್ನು ಕಳೆದುಕೊಂಡು ಶುಭ್ರರಾಗುತ್ತಾರೆ. ಗ್ರಂಥದ ಬಗ್ಗೆ ಗ್ರಂಥಾಲಯದ ವಿಷಯವಾಗಿ ಹಲವರು ಬೇರೆ ಬೇರೆ ನಿರೂಪಗಳನ್ನು ನೀಡಿರಬಹುದು. ಆದರೆ ದೇಜಗೌ ನೀಡಿರುವ ವ್ಯಾಖ್ಯೆ ಅತ್ಯಂತ ಸಮಪರ್ಕವೂ, ಸಮಗ್ರವೂ ಆಗಿದೆ. ಆದರೆ ದೇಜಗೌ ನೀಡಿರುವ ವ್ಯಾಖ್ಯೆ ಅತ್ಯಂತ ಸಮರ್ಪಕವೂ, ಸಮಗ್ರವೂ ಆಗಿದೆ.

ಇದರಿಂದ ನಮಗೆ ತಿಳಿಯುವುದೇನೆಂದರೆ ದೇಜಗೌ ಅವರ ಮನಸ್ಸು ಅಭಿಜಾತ ಕವಿಗಳ ಕೃತಿ ರತ್ನಗಳ ಬಗ್ಗೆ ಕೇಂದ್ರೀಕೃತವಾಗಿ ಅಲ್ಲಿನ ಚಿಂತನೆಗಳನ್ನು ನಮಗೆ ದಕ್ಕಿಸುವಷ್ಟೇ ಆಸ್ಥೆಯಿಂದ ಆಧುನಿಕ ಬದುಕಿಗೆ ಅಗತ್ಯವಾದ ಇಂದಿನ ಆಲೋಚನೆಗಳ ಬಗೆಗೂ ಒತ್ತುಕೊಟ್ಟು ಅಭಿವ್ಯಕ್ತಗೊಳಿಸಿರುವುದು ಪುಸ್ತಕ ಗ್ರಂಥದಿಂದ ವೇದ್ಯವಾಗುತ್ತದೆ. ದೇಜಗೌ ಗ್ರಂಥ

ಪ್ರಪಂಚದಲ್ಲಿ ಇಂಥ ಆಲೋಚನೆಗಳು ಅಸಂಖ್ಯಾತವಾಗಿವೆ. ಒಂದು ಸಂಸ್ಥೆ ಮಾಡಿ ಪೂರೈಸಲಾಗದಷ್ಟು ಕೆಲಸವನ್ನು ಅವರು ಸಾಧಿಸಿದ್ದಾರೆ.

ದೇಜಗೌ ಅವರು ನಿಸರ್ಗ ಹಾಗೂ ದಾರ್ಶನಿಕ ಸಾಹಿತಿ ಮಾತ್ರವಲ್ಲ, ಸಾಮಾಜಿಕ ಪ್ರಜ್ಞೆಯ ಮಹತ್ವಪೂರ್ಣರಾದ ಲೇಖಕರೂ ಹೌದು. ಸಮಾಜದ ಸೂಕ್ಷ್ಮ ವೀಕ್ಷಣೆಯಿಂದ ಸಂಲಬ್ಧವಾದ ಲೋಕಾನುಭವ ಶ್ರೀಮಂತತೆಯನ್ನು ಅವರ ಎಲ್ಲಾ ಕೃತಿಗಳಲ್ಲೂ ಕಾಣಬಹುದು. ದೇಜಗೌ ಅವರ ದೃಷ್ಟಿಯಲ್ಲಿ ಸಮಾಜವೆಂದರೆ ಕೇವಲ ಶ್ರೀಮಂತವರ್ಗಕ್ಕೆ ಮಾತ್ರ ಸೀಮಿತವಾದ ಪ್ರಪಂಚವಲ್ಲ. ಬಹುಸಂಖ್ಯೆಯ ಶ್ರೀಸಾಮಾನ್ಯರನ್ನೊಳಗೊಂಡ ಬೃಹತ್ ಪ್ರಪಂಚ ಶ್ರೀಮಂತರಿಂದ ಬಡವರಿಗೆ, ಬ್ರಾಹ್ಮಣರಿಂದ ಶೂದ್ರರಿಗೆ, ಜಮೀನ್ದಾರರಿಂದ ಆಗುತ್ತಿರುವ ಅನ್ಯಾಯ ಕಿರುಕುಳ ಕೋಟಲೆಗಳ ವಾಸ್ತವ ಚಿತ್ರಣ ದೇಜಗೌ ಅವರ ಸಾಹಿತ್ಯದಲ್ಲಿ ಯಥೇಚ್ಛವಾಗಿ ಕಾಣಸಿಗುತ್ತದೆ. ದೇವರ ಹೆಸರಿನಲ್ಲಿ ಪವಿತ್ರ ಗ್ರಂಥಗಳ ಹೆಸರಿನಲ್ಲಿ ಮಂತ್ರ, ತಂತ್ರಪೂಜೆ ಪುನಸ್ಕಾರಗಳ ಸಂಪ್ರದಾಯದ ಹೆಸರಿನಲ್ಲಿ ಮತಧರ್ಮಗಳ ಹೆಸರಿನಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಶೋಷಣೆಯ ಯಥಾವತ್ತಾದ ವಿವರಣೆಯನ್ನು ದೇಜಗೌ ನೀಡುತ್ತಾರೆ.

ಅಜ್ಞಾನ, ದಾರಿದ್ರ್ಯ ಮೌಢ್ಯಗಳಿಂದ ಕುಸಿದು ಕುಗ್ಗಿ ಕಂಗಾಲಾಗಿರುವ ರೈತರ ಜೀತದಾರರ ಹಾಗೂ ಪಂಚಮರ ಧಾರುಣ ಜೀವನದ ಹೃದಯವಿದ್ರಾವಕ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ದೇಜಗೌ ಅವರು ವರ್ಣಿಸುತ್ತಾರೆ. ಅಂತೆಯೇ ಪುರುಷನ ಹಿಂಸೆ ಕ್ರೌರ್ಯಕ್ಕೊಳಗಾದ ಅಬಲೆಯರ ಸಂಕಟಮಯ ಭೀಕರ ಪರಿಸ್ಥಿತಿಯ ವರ್ಣನೆಯು ಅವರ ಕೃತಿಗಳಲ್ಲಿ ಮಡುಗಟ್ಟಿದೆ. ಸಾಹಿತ್ಯ ಜೀವನದ ಪ್ರಾರಂಭದಲ್ಲಿಯೇ ದೇಜಗೌ ಅವರ ಸಾಮಾಜಿಕ, ಆದರ್ಶ ಜೀವನ ಮಾನವೀಯ ಮೌಲ್ಯಗಳ ಪ್ರಜ್ಞೆಯು ಸಾಮಾನ್ಯ ಜೀವನದ ಸರ್ವಾಂಗಗಳನ್ನು ಬಾಚಿ ತಬ್ಬಿಕೊಳ್ಳುತ್ತವೆ. ಸಾಮಾನ್ಯ ಜನತೆಯನ್ನು ಬಲ್ಲವರ ಮತ್ತು ಬಲಿಷ್ಠರ ಬೌದ್ಧಿಕ ಹಾಗೂ ಆರ್ಥಿಕ ದಾಸ್ಯದಿಂದ ಅವರ ಶೋಷಣೆಯಿಂದ ಪಾರುಮಾಡುವ ಸಲುವಾಗಿ ದೇಜಗೌ ಅವರು ತಮ್ಮ ಭಾಷಣಗಳ ಮೂಲಕ ಲೇಖನಗಳ ಮೂಲಕ ಜನತೆಯನ್ನೆಚ್ಚರಿಸಲು, ಅವರಲ್ಲಿ ನಿರಂಕುಶಮತಿತ್ವವನ್ನು ವೈಚಾರಿಕ ಬುದ್ಧಿಯನ್ನು, ವೈಜ್ಞಾನಿಕ ಮನೋಧರ್ಮವನ್ನು ರೂಢಿಸಲು ಪ್ರಯತ್ನಿಸುತ್ತಾರೆ. ಬಹುಕಾಲದ ದೀರ್ಘಮಂಥನದಿಂದ, ಪ್ರಶಾಂತ ಧ್ಯಾನದಿಂದ ಅನ್ಯಾಯಗಳನ್ನು ಅವಿವೇಕಗಳನ್ನೂ, ಅಜ್ಞಾನ ಜನ್ಯವಾದ ಕ್ರೂರವರ್ತನೆಗಳನ್ನು ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಾಡು, ನುಡಿ, ಸಂಸ್ಕೃತಿಗಳು

ಮೇಲ್ಮಟ್ಟಕ್ಕೆ ಬರಬೇಕೆಂಬ ಹಂಬಲದಿಂದ ಸಮಾಜದಲ್ಲಿ ರೂಢಿಗತವಾಗಿ ಬಂದಿದ್ದ ಹಾನಿಕಾರಕ ಮೌಢ್ಯ ಸಂಪ್ರದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.

ದೇಜಗೌ ಅವರಂತೆ ಸಮಾಜಾಭ್ಯುದಯ, ರಾಷ್ಟ್ರಕಲ್ಯಾಣದ ಚಿಂತನೆಯನ್ನು ಅಂಟಿಸಿಕೊಂಡವರು ತುಂಬಾ ಕಡಿಮೆ. ಮಹಾತ್ಮ ಗಾಂಧೀಜಿಯವರಂತೆಯೇ ದೇಜಗೌ ಅವರು ಅಸ್ಪೃಶ್ಯತೆ ಎಂಬುದು ಈ ದೇಶಕ್ಕೆ ಅಂಟಿಕೊಂಡಿರುವ ಒಂದು ದೊಡ್ಡ ಶಾಪವೆಂದು ಹೇಳುತ್ತಾರೆ. ಅಸ್ಪೃಶ್ಯತೆ ಎಂಬ ಈ ಭಯಾನಕ ರೋಗಕ್ಕೆ ಜಾತಿವಿನಾಶವೇ ಸಿದ್ಧೌಷಧವೆಂದು ದೇಜಗೌ ಅವರ ಅಚಲವಾದ ನಂಬಿಕೆ ಆಂಗ್ಲಭಾಷಾ ಶಿಕ್ಷಣ ಮಾಧ್ಯಮದಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಮಾನಸಿಕ ಹಿಂಸೆಯನ್ನು ದೇಜಗೌ ಅವರು ಎಳೆಯಾಗಿ ಬಿಡಿಸುತ್ತಾರೆ. ವಿದೇಶೀಯ ಭಾಷೆಯ ಮಾಧ್ಯಮದಿಂದಾಗಿ ಪ್ರತಿನಿತ್ಯವೂ ಕೋಟಿಕೋಟಿ ರೂಪಾಯಿ ನಷ್ಟವಾಗುತ್ತಿದೆಯೆಂದು ಅವರು ಅಂದಾಜು ಮಾಡಿದ್ದಾರೆ. ಭಾರಿ ಸಂಖ್ಯೆಯ ವಿದ್ಯಾರ್ಥಿಗಳ ಅನುತ್ತೀರ್ಣತೆಯಿಂದ ಹಣ ನಷ್ಟವಾಗುವುದಿರಲಿ ಬೌದ್ಧಿಕ ಮತ್ತು ಮಾನಸಿಕ ಶಕ್ತಿ ಕುಸಿದ ಅವರು ನಿರಾಶೆಗೆ ಬಲಿಯಾಗುತ್ತಿದ್ದಾರೆ. ಈ ನಿರಾಶೆಯಿಂದಾಗಿ ಇಡೀ ಜೀವನವೇ ಹಾಳಾಗುವ ಸಂಭವವುಂಟು. ಈ ನಷ್ಟವನ್ನು ತುಂಬುವ ಬಗೆ ಹೇಗೆ ಎಂದು ಪ್ರಶ್ನಿಸುತ್ತಾರೆ. ದೇಜಗೌ ಅವರ ಸಾಮಾಜಿಕ ಪ್ರಜ್ಞೆಯೇ ಕನ್ನಡ ನಿಷ್ಠೆಯಿಂದಾಗಿ ಪರಿಣಮಿಸಿದೆ. ಸೆಕ್ಯೂಲರ್ ರಾಷ್ಟ್ರವೆಂದು ಹೇಳಿಕೊಂಡು ಮಠಾಚಾರ್ಯರಿಗೆ ಮಠಾಧಿಪತಿಗಳಿಗೆ ನೀಡುತ್ತಿರುವ ಮನ್ನಣೆ ಅಸತ್ಯತೆಯ ಮಟ್ಟಕ್ಕೇರಿದೆ. ಇದು ತೊಲಗದ ಹೊರತು ದೇಶದ ಉದ್ಧಾರ ಸಾಧ್ಯವಿಲ್ಲವೆಂದು ದೇಜಗೌ ಹೇಳುತ್ತಾರೆ.

ಸ್ವತಃ ವಯೋವೃದ್ಧರೂ, ಜ್ಞಾನವೃದ್ಧರೂ ಆದ ದೇಜಗೌ ಅವರು ಇಂದಿಗೂ ಎಂತಹುದೇ ದುಡಿಮೆಗೂ ಸದಾ ಸನ್ನದ್ದರು. ಕಾಯಕವೇ ಕೈಲಾಸವೆಂಬ ಬಸವಣ್ಣನವರ ಮಾತಿನಲ್ಲಿ ಅಚಲವಾದ ನಂಬಿಕೆಯಿಟ್ಟಿರುವವರು. ದೂರದರ್ಶಿತ್ವ ದೇಜಗೌ ಅವರ ಸ್ವಭಾವಜನ್ಯವಾದ ಗುಣ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅವರು ಸ್ಥಾಪಿಸಿರುವ ಪ್ರಮುಖ ಸಂಸ್ಥೆ. ಇದರ ಆಶ್ರಯದಲ್ಲಿ ಶಾಲಾ/ಕಾಲೇಜುಗಳು, ಅಂಗಡಿಮಳಿಗೆಗಳು ನಡೆಯುತ್ತಿದ್ದು ಸುಮಾರು ಒಮದು ಸಾವಿರಕ್ಕೂ ಅಧಿಕ ಮಂದಿ ಉದ್ಯೋಗನಿರತರಾಗಿದ್ದಾರೆ. ಇದು ದೇಜಗೌ ಅವರ ದೂರದರ್ಶಿತ್ವದ ಆಡಳಿತಕ್ಕೆ ಹಿಡಿದ ಕನ್ನಡಿ.

ಕನ್ನಡನಾಡಿನ ಸಂಸ್ಕೃತಿಯ ಭವ್ಯಪರಂಪರೆಯನ್ನು ಪ್ರಸಾರ ಮಾಡಬೇಕಾದದ್ದು ಕರ್ನಾಟಕ ರಾಜ್ಯ ಸರ್ಕಾರದ ಕರ್ತವ್ಯ. ತರುಣ ಯುವಕರ ಪಡೆಯನ್ನು ಕಟ್ಟಿ ಅವರ ಮುಖಾಂತರ ಕನ್ನಡನಾಡು ನುಡಿಯ ಬಗ್ಗೆ ಅಭಿಮಾನ ಮೂಡುವಂತೆ ಮಾಡಬೇಕಾದದ್ದು ಸರ್ಕಾರದ ಆದ್ಯಕರ್ತವ್ಯ ಸರ್ಕಾರ ತನ್ನ ಪತ್ರವ್ಯವಹಾರಗಳು, ಆದೇಶಗಳು ಅಧಿಸೂಚನೆಗಳೆಲ್ಲವನ್ನೂ ಕನ್ನಡ ಭಾಷೆಯಲ್ಲಿಯೇ ಹೊರಡಿಸಬೇಕು. ವಿದೇಶಿಯರೊಡನೆ, ರಾಯಭಾರಿ ಕಚೇರಿಗಳೊಡನೆ ಕೇಂದ್ರ ಹಾಗೂ ಇತರ ರಾಜ್ಯಗಳ ಜೊತೆ ವ್ಯವಹರಿಸುವಾಗ ಮಾತ್ರ ಕನ್ನಡೇತರ ಭಾಷೆಯನ್ನು ಬಳಸಬೇಕೆಂದು ದೇಜಗೌ ತಿಳಿಸುತ್ತಾರೆ. ಕನ್ನಡ ಮಾಧ್ಯಮದ ಶಾಲಾ/ಕಾಲೇಜುಗಳಿಗೆ ಪ್ರೋತ್ಸಾಹ ನೀಡುವುದು ಸರ್ಕಾರದ ಆದ್ಯಕರ್ತವ್ಯವೆಂದು ದೇಜಗೌ ಹೇಳುತ್ತಾರೆ.

ಭಾರತ ದೇಶ ಸೋಮಾರಿಗಳ ಆಶ್ರಯತಾಣವಾಗಿದೆ. ಸಂಬಳ ಮತ್ತು ರಜಾದಿನಗಳು ದಿನೇ ದಿನೇ ಅಧಿಕವಾಗುತ್ತಿರುವುದರಿಂದ ಕೆಲಸಕಾರ್ಯಗಳೆಲ್ಲವೂ ಆಮೆಗತಿಯಲ್ಲಿ ನಡೆಯುತ್ತಿವೆ. ಇಂದು ನೌಕರರು ಸಂಬಳಕ್ಕೋಸ್ಕರ ದುಡಿಯುತ್ತಿದ್ದಾರೆಯೇ ಹೊರತು ದೇಶಕ್ಕೋಸ್ಕರ ಕೆಲಸಮಾಡುವ ನೌಕರರ ಸಂಖ್ಯೆ ತುಂಬಾ ಕಡಿಮೆಯೆಂದು ದೇಜಗೌ ತಿಳಿಸುತ್ತಾರೆ. ಭಾರತವು ಪ್ರಮುಖವಾಗಿ ಧಾರ್ಮಿಕ ಪ್ರಧಾನವಾದ ದೇಶ ಧರ್ಮ ಅಥವಾ ಸಾಹಿತ್ಯದಿಂದ ಮನುಷ್ಯನ ಬದುಕು ಹಸನಾಗುತ್ತದೆಯೆನ್ನುತ್ತಾರೆ.

ಮಹಾಕವಿ ಕುವೆಂಪುರವರ ಪರಮಾಪ್ತ ಶಿಷ್ಯರಾದ ದೇಜಗೌ ಅವರು ತಮ್ಮ ಗುರುಗಳಂತೆಯೇ ವೈಚಾರಿಕತೆಯನ್ನು ತಮ್ಮ ದೇಹದ ರಕ್ತದ ಕಣಕಣಗಳಲ್ಲೂ ಮೈಗೂಡಿಸಿಕೊಂಡವರು. ನಿಖರತೆ ಮತ್ತು ಸ್ಪಷ್ಟತೆ ಅವರ ಬರವಣಿಗೆಯ ಸಹಜಗುಣ. ಕನ್ನಡದ ಶಕ್ತಿಯಾದ ದೇಜಗೌ ಅವರು ಕನ್ನಡ ಭಾಷೆಗೆ ಮತ್ತು ಕನ್ನಡನಾಡಿಗೆ ಧಕ್ಕೆಯೊದಗಿದ ಸಂದರ್ಭದಲ್ಲಿ ತಮ್ಮ ಪ್ರಾಣವನ್ನು ಮುಡುಪಾಗಿಟ್ಟು ಹೋರಾಟ ಮಾಡಿದವರು. ಮಹಾಕವಿ ಕುವೆಂಪು ಅವರ ವಿಚಾರಧಾರೆಯನ್ನು ನಾಡಿನ ಮೂಲೆ ಮೂಲೆಗೂ ತಲುಪಿಸುವ ಕಾಯಕದಲ್ಲಿ ನಿರತರಾಗಿರುವವರು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನ ಮಾನ ದೊರಕಿಸಿಕೊಡುವ ನಿಟ್ಟಿನಲ್ಲಿ ಆಮರಾಣಾಂತ ಉಪವಾಸ ಸತ್ಯಾಗ್ರಹವನ್ನು ಮಾಡಿ ಜಯಶೀಲರಾದವರು. ತಾವು ಎಷ್ಟೇ ಎತ್ತರಕ್ಕೆ ಏರಿದರೂ ಅದೆಲ್ಲವೂ ಗುರುಕೃಪೆಯಿಂದ ಸಾಧ್ಯವಾಯಿತು ಎಂದು ವಿನೀತ ಭಾವದಿಂದ ನುಡಿಯುತ್ತಾರೆ. ಇನ್ನು ಮುಂದುವರಿದ

ದೇಜಗೌ ಈ ರೀತಿಯಾಗಿ ಸಾಹಿತ್ಯದ ಬಗ್ಗೆ ಅವರು ಈ ರೀತಿಯಾಗಿ ವಿವೇಚಿಸುತ್ತಾರೆ. "ಮನುಷ್ಯ ಸಾಧಿಸಬೇಕಾದ ಮಹಾಕಾರ್ಯಗಳಲ್ಲಿ ಧರ್ಮ ಪ್ರಮುಖವಾದ್ದರಿಂದ ಅದು ಸಾಹಿತ್ಯದ ವಸ್ತುವಾಗುವುದಲ್ಲದೆ ಪ್ರೇರಕ ಶಕ್ತಿಯೂ ಆಗುತ್ತದೆ. ಕಾವ್ಯದ ಅನೇಕ ಪ್ರಯೋಗಗಳಲ್ಲಿ 'ಶಿವೇತರ ರಕ್ಷತೆಯೇ' ಅತ್ಯಂತ ಮುಖ್ಯವಾದುದ್ದೆಂಬುದನ್ನು ಯಾರೂ ಮರೆಯುವಂತಿಲ್ಲ. ಎಲ್ಲ ಭಾರತೀಯ ಸಾಹಿತ್ಯಗಳಲ್ಲಿ ನಾವು ಗುರುತಿಸಬಹುದಾದ ಸರ್ವೇಸಾಮಾನ್ಯ ಲಕ್ಷಣಗಳಲ್ಲಿ ಇದು ಪ್ರಧಾನವಾದದ್ದು.

ಧಾರ್ಮಿಕ ವಿಚಾರಗಳಿಂದ ವಂಚಿತವಾದ ಸಾಹಿತ್ಯ ಸಾಹಿತ್ಯವಲ್ಲವೆಂಬ ಭಾವನೆಯು ಕೆಲವು ಕವಿಗಳಲ್ಲಿಲ್ಲದಿಲ್ಲ. ಮತ ಮತ್ತು ಧರ್ಮ ಎಂಬ ಪದಗಳಿಗೆ ಬೇರೆ ಬೇರೆ ಅರ್ಥವಿದ್ದರೂ ಅನೇಕ ವೇಳೆ ಅವೆರಡೂ ಅಭಿನ್ನವೆಂಬಂತೆ ಬಳಸುವುದುಂಟು. ಧರ್ಮತಿರುಳು, ಮತಕರಟ ಅಥವಾ ಸಿಪ್ಪೆಯೆನ್ನುವುದಾದರೆ ಒಂದು ವಿಚಾರ ಮತ್ತೊಂದು ಆಚಾರವೆನ್ನುವುದಾದರೆ ಅವುಗಳ ಪರಸ್ಪರ ಸಂಬಂಧವನ್ನು ಸ್ಥೂಲವಾಗಿ ವಿವರಿಸಿದಂತಾಗುತ್ತದೆ. ನಮ್ಮ ಬದುಕನ್ನು ರೂಪಿಸುವ, ಪ್ರೇರಿಸುವ ನಿಯಂತ್ರಿಸುವ ಶಕ್ತಿಯೇ ಧರ್ಮ. ಅದರ ಕೆಲವು ಮೂಲಭೂತಾಂಶಗಳು ಶಾಶ್ವತವಾದರೂ ಹಲವು ಕಾಲದೇಶಾನುಗುಣವಾಗಿ ವ್ಯತ್ಯಾಸ ಹೊಂದುತ್ತವೆ. ಹೀಗಾಗಿ ಹಿಂದೂ ಧರ್ಮ ನೆರೆಹೊರೆಯ ಧರ್ಮಗಳ ಸಾರವನ್ನು ಹೀರಿಕೊಂಡು ಕಾಲಕಾಲಕ್ಕೆ ಬದಲಾವಣೆಯಾಗಿರುವುದುಂಟು. ಅದು ಯಾವೊಬ್ಬ ವ್ಯಕ್ತಿಯೂ ಸಂಸ್ಥಾಪಿಸಿದ್ದಲ್ಲ. ಜಾನಪದ ಮೂಲದಿಂದ ಉದ್ಭವವಾದ ಅದು ಸಾಧು ಸಿದ್ದ ಆಚಾರ್ಯ ವಿದ್ವಾಂಸರ ನಾನಾ ವಿಧವಾದ ಕಾಣಿಕೆಯಿಂದಾಗಿ ನೈಜ ಬೃಹಧರ್ಮವಾಗಿ ವಿಕಾಸಗೊಂಡಿದೆ.

ಭಾರತೀಯ ಭಾಷೆಗಳಲ್ಲಿ ಸಾಹಿತ್ಯಕ್ಕೂ ಧರ್ಮಕ್ಕೂ ನಿಕಟಸಂಬಂಧವಿರುವುದರಿಂದ ಸಾಹಿತ್ಯ ಸಮರ್ಥ ಸಾಂಸ್ಕೃತಿಕ ಪ್ರಸಾರ ಮಾಧ್ಯಮವೂ ಅಹುದು. ಸೃಷ್ಟಿಶಕ್ತಿಯೂ ಅಹುದು. ನಿನ್ನೆ ಮೊನ್ನೆಯ ಹಳಸಲನ್ನೇ ಮೆಲುಕು ಹಾಕುವ, ಸಾಹಿತ್ಯ ರೋಗಾಣುಗಳ ತಿಪ್ಪೆಯಾಗುತ್ತದೆ. ಅದು ಸದಾ ಆರೋಗ್ಯವಾಗಿರಬೇಕಾದರೆ, ಸಮಾಜ ಕಲ್ಯಾಣ ಸಾಧನವಾಗಿರಬೇಕಾದರೆ ಸಾಹಿತ್ಯ ಮತ್ತು ಧರ್ಮ ಎರಡೂ ಜೊತೆಯಲ್ಲಿಯೇ ಸಾಗಬೇಕು. ದೇಜಗೌಡರವರು ಶಿಕ್ಷಣದ ಬಗ್ಗೆ ಹಲವಾರು ರೀತಿಯಲ್ಲಿ ಚಿಂತಿಸಿದ್ದಾರೆ. ಅವುಗಳೆಂದರೆ ಅವರೇ ಹೇಳುವ ಹಾಗೆ ಶಿಕ್ಷಣದಲ್ಲಿನ ಪ್ರಮುಖ ನೀತಿಯಾದ ಭಾಷಾ ನೀತಿಯನ್ನು ನಿರೂಪಿಸಿ ಕಾರ್ಯಾನ್ವಯ ಮಾಡುವುದನ್ನು

ಕುರಿತು ಚಿಂತನ – ಮಂಥನೆಯಲ್ಲಿ ದೇಜಗೌ ತಮ್ಮ ಶೈಕ್ಷಣಿಕ ಬದುಕಿನ ಬಹಳಷ್ಟು ಭಾಗವನ್ನು ಕಳೆದಿದ್ದಾರೆ. ದೇಶಭಾಷೆಗಳು ಸಮರ್ಪಕವಾಗಿ ಬೆಳೆದಿಲ್ಲ ಎಂಬ ಪ್ರಗತಿ ವಿರೋಧಿಗಳ ವಾದ ವಿವಾದಗಳನ್ನು ಖಂಡ ತುಂಡವಾಗಿ ಖಂಡಿಸುತ್ತಾರೆ. ಜ್ಞಾನ ಸಂಪಾದನೆಯೇ ಶಿಕ್ಷಣದ ಗುರಿಯಾಗಿದ್ದು ಮಾತೃಭಾಷೆಯ ಮೂಲಕದ ಬೋಧನೆಯಿಂದ ಅಥವಾ ಓದಿನಿಂದ ವಿದ್ಯಾರ್ಥಿಗಳ ಗ್ರಹಣ ಶಕ್ತಿ ಹೆಚ್ಚಾಗುತ್ತದೆ ಎನ್ನುತ್ತಾರೆ. ಕರ್ನಾಟಕದಲ್ಲಿ ಕನ್ನಡ, ಆಂಧ್ರದಲ್ಲಿ ತೆಲುಗು, ಉತ್ತರ ಪ್ರದೇಶದಲ್ಲಿ ಹಿಂದಿ ಶಿಕ್ಷಣ ಮಾಧ್ಯಮವಾಗಿರಬೇಕೆಂಬುದೇ ದೇಜಗೌ ಅವರ ವಾದ. ಕನ್ನಡ ಮಾಧ್ಯಮದ ವಿಕಾಸಕ್ಕೆ ಬೇಕಾದಂತಹ ಪಠ್ಯಪುಸ್ತಕ ಮುಂತಾದ ಪರಿಕರಗಳನ್ನು ಒದಗಿಸಲು ಶ್ರಮಿಸಿದರು. ಭಾರತದ ಪ್ರತಿರಾಜ್ಯದಲ್ಲೂ ಸಂವಿಧಾನದಲ್ಲಿ ಉಲ್ಲೇಖಿತವಾಗಿರುವ ಭಾಷೆಗಳ ಪಂಡಿತ ಮಂಡಲಿಯನ್ನು ನೇಮಿಸಿದರೆ ಅವರು ತಮ್ಮ ತಮ್ಮ ಭಾಷೆಯ ಸಾಂಸ್ಕೃತಿಕ ರಾಯಭಾರಿಗಳಾಗಿ ಕೆಲಸ ಮಾಡುತ್ತಾರೆಂದು ದೇಜಗೌ ಹೇಳುತ್ತಾರೆ. ತಮ್ಮ ಭಾಷೆಯ ಸಾಹಿತ್ಯದ, ಪ್ರಾದೇಶಿಕ ವೈವಿಧ್ಯತೆಯ ಪರಿಚಯ ಮಾಡಿಕೊಟ್ಟಾಗ, ಅವರೆಲ್ಲ ಆಯಾ ಪ್ರದೇಶಗಳ ಭಾಷೆಗಳನ್ನು ಕಲಿತು ನೇರವಾಗಿ ಮೂಲ ಭಾಷೆಯಿಂದಲೇ ಅನುವಾದ ಮಾಡತೊಡಗಿದಾಗ ನಮ್ಮ ನಮ್ಮಲ್ಲಿರುವ ದೂರದ ಅಂತರ ಕಡಿಮೆಯಾಗುತ್ತದೆ ಎನ್ನುತ್ತಾರೆ. 'ವಿವಿಧತೆಯಲ್ಲಿ ಏಕತೆ' ಎಂಬ ಮಾತಿಗೆ ಅರ್ಥ ಬರುತ್ತದೆಂದು ಹೇಳುತ್ತಾರೆ. ಕನ್ನಡ ಬೇರೆ ರಾಜ್ಯಗಳಿಗೆ ಹೋದಾಗ ಅಲ್ಲಿಯ ಭಾಷೆಗಳಿಗೆ ಪೂರಕವಾಗಿರಬೇಕು ಎಂದು ಪ್ರತಿಪಾದಿಸುತ್ತಾರೆ. ಕನ್ನಡವನ್ನೇ ಸರ್ವಸ್ವವೆಂದು ಭಾವಿಸುವ, ಕನ್ನಡದಲ್ಲದ್ದನ್ನು ಸಾರಾ ಸಗಟಾಗಿ ಧಿಕ್ಕರಿಸುವ ಕಾಠಿಣ್ಯ ಮನಸ್ಸಿನವರಂತೆ ದೇಜಗೌ ಕಾಣುತ್ತಾರೆ.

ದೇಜಗೌ ಅವರ ಕನ್ನಡತನ ಹೊಟ್ಟೆಯ ಪಾಡಿಗಾಗಿ ಪ್ರೇರಿತವಾದುದಲ್ಲ. ಅವರು 'ಕನ್ನಡಕ್ಕಾಗಿ ಕೈಯೆತ್ತು' ಎನ್ನುವ ಹದಿನಾರು ಭಾಷಣಗಳ ಸಂಕಲನವನ್ನು ಪ್ರಕಟಿಸುವ ಕಾಲಕ್ಕಾಗಲೇ ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದರು. ದೇಜಗೌ ಅವರ ಅಂತರಂಗದ ತುಡಿತ 'ಕನ್ನಡಕ್ಕಾಗಿ ಕೈಯೆತ್ತು' ಎನ್ನುವ ಪುಸ್ತಕದಲ್ಲಿ ಕಂಡುಬರುತ್ತದೆ. ಕನ್ನಡದ ನಿಜ ಕುಲಪತಿಗಳೆಂಬ ನಿಜ ನಾಮಧ್ಯೇಯರಾಗಿ ದೇಜಗೌ ಅವರು ಭಾಷಾ ಪ್ರೀತಿಗೆ ಅಡ್ಡಿಪಡಿಸುವವರಿಗೆ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

ಹಾ.ಮಾ.ನಾ ಅವರು ದೇಜಗೌ ಅವರು ಕನ್ನಡ ಕೈಂಕರ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಕನ್ನಡ ಕೆಲಸವೆಂದರೆ ಜವರೇಗೌಡರಿಗೆ ಶ್ರಮವಿಲ್ಲ, ಸೋಲಿಲ್ಲ, ಕನ್ನಡ ಲೇಖಕರಿಗೆ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅವರು ದಾರಿ ಬಿಟ್ಟಾದರೂ ಹೋಗುತ್ತಾರೆ. ಕನ್ನಡದ ಲೇಖಕರಿಗೆ ಗೌರವ ಸಂದರೆ, ಕನ್ನಡದಲ್ಲಿ ಒಂದು ಒಳ್ಳೆಯ ಪುಸ್ತಕ ಬಂದರೆ ಅವರು ಅಪಾರವಾಗಿ ಹರ್ಷಿಸುತ್ತಾರೆ. ಕನ್ನಡದ ಬೆಳವಣಿಗೆಗಾಗಿ ಹೊಸ ಹೊಸ ಯೋಜನೆಗಳನ್ನು ಚಿಂತಿಸುತ್ತಲೇ ಇರುತ್ತಾರೆ. ಅವರ ಯಶಸ್ಸಿನ ಗುಟ್ಟು ಅಡಗಿರುವುದು ಅವರು ತಮ್ಮ ಸ್ನೇಹಿತರಲ್ಲಿ ಸಹೋದ್ಯೋಗಿಗಳಲ್ಲಿ ಇಟ್ಟಿರುವ ನಂಬಿಕೆಯಲ್ಲಿ ಭರವಸೆಯಲ್ಲಿ, ಕೆಲಸದ ಕೀರ್ತಿಯ ಹಂಚಿಕೆ ಸಮನಾಗಿ ನಡೆಯಬೇಕೆಂಬುದೇ ಅವರ ಇಚ್ಛೆ" ಎಂದು ಹೇಳುತ್ತಾರೆ. ದೇಜಗೌ ಅವರ ಕನ್ನಡಪರ ಹೋರಾಟ ಹುಂಬತನದ್ದಲ್ಲ, ಯಾರಿಗೋ ಮಾಡಿದ ಹೋರಾಟವಲ್ಲ ತಾತ್ವಿಕ ನೆಲೆಗಟ್ಟನ್ನು ರೂಢಿಸಿಕೊಂಡ ಹೋರಾಟ ಅವರದು, ಅವರ ಕನ್ನಡಪರ ಹೋರಾಟದಲ್ಲಿ ಕನ್ನಡ ಸಂಸ್ಕೃತಿ ಶಿಕ್ಷಣ ಸಮಸ್ಯೆ ಸರ್ಕಾರಕ್ಕೆ ನಿರ್ದೇಶನ, ಕೇಂದ್ರ ರಾಜ್ಯ ಸರ್ಕಾರಗಳ ಸಂಬಂಧ ಇತ್ಯಾದಿ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ.

ಡಾ.ದೇಜಗೌ ಅವರು ಕನ್ನಡದ ಹೋರಾಟಕ್ಕಾಗಿ ಬೀದಿಗಿಳಿದು ಸ್ವತಃ ಹೋರಾಟ ಮಾಡಿದವರು. ಪಾದಯಾತ್ರೆ, ಉಪವಾಸ ಮಾಡಿದವರು. ಚಳುವಳಿಗೆ ಕರೆಕೊಟ್ಟು ಪ್ರಚಾರಕ್ಕಾಗಿ ಪತ್ರಿಕಾ ಕಛೇರಿಗಳಿಗೆ ಹೋದವರಲ್ಲ. ಪತ್ರಿಕೆಗಳ ಮುಖಪುಟದಲ್ಲಿ ತಮ್ಮ ಭಾವಚಿತ್ರ ಬರುವಂತೆ ನೋಡಿಕೊಳ್ಳಲಿಲ್ಲ. ಹೋರಾಟದ ಗುರಿಯನ್ನು ಮುಟ್ಟುವತನಕ ಹಗಲು ರಾತ್ರಿಯೆನ್ನದೆ ದುಡಿದವರು. ಕನ್ನಡಕ್ಕೆ ಅನ್ಯಾಯವಾದಾಗ ಯಾವ, ಯಾರ ಮುಲಾಜಿಗೂ ಒಳಗಾಗದೆ, ಸರ್ಕಾರದ ಬೆದರಿಕೆಯನ್ನು ಲೆಕ್ಕಿಸದೆ, ತಮ್ಮ ನೌಕರಿ ಹೋದರೂ ಚಿಂತೆಯಿಲ್ಲ ಎಂದು ದೃಢನಿರ್ಧಾರವನ್ನು ಮಾಡಿ ಕನ್ನಡ ಪರ ಹೋರಾಟಗಳನ್ನು ಮಾಡಿದವರು.

ಕನ್ನಡಪರ ಹೋರಾಟಗಾರರಿಗೆ ಡಾ.ದೇಜಗೌ ಅವರೇ ಸ್ಫೂರ್ತಿಯಾಗಿರುವುದನ್ನು ಗಮನಿಸಬಹುದು. ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆದಿದೆ. ಬೆಳೆಯುತ್ತಿದೆ. ಬೇರಾವ ಭಾಷೆಗಳಲ್ಲಿಯೂ ಇಷ್ಟೊಂದು ಸಂಖ್ಯೆಯ ಸಾಹಿತಿಗಳಿಲ್ಲ. ಅಕ್ಷರ ಪ್ರಚಾರಕಾರ್ಯಸಮರ್ಪಕವಾಗಿ ಜರುಗಿ ವಿದ್ಯಾವಂತರ ಸಂಖ್ಯೆ ಬೆಳೆದು ಪರಿಸರ

ಫಲವತ್ತಾದಂತೆಲ್ಲ ಸಾಹಿತಿಗಳ ಸಂಖ್ಯೆ ಹಲವು ಮಿಡಿಯಾಗಿ ಸಾಹಿತ್ಯದ ಗಾತ್ರ ಗುಣಗಳು ಈ ಹೊತ್ತಿನ ಕಲ್ಪನೆಗೆ ನಿಲುಕದಷ್ಟು ಎತ್ತರವಾಗಿ ಹಾಗೀ ಬಿತ್ತರವಾಗಿ ಹಿಗ್ಗುತ್ತವೆ. ನಮ್ಮ ಪ್ರಾಚೀನ ಕನ್ನಡ ಸಾಹಿತ್ಯ ಬೆಳೆದದ್ದು ರಾಜಾಸ್ಥಾನಗಳಲ್ಲಿ, ರಾಜರ ಪ್ರೀತ್ಯರ್ಥವಾಗಿ ನಡುಗನ್ನಡ ಸಾಹಿತ್ಯ ಗದ್ದುಗೆಯಿಂದ ಕೆಳಗಿಳಿದು ಶ್ರೀಸಾಮಾನ್ಯರ ಗುಡಿಸಿಲಿನ ತನಕ ಹರಿಯಿತು. ಮತ್ತೆ ಆಧುನಿಕ ಪೂರ್ವ ಯುಗದಲ್ಲಿ ಅದು ಅರಮನೆಯ ಸೆರೆಗೆ ಸಿಕ್ಕಿ ಅದರಿಂದ ಪಾರಾಗಿ ಬರುವ ಹೊತ್ತಿಗೆ ಇಪ್ಪತ್ತನೆಯ ಶತಮಾನ ಉದಯವಾಗಬೇಕಿತ್ತು. ನೆಲದ ಗಾಳಿಯನ್ನು ಮಣ್ಣಿನ ವಾಸನೆಯನ್ನು ಸಾಹಿತ್ಯ ಸೂಸುತ್ತಿರಬೇಕು ಎಂಬ ಅಚಲ ನಂಬಿಕೆ ಇಟ್ಟುಕೊಂಡಿದ್ದರು ದೇಜಗೌರವರು.

ಅಧ್ಯಾಯ ಆರು

ಉಪಸಂಹಾರ

ದೇಜಗೌ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ಗುರುತಿಸಿಕೊಂಡಿರುವ ದೇಜಗೌರವರು ಉಪಕುಲಪತಿಗಳಾಗಿದ್ದಾಗ ಕನ್ನಡದ ಹಲವಾರು ಸಾಹಿತ್ಯ ಪ್ರಕಟಣೆಗೆ ಕಾರಣರಾಗಿದ್ದಾರೆ. ತಮ್ಮ ಭಾಷಣಗಳಲ್ಲಿ ಹಲವಾರು ಶೈಕ್ಷಣಿಕ ಚಿಂತನೆಗಳ ಬಗ್ಗೆ ಪ್ರಸ್ತಾಪ ಮಾಡಿರುವ ಅವರು ಬಿ.ಕಾಂ., ಬಿ.ಸಿ.ಎ.ಗಳಿಗೆ ಕನ್ನಡ ಭಾಷೆ ಕೈಬಿಡುವ ಸಂದರ್ಭ ಬಂದಾಗ ವಿಶ್ವವಿದ್ಯಾನಿಲಯದಲ್ಲಿ ಚರ್ಚಿಸಿ ಕನ್ನಡ ಭಾಷೆಯ ಅಧ್ಯಯನಕ್ಕೆ ಕಾರಣರಾಗಿದ್ದಾರೆ.

ಇಂಥ ಸಾಧಕ ದೇಜಗೌ ಅವರ ಭಾಷಣಗಳಲ್ಲಿ "ಶೈಕ್ಷಣಿಕ ಚಿಂತನೆಗಳು" ಎನ್ನುವ ವಿಷಯವನ್ನು ನಾನು ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿದ್ದು ಇದರಲ್ಲಿ ಒಟ್ಟು ೬ ಅಧ್ಯಾಯಗಳನ್ನು ಮಾಡಿಕೊಂಡು ಒಂದೊಂದು ಅಧ್ಯಾಯವನ್ನು ಕೂಲಂಕಷವಾಗಿ ಚರ್ಚಿಸಿದ್ದೇನೆ.

ಕರ್ನಾಟಕ ರತ್ನ, ನಾಡೋಜ ದೇಜಗೌ ಸ್ವತಃ ಪ್ರಾಧ್ಯಾಪಕರಾಗಿ ಉಪಕುಲಪತಿಗಳಾಗಿ ಶೈಕ್ಷಣಿಕ ಸಂಸ್ಥೆಗಳ ಹುಟ್ಟುಹಾಕಿದ ಶೈಕ್ಷಣಿಕ ಸಲಹೆಗಾರರಾಗಿ ಕನ್ನಡನಾಡು ನುಡಿಗೆ ಸಲ್ಲಿಸಿದ ಸೇವೆ ಚಿರಸ್ಥಾಯಿ. ಶತಮಾನದ ಹೊಸ್ತಿಲಲ್ಲಿ ನಿಂತು, ವಯೋಸಹಜ ಅನೇಕ ದೈಹಿಕ ಬೇನೆಗಳಿದ್ದರೂ ಅದನ್ನು ಮೆಟ್ಟಿ ಈಗಲೂ ಕನ್ನಡದ ಕೆಲಸವೆಂದರೆ ಸಾಕು ಕಾರ್ಯಗತಗೊಳಿಸಲು ಸದಾ ಸಿದ್ಧ.

ಇಂಥ ಮಹಾನ್ ಶಿಕ್ಷಣತಜ್ಞ ಶೈಕ್ಷಣಿಕ ವಲಯದ ಸಲಹೆಗಾರರಾದ ಡಾ. ದೇ.ಜವರೇಗೌಡರವರು ಪ್ರಸ್ತುತ ಮೈಸೂರಿನ ಜಯಲಕ್ಷ್ಮೀಪುರಂನ ತಮ್ಮ ಮಗನ ಮನೆಯಲ್ಲಿ ವಾಸವಾಗಿದ್ದಾರೆ. ಕನ್ನಡದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇತ್ತೀಚೆಗೆ ಇವರ ಹಲವಾರು ಗ್ರಂಥಗಳು ಪುನರ್‌ಮುದ್ರಣಗೊಂಡಿವೆ.

ಒಟ್ಟಾರೆ ನೂರರ ಪ್ರಾಯದ ಸಂದರ್ಭದಲ್ಲಿಂದೂ ಕನ್ನಡ, ಕನ್ನಡ ಶಾಲೆ, ಕರ್ನಾಟಕದ ಪ್ರಗತಿ, ಉನ್ನತ ಶಿಕ್ಷಣ, ಸ್ವಾಯತ್ತತೆ ಶಿಕ್ಷಣದ ಗುಣಮಟ್ಟ ಕುರಿತಂತೆ ದೇಜಗೌ ಅಪಾರ ಕಾಳಜಿ, ಆಸಕ್ತಿ ಹೊಂದಿದ್ದಾರೆ. ಉನ್ನತ ಶಿಕ್ಷಣದ ಬಗ್ಗೆ ಅವರಿಗಿರುವ ಕಳಕಳಿ, ಅಕ್ಕರೆ, ಆತಂಕ ನಮ್ಮನ್ನೂ ಚಿಂತನೆಗೀಡು ಮಾಡುತ್ತದೆ.

ದೇಜಗೌಡರವರು ರಚಿಸಿರುವ ಕೃತಿಗಳು

ಆತ್ಮಕಥೆ: ಹೋರಾಟದ ಬದುಕು –೧, ಹೋರಾಟದ ಬದುಕು–೨, ನೆನಪಿನ ಬುತ್ತಿ, ಕುಲಪತಿಯ ದಿನಚರಿ, ಕುಲಪತಿಯ ಭಾಷಣಗಳು, ಒಟ್ಟು –೬ ಭಾಗಗಳು.

ಪ್ರವಾಸ ಸಾಹಿತ್ಯ: ಆಫ್ರಿಕಾ ಯಾತ್ರೆ, ಪ್ರವಾಸಿಯ ದಿನಚರಿ, ವಿದೇಶದಲ್ಲಿ ನಾಲ್ಕುವಾರ, ಹಳದಿಕಲ್ಲಿನ ಉದ್ಯಾನ, ಇತರೆ

ಜಾನಪದ ಸಾಹಿತ್ಯ: ಜಾನಪದ ಗೀತಾಂಜಲಿ, ಜಾನಪದ ಅಧ್ಯಯನ, ಜಾನಪದ ವಾಹಿನಿ, ಜಾನಪದ ಸೌಂದರ್ಯ.

ಜೀವನ ಚರಿತ್ರೆಗಳು: ಅಮೆರಿಕಾ ಗಾಂಧಿ, ಕರ್ನಾಟಕದ ರೂವಾರಿ, ಕ್ರಾಂತಿಕಾರಿ ಡಾ. ಅಂಬೇಡ್ಕರ್, ತೀನಂ.ಶ್ರೀ, ಬಸವ ಬೆಳಕು, ರಾಷ್ಟ್ರಕವಿ ಕುವೆಂಪು, ಮುಂತಾದವು.

ಮಕ್ಕಳಸಾಹಿತ್ಯಗಳು: ಅಲ್‌ಬರ್ಟ್ ಐನ್‌ಸ್ಟೀನ್, ಋಷಿಕವಿ ರವೀಂದ್ರರು, ಕನ್ನಡ ನಾಡಿನ ಕವಿ ಇತರೆ,

ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತು ಬರೆದಿರುವ ಕೃತಿಗಳು

ಕುವೆಂಪು ಅವರ ಶಿಕ್ಷಣ ತತ್ವ ವಿಚಾರಗಳು, ಕುವೆಂಪು ದರ್ಶನ ಮತ್ತು ಸಂದೇಶ.

ಕುವೆಂಪು ವಿಶ್ವಮಾನವ ಸಂದೇಶ, ಕುವೆಂಪು ಶೈಲಿ

ಕುವೆಂಪು ಸಾಹಿತ್ಯ, ಶ್ರೀ ರಾಮಾಯಣದರ್ಶನಂ ವಚನ ಚಂದ್ರಿಕೆ ಇತ್ಯಾದಿಗಳು.

ಸಂಶೋಧನೆ–ವಿಮರ್ಶೆ

ಇಣುಕುನೋಟ, ಗದ್ಯಶೈಲಿ, ಗದುಗಿನ ಭಾರತ, ನೂರೆಮಟು ಪುಸ್ತಕಗಳು, ಬಸವೇಶ್ವರ – ಅಂಬೇಡ್ಕರ್ ಮುಂತಾದವು.

ಅನುವಾದಗಳು: ಅಕ್ಬರ್, ಗುರುನಾನಕ್, ನೆನಪು ಕಹಿಯಲ್ಲ, ಪುನರುತ್ಥಾನ ಮುಂತಾದವು.

ಸಂಪಾದಿತ ಕೃತಿಗಳು: ಗಂಗೋತ್ರಿ, ಸಿರಿಯೊಡಲು, ಸುವರ್ಣಮಂಡ್ಯ, ಸಹ್ಯಾದ್ರಿ, ಪುತಿನ ಅಭಿನಂದನ ಗ್ರಂಥ ಮುಂತಾದವು. ಇನ್ನು ಹಲವಾರು ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ.

ಪರಾಮರ್ಶನ ಗ್ರಂಥಗಳು

೧. ಡಾ. ಎಂ.ವೆಂಕಟೇಶ : *ವಿಚಾರಶೀಲ ದೇಜಗೌ*
ವಿನುತ ಪ್ರಕಾಶನ
೫, ಶ್ರೀವೆಂಕಟೇಶ್ವರ ನಿಲಯ
೯ನೇ ಕ್ರಾಸ್, ಸುಬ್ರಹ್ಮಣ್ಯ ಇಂಡಸ್ಟ್ರೀಸ್ ಹತ್ತಿರ
ಕೃಷಿನಗರ, ಶಿವಮೊಗ್ಗ – ೫೭೭ ೨೦೧.

ಸಮಗ್ರ ಚಿಂತನಕಾರ ದೇಜಗೌ
ವಿನುತ ಪ್ರಕಾಶನ
೫, ಶ್ರೀವೆಂಕಟೇಶ್ವರ ನಿಲಯ
೯ನೇ ಕ್ರಾಸ್, ಸುಬ್ರಹ್ಮಣ್ಯ ಇಂಡಸ್ಟ್ರೀಸ್ ಹತ್ತಿರ
ಕೃಷಿನಗರ, ಶಿವಮೊಗ್ಗ – ೫೭೭ ೨೦೧.

ಕನ್ನಡ ಪ್ರಜ್ಞೆ ಮತ್ತು ದೇಜಗೌ
ವಿನುತ ಪ್ರಕಾಶನ
೫, ಶ್ರೀವೆಂಕಟೇಶ್ವರ ನಿಲಯ
೯ನೇ ಕ್ರಾಸ್, ಸುಬ್ರಹ್ಮಣ್ಯ ಇಂಡಸ್ಟ್ರೀಸ್ ಹತ್ತಿರ
ಕೃಷಿನಗರ, ಶಿವಮೊಗ್ಗ – ೫೭೭ ೨೦೧.

೨. ಎಂ.ಎನ್.ಲಿಂಗಪ್ಪ
ಡಾ. ಟಿ.ಕೆ.ಕೆಂಪೇಗೌಡ : *ಶತಮಾನದ ಹೊಸ್ತಿಲಲ್ಲಿ ದೇಜಗೌ*
ಅಭಿಪ್ರಕಾಶನ
ಎಂ.ಜಿ.ಕೊಪ್ಪಲು, ಹೆಬ್ಬಾಳು ಬಡಾವಣೆ
ಮೈಸೂರು – ೧೭


೩. ದೇಜಗೌ : *ಹೋರಾಟದ ಬದುಕು*
ದೇಜಗೌ ಟ್ರಸ್ಟ್, ವಿಶ್ವಚೇತನ ಕಲಾ ನಿಲಯ
ಜಯಲಕ್ಷ್ಮೀಪುರಂ
ಮೈಸೂರು–೫೭೦ ೦೧೨

೪. ಡಾ. ಟಿ.ಕೆ.ಕೆಂಪೇಗೌಡ : *ಶತಮಾನದ ಹೊಸ್ತಿಲಲ್ಲಿ ದೇಜಗೌ*
ಕಣ್ಣಪ್ರಕಾಶನ
ಕಲಾ ಕನಸು, ನಂ. ೮೯೪
ನಿಸರ್ಗ ಬಡಾವಣೆ
ಒಂದನೇ ಕ್ರಾಸ್, ಚಂದ್ರ ಲೇಔಟ್,
ಬೆಂಗಳೂರು – ೫೬೦ ೦೭೨.

ಕರ್ನಾಟಕ ಕೇಸರಿ
ರಿಯಾ ಏಜೆನ್ಸೀಸ್ ಪುಸ್ತಕ
ವ್ಯಾಪಾರಿಗಳು ಪ್ರಕಾಶಕರು
ಮೈಸೂರು, ೨೦೦೮

ಅನಿಕೇತನದಲ್ಲೊಂದು ವಿಶ್ವಚೇತನ
ಪ್ರಕಾಶಕರು, ಯಡಿಯೂರು
ಸಿದ್ಧಲಿಂಗೇಶ್ವರ ಪ್ರಕಾಶನ
ಮೈಸೂರು, ೨೦೦೯

೫. ದೇಜಗೌ — *ಕುಲಪತಿಗಳ ಭಾಷಣಗಳು*



ಡಾ|| ದೇ. ಜವರೇಗೌಡ

131609

AKSHARA GRANTHALAYA

ACC.NO. 131609